
ರಂಜನೆ ಬೋಧನೆ ಪ್ರಚೋದನೆ

ಗೌರಿ ಲಂಕೇಶ್

ಜನವರಿ 23, 2008 ರೂ. 10/-




ಪರ್ಯಾಯ ವಿವಾದ
ಮಂಡೆ ಬಿಸಿ ಯಾಕ್ರಯ್ಯ?



ಪೇಜಾವರ ವಿರುದ್ಧ

ಹೆಗ್ಗಡೆ ಪಿತೂರಿ



ಈಡಿಗರ ಗುರು ಯಾರು?



ಗೋವಿಂದನ ಕೊನೆಯ ಮಾತುಗಳು

ಮ್ಮ ಶಾಸಕರು ಕಡಿದಿದ್ದೇನು?

ಕುಷ್ಟಗಿ
ಹುನಗುಂದ
ಹರಪನಹಳ್ಳಿ

ಚಾರ್ವಾಕ

- ಶಿವಸುಂದರ್-

ಕೋತಿಗಳು, ಕ್ರಿಕೆಟಿಗರು ಮತ್ತು ದೇಶಪ್ರೇಮ!

ಭಾರತೀಯರ ದೇಶಪ್ರೇಮಕ್ಕೂ ಕ್ರಿಕೆಟ್ಟಿಗೂ ಬಹಳ ಹತ್ತಿರದ ನಂಟು. ಇತ್ತೀಚೆಗೆ ರಾಮಚಂದ್ರ ಗುಹ ಎಂಬ ಅಲೆಬರೆ ಬುದ್ಧಿಜೀವಿ ಬರೆದ ಪುಸ್ತಕ ಒಂದರಲ್ಲಿ ಭಾರತ ದೇಶವನ್ನು ಹಿಡಿದಿಟ್ಟಿರುವುದು ಹಿಂದಿ ಸಿನಿಮಾಗಳು ಮತ್ತು ಕ್ರಿಕೆಟ್ ಆಟ ಎಂದು ಹೇಳಿದ್ದಾರೆ. ಎಂಥ ದೊಡ್ಡ ವಿಪರ್ಯಾಸ!

ಮೂರು ಸಾವಿರ ವರ್ಷಕ್ಕೂ ಹಳೆಯದಾದ ಒಂದು ನಾಗರಿಕತೆಯನ್ನು, ಜೊತೆಗೂಡಿ ಹಂಚಿಕೊಂಡ ಇತಿಹಾಸ ಮತ್ತು ಸಂಸ್ಕೃತಿಗಳು ಒಂದು ದೇಶವಾಗಿ ಬೆಸೆಯಲು ವಿಫಲವಾದಾಗ ಭ್ರಾಮಕ ಸಾಂಸ್ಕೃತಿಕ ಪರಿಕರಗಳೇ ರಾಷ್ಟ್ರೀಯತೆಯನ್ನು ಕಟ್ಟುವ ಸಾಧನಗಳಾಗಿಬಿಡುತ್ತವೆ. ಸಮಾನ ನಾಗರಿಕತೆಯೇ ಇಲ್ಲದಿರುವ ಸಂದರ್ಭದಲ್ಲಿ ಭಾರತ ರಾಷ್ಟ್ರೀಯತೆಯನ್ನು ಮತ್ತು ದೇಶಪ್ರೇಮವನ್ನು ಉದ್ದೀಪನಗೊಳಿಸಲು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಆ ಸಾಲಿನಲ್ಲಿ ಹಿಂದೂ ರಾಷ್ಟ್ರೀಯವಾದ ಒಂದಷ್ಟು ಗೆಲುವನ್ನು ಮತ್ತು ಸೋಲನ್ನು ಅನುಭವಿಸಿದ್ದರೂ ಕ್ರಿಕೆಟ್ ಮಾತ್ರ ಭಾರತ ರಾಷ್ಟ್ರೀಯತೆಗೆ ಅಂಟನ್ನು ಮತ್ತು ನಂಟನ್ನು ಒದಗಿಸುವಲ್ಲಿ ಹಿಂದೂ ರಾಷ್ಟ್ರೀಯವಾದಕ್ಕಿಂತ ಹೆಚ್ಚಿನ ಯಶಸ್ಸನ್ನು ಪಡೆದಿರುವುದು ನಿಜ.

ಹೀಗಾಗಿ ಭಾರತದ ಕ್ರಿಕೆಟ್ ತಂಡದ ಸೋಲು -ಗೆಲುವು, ಮಾನ-ಅಪಮಾನಗಳು ಇಡೀ ರಾಷ್ಟ್ರಾದ್ಯಂತ ಒಂದು ಬಗೆಯ ಉನ್ಮಾದವನ್ನೇ ಕೆರಳಿಸುತ್ತದೆ. 'ಲಗಾನ್' ಚಿತ್ರದಲ್ಲಿ ತೋರಿಸಿದಂತೆ ಕ್ರಿಕೆಟ್ ಕ್ರೀಡಾಂಗಣವೂ ಸ್ವಾತಂತ್ರ್ಯ ಹೋರಾಟದ ರಣಾಂಗಣವಾಗಿ ಬಿಡುತ್ತದೆ. (ಆ ಚಿತ್ರದ ಅದ್ಭುತ ಯಶಸ್ಸು ಇರುವುದೂ ಸಹ ಹಿಂದಿ ಚಿತ್ರ ಮತ್ತು ಕ್ರಿಕೆಟ್ ಎಂಬ ಭಾರತ ರಾಷ್ಟ್ರೀಯತೆಯ ಹೆಮ್ಮೆಗಳನ್ನು ಹದವಾಗಿ ಬೆಸೆದಿದ್ದರಲ್ಲಿ.) ಹೀಗೆ ಭಾರತೀಯ ಕ್ರಿಕೆಟ್ಟಿಗ ಫೀಲ್ಡಿನಲ್ಲಿ ಆಡುವುದು ಕ್ರಿಕೆಟ್ಟನ್ನು ಮಾತ್ರವಲ್ಲ, ಅವನು ಅಲ್ಲಿ ಭಾರತ ರಾಷ್ಟ್ರದ ರಾಯಭಾರಿ. ಹೀಗಾಗಿ ಅಲ್ಲಿ ಅವನಿಗಾಗುವ ಅವಮಾನ ಇಡೀ ರಾಷ್ಟ್ರಕ್ಕೆ ಆಗುವ ಅವಮಾನವೆಂಬಂತೆ ಭಾರತೀಯರು ಭಾವಿಸುತ್ತಾರೆ.


ಭಾರತವನ್ನು ಲೂಟಿ ಮಾಡುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಬ್ರಾಂಡನ್ನು ಹೊತ್ತುಕೊಂಡು, ದುಡ್ಡಿಗಾಗಿ ಆಡುವ ಈ ಸ್ವಾರ್ಥಿ ಆಟಗಾರರು ಭಾರತದ ಅನಧಿಕೃತ ಸಾಂಸ್ಕೃತಿಕ ರಾಯಭಾರಿಗಳಾಗಿ ಬಿಡುವುದು ಭಾರತದ ರಾಷ್ಟ್ರೀಯತೆಯ ದುರಂತಗಳಲ್ಲಿ ಒಂದಾದರೂ ಅದು ಇಂದಿನ ವಾಸ್ತವವಾಗಿ ಬಿಟ್ಟಿದೆ. ಹೀಗಾಗಿ ಕ್ರಿಕೆಟ್ ಮತ್ತು ಕ್ರಿಕೆಟಿಗರು ವಾಸ್ತವದಲ್ಲಿ ಸಾಂಸ್ಕೃತಿಕ ರಾಜಕಾರಣದ ಪಾತ್ರಧಾರಿಗಳೇ ಆಗಿಬಿಟ್ಟಿದ್ದಾರೆ.

ಹೀಗಾಗಿ ಮೊನ್ನೆ ಸಿಡ್ನಿಯಲ್ಲಿ ನಡೆದ ಟೆಸ್ಟ್ ಮ್ಯಾಚಿನಲ್ಲಿ ಆಸ್ಟ್ರೇಲಿಯಾ ತಂಡದ ಆಂಡ್ರ್ಯೂ ಸೈಮಂಡ್ಸ್‌ನನ್ನು ಭಾರತದ ಹರಭಜನ ಸಿಂಗ್ ಕೋತಿ ಎಂದು ಕರೆದು ಜನಾಂಗೀಯ ದೂಷಣೆ ಮಾಡಿದ ಆರೋಪದ ಮೇಲೆ ಮೂರು ಮ್ಯಾಚುಗಳ ನಿಷೇಧಕ್ಕೆ ಒಳಗಾದದ್ದು ಮತ್ತು ಅಂಪೈರ್ ಬಕ್ನರ್ ಪದೇಪದೇ ಅನ್ಯಾಯವಾಗಿ ಭಾರತ ವಿರೋಧಿ ತೀರ್ಪನ್ನು ನೀಡಿದ್ದು ಇಡೀ ದೇಶಾದ್ಯಂತ ಉನ್ಮತ್ತ ರಾಷ್ಟ್ರೀಯವಾದಿ ಪ್ರತಿಕ್ರಿಯೆಯನ್ನು ಕೆರಳಿಸಿದ್ದು ಸಹಜವಾಗಿಯೇ ಇತ್ತು. ಆದರೂ ಅದರಲ್ಲಿಯೂ ಒಂದು ವ್ಯತ್ಯಾಸ ಸ್ಪಷ್ಟವಾಗಿ ಎದ್ದು ಕಾಣುತ್ತಿತ್ತು. ಭಾರತದ ಸಾಮಾನ್ಯ ಜನರು ಹೆಚ್ಚು ಆಕ್ರೋಶದಿಂದ ಪ್ರತಿಕ್ರಿಯಿಸಿದ್ದು ಸೈಮಂಡ್ಸ್‌ನನ್ನು ಕೋತಿ ಎಂದು ಹರಭಜನ್ ಕರೆದಿದ್ದುದರ ಬಗ್ಗೆಯಾಗಲೀ ಅಥವಾ ಅದರಿಂದಾಗಿ ನಿಷೇಧಕ್ಕೆ ಒಳಗಾಗಿದ್ದರ ಬಗ್ಗೆಯಾಗಲೀ ಅಲ್ಲ, ಬದಲಿಗೆ ಜನ ಆಕ್ರೋಶಗೊಂಡಿದ್ದು ಅಂಪೈರ್ ಬಕ್ನರ್ ಸ್ಪಷ್ಟವಾಗಿ ಕೊಟ್ಟ ಅನ್ಯಾಯಯುತವಾದ ತೀರ್ಮಾನಗಳ ಬಗ್ಗೆ. ಆದರೆ ಬಿಸಿಸಿಐ ಇಂದ ಮೊದಲುಗೊಂಡು ಭಾರತದ ಬಹುಪಾಲು ಮಾಧ್ಯಮಗಳು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದು ಹರಭಜನ್ ನಿಷೇಧದ ಬಗ್ಗೆ ಮತ್ತು ಕೋತಿ ಎಂದು ಕರೆದಿದ್ದರೂ ಅದು ಹೇಗೆ ಜನಾಂಗೀಯ ನಿಂದನೆಯಲ್ಲ ಎಂಬ ಬಗ್ಗೆ.


ಕ್ರಿಕೆಟ್ ಆಟದಲ್ಲಿ ಈ ರೀತಿ ಎದುರಾಳಿ ಆಟಗಾರರನ್ನು ಹೀನಾಮಾನ ನಿಂದಿಸುವುದನ್ನು ಸ್ಲೆಡ್ಜಿಂಗ್ ಎಂದು ಕರೆಯುತ್ತಾರೆ. ಇದನ್ನು ಪ್ರಾರಂಭಿಸಿದ್ದೂ ಸಹ ಆಸ್ಟ್ರೇಲಿಯನ್ ಆಟಗಾರರೇ. ಅವರು ಕ್ರಿಕೆಟ್ಟಿನ ಡಿಕ್ಷನರಿಗೆ ನೀಡಿರುವ ಈ ಹೊಸ ಪದಕ್ಕೆ "ಎದುರಾಳಿ ಆಟಗಾರನ ಮೇಲೆ ಕಾಮೆಂಟ್ ಮಾಡುತ್ತಾ ಆತನ ಏಕಾಗ್ರತೆಗೆ ಭಂಗ ತಂದು ಆತ ತಪ್ಪು ಮಾಡುವಂತೆ ಪ್ರಚೋದಿಸುವುದು" ಎಂದರ್ಥ. ಇದನ್ನು ಸಾಧಿಸಲು ಎದುರಾಳಿ ಆಟಗಾರರು ವೈಯಕ್ತಿಕ ನಿಂದನೆ, ದೂಷಣೆ ಇತ್ಯಾದಿಗಳನ್ನು ಬಳಸುತ್ತಾರೆ. ಆದರೆ ಇದು ಒಂದು ಹದ್ದನ್ನು ಮೀರಿ ದಾಟದಂತೆ ನಿಯಂತ್ರಿಸಲು ಹಾಗೂ ಕ್ಷೇತ್ರದಲ್ಲಿ ಮತ್ತು ಹೊರಗಡೆ ಆಟಗಾರರ ವರ್ತನೆಯನ್ನು ಹದ್ದುಬಸ್ತಿನಲ್ಲಿಡಲು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಕೆಲವು ನಿಯಮಗಳನ್ನು ರೂಪಿಸಿದೆ. ಉದಾಹರಣೆಗೆ ಈ ಸ್ಲೆಡ್ಜಿಂಗ್ ಜನಾಂಗೀಯ ದೂಷಣೆ ಆಗುವಂತಿಲ್ಲ. ಆದರೆ ಯಾವ ಬಯ್ಗಳು ಜನಾಂಗೀಯ ನಿಂದನೆಯಾಗುತ್ತದೆ ಎಂಬ ಬಗ್ಗೆ ಯಾವುದೇ ನಿರ್ದಿಷ್ಟ ಮಾನದಂಡಗಳಿಲ್ಲ. ಏಕೆಂದರೆ ಯಾವುದು ಜನಾಂಗೀಯ ನಿಂದನೆ ಎಂಬುದು ಒಂದು ಸಾಂಸ್ಕೃತಿಕ ವಿಷಯವೂ ಆಗಿರುತ್ತದೆ. ಉದಾಹರಣೆಗೆ ಕೋತಿ ಎಂಬುದು ಭಾರತೀಯ ಸಂಸ್ಕೃತಿಯಲ್ಲಿ ನಿಂದನೆಯೇ ಹೊರತು ಜನಾಂಗೀಯ ನಿಂದನೆಯಲ್ಲ. ಅದೇ ರೀತಿ ಬಾಸ್ಟರ್ಡ್-ಸೂಳೆಮಗ ಎಂಬುದು ಪಾಶ್ಚಿಮಾತ್ಯರ ಪದಕೋಶದಲ್ಲಿ ಒಂದು ನಿಂದನೆಯಲ್ಲ. ಅದೇ ರೀತಿ F**K ಎಂಬ ಪದವನ್ನು ಅವರು ವಾಕ್ಯದಲ್ಲಿ ಒಂದೆರಡು ಸಾರಿಯಾದರೂ ಬಳಸುತ್ತಾರೆ. ಅವರ ಸಂಸ್ಕೃತಿಯಲ್ಲಿ ಅದೊಂದು ನಿಂದನೆಯೇ ಅಲ್ಲ.



ಆದರೆ ಇಂದು ಕ್ರಿಕೆಟ್ಟನ್ನು ಹಲವಾರು ಸಾಂಸ್ಕೃತಿಕ ಹಿನ್ನೆಲೆಯುಳ್ಳ ದೇಶಗಳು ಆಡುತ್ತಿವೆ. ಹೀಗೆ ಎಲ್ಲಾ ದೇಶಗಳಿಗೂ ಅನ್ವಯಿಸುವಂಥ ಏಕ ಸಂಸ್ಕೃತಿಯ ಮಾನದಂಡಗಳನ್ನು ಹೇರಲು ಬರುವುದಿಲ್ಲ. ಆದರೆ ಐಸಿಸಿಯ ಹಲವಾರು ನೀತಿಗಳು ಮತ್ತು ಯೋಜನೆಗಳು ರೂಪುಗೊಳ್ಳುವುದೇ ಪಾಶ್ಚಿಮಾತ್ಯ ಮಾನದಂಡಗಳಿಂದ. ಅಷ್ಟು ಮಾತ್ರವಲ್ಲ, ಜನಾಂಗೀಯ ತಾರತಮ್ಯ ಮತ್ತು ಬಿಳಿಯ ಅಹಂಕಾರ ಕ್ರಿಕೆಟ್ಟಿನಲ್ಲಿ ವ್ಯಕ್ತವಾಗುವುದು ಕೇವಲ ನಿಂದನೆ ರೂಪಗಳಲ್ಲಿ ಮಾತ್ರವಲ್ಲ. ಅದು ಐಸಿಸಿಯ ಹಲವಾರು ವ್ಯಾವಹಾರಿಕ ಯೋಜನೆಗಳಲ್ಲೂ ವ್ಯಕ್ತವಾಗುತ್ತದೆ. ಬಾಂಗ್ಲಾ ದೇಶದಂಥ ಹೊಸ ದೇಶಕ್ಕೆ ಟೆಸ್ಟ್ ಸ್ಥಾನಮಾನ ಕೊಡಲು ತೋರಿದ ತಾರತಮ್ಯದಲ್ಲೂ, ಒಂದೇ ಬಗೆಯ ತಪ್ಪುಗಳನ್ನು ಬಿಳಿಯ ರಾಷ್ಟ್ರಗಳು ಮಾಡಿದಾಗ ತೋರುವ ರಿಯಾಯತಿಯಲ್ಲೂ ಮತ್ತು ಬಿಳಿಯೇತರ ರಾಷ್ಟ್ರಗಳು ಮಾಡಿದಾಗ ವಿಧಿಸುವ ಶಿಸ್ತಿನ ಕ್ರಮಗಳಲ್ಲೂ ವ್ಯಕ್ತವಾಗುತ್ತದೆ.



ಆದರೆ ಕ್ರಿಕೆಟೆಂಬುದು ಪಾಶ್ಚಿಮಾತ್ಯರ ಮೋಜಿನ ಆಟವಾದರೂ ಅದು ಅತ್ಯಂತ ಹೆಚ್ಚಿನ ಹಣವನ್ನು ತರುತ್ತಿರುವುದು ಈ ಹಿಂದೆ ಈ ಬಿಳಿಯ ರಾಷ್ಟ್ರಗಳ ವಸಾಹತುಗಳಾಗಿದ್ದ ಭಾರತದಂಥ ಉಪಖಂಡದಲ್ಲಿ. ಅದರಲ್ಲೂ ಜಾಗತೀಕರಣದ ಈ ಕಾಲಘಟ್ಟದಲ್ಲಿ ಭಾರತದ ಆರ್ಥಿಕತೆ ಒಂದು ಪ್ರಮುಖ ಸ್ಥಾನವನ್ನು ಮತ್ತು ಭಾರತದ ಆಳುವವರ್ಗಗಳು ಸಾಮ್ರಾಜ್ಯಶಾಹಿ ದಂಡಿನಲ್ಲಿ ಸಾಮಂತರ ಸ್ಥಾನವನ್ನು ಪಡೆದುಕೊಳ್ಳುತ್ತಿದ್ದಂತೆ ಭಾರತದ ಕುಲೀನ ವರ್ಗದ ಹೊಸ ಸಾಂಸ್ಕೃತಿಕ ಪ್ರತಿಷ್ಠೆಯ ಸಂಕೇತವಾಗಿಯೂ ಭಾರತದ ಕ್ರಿಕೆಟ್ಟು ರೂಪಾಂತರಗೊಳ್ಳುತ್ತಿದೆ. ಅದರಲ್ಲಿ ಒಬ್ಬ ಸಚಿನ್ ತೆಂಡೂಲ್ಕರ್ ಅಂತರರಾಷ್ಟ್ರೀಯ ರೆಕಾರ್ಡು ಮಾಡುವುದು ಒಬ್ಬ ಟಾಟಾ ಯೂರೋಪಿನ ಕಬ್ಬಿಣ ಕಂಪನಿಯನ್ನು ಕೊಳ್ಳುವುದಷ್ಟೇ ಪ್ರಾಮುಖ್ಯವಾದದ್ದು. ಹೀಗಾಗಿ ಇಂದು ಕ್ರಿಕೆಟ್ ಕ್ರೀಡಾಂಗಣದಲ್ಲಿ ಹೊಸ ತಲೆಮಾರಿನ ಯುವ ಆಟಗಾರರು, ಅವರ ಹಿನ್ನೆಲೆ ಏನೇ ಇದ್ದರೂ, ಪ್ರತಿನಿಧಿಸುವ ಜವಾಬ್ದಾರಿ ಹೊತ್ತಿರುವುದು ಈ ನವ ಶ್ರೀಮಂತರ ಭಾರತವನ್ನು.



ಆದರೆ ವಾಸ್ತವವೆಂದರೆ ಈ ನವ ಶ್ರೀಮಂತ ಭಾರತ, ಅಮೆರಿಕ ನೇತೃತ್ವದ ಆಕ್ರಮಣಕಾರಿ ಜಾಗತೀಕರಣ ಹಡೆದ ಹಾದರದ ಕೂಸು. ಹೀಗಾಗಿ ಅದು ಆರ್ಥಿಕವಾಗಿ ಅಮೆರಿಕವನ್ನು ನಕಲು ಮಾಡಿದರೆ ಕ್ರಿಕೆಟ್ಟಿನಂಥ ಆಟಗಳಲ್ಲಿ ಆಸ್ಟ್ರೇಲಿಯಾವನ್ನೇ ನಕಲು ಮಾಡುತ್ತದೆ. ಇಂದು ಭಾರತ, ಬಾಂಗ್ಲಾ ದೇಶ, ಪಾಕಿಸ್ತಾನ, ಶ್ರೀಲಂಕಾ ಇತ್ಯಾದಿ ಭಾರತ ಉಪಖಂಡದ ಎಲ್ಲಾ ಕ್ರಿಕೆಟ್ ತಂಡಗಳ ಕೋಚ್‌ಗಳು ಆಸ್ಟ್ರೇಲಿಯನ್ನರೇ ಆಗಿರುವುದು ಕಾಕತಾಳೀಯವೇನಲ್ಲ. ಆರ್ಥಿಕ ಆಕ್ರಮಣದ ಜಾಗತೀಕರಣದಲ್ಲಿ ಅಮೆರಿಕಕ್ಕಿರುವ ಪಾತ್ರವನ್ನೇ ಕ್ರಿಕೆಟ್ ಎಂಬ ಆಟ ಹಾಗೂ ಸಂಸ್ಕೃತಿಯ ಜಾಗತೀಕರಣದಲ್ಲಿ ಆಸ್ಟ್ರೇಲಿಯಾ ನಿರ್ವಹಿಸುತ್ತಿದೆ. ಹೀಗಾಗಿ ಸಾರಾಂಶದಲ್ಲಿ ಹರಭಜನ್ ಮತ್ತು ಆಂಡ್ರ್ಯೂ ಸೈಮಂಡ್ಸ್ ಜಗಳ ಎರಡು ದೇಶಗಳ ಅಥವಾ ಸಂಸ್ಕೃತಿಗಳ ನಡುವಿನ ಜಗಳದಂತೆ ಕಾಣುವುದೇ ಇಲ್ಲ. ಬದಲಿಗೆ ಅದು ಒಂದು ಯಾಜಮಾನ್ಯ ಸಂಸ್ಕೃತಿಯ ವಕ್ತಾರರ ಒಳಗಿನ ಜಗಳವೆಂಬಂತೆ ಮಾತ್ರ ಕಾಣುತ್ತದೆ.

ಪ್ರತಿ ಆಟಗಳೂ ಕಾಲಾನುಕ್ರಮದಲ್ಲಿ ತಮ್ಮದೇ ಆದ ಸಬ್‌ಕಲ್ಚರ್ ಒಂದನ್ನು ರೂಢಿಸಿಕೊಳ್ಳುತ್ತವೆ. ಆ ಸಬ್‌ಕಲ್ಚರ್ ಅನ್ನು ರೂಪಿಸುವುದು ಅದನ್ನು ಆಡುವ ಆಟಗಾರರು ಮತ್ತು ಅವರ ಹಿನ್ನೆಲೆ ಹಾಗೂ ಅದನ್ನು ಪ್ರಾಯೋಜಿಸುವ ಪ್ರಭುತ್ವ ಮತ್ತು ಮಾಧ್ಯಮಗಳು. ಅದೇರೀತಿ ಕ್ರಿಕೆಟ್ಟು ಸಹ ತನ್ನದೇ ಆದ ಒಂದು ಸಬ್‌ಕಲ್ಚರ್ ಒಂದನ್ನು ಹರಡುತ್ತಿದೆ. ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೆಚ್ಚೆಚ್ಚು ಹಣದ ಹೊಳೆ ಹರಿದು ಬರುತ್ತಿದ್ದಂತೆ ಅದು ಹೆಚ್ಚೆಚ್ಚು ಎಲೈಟ್ ಜನರ ಆಟವೂ ಆಗುತ್ತಿದೆ ಮತ್ತು ಆ ವರ್ಗದ ಸಂಸ್ಕೃತಿ ಮತ್ತು ವಿಕೃತಿಗಳನ್ನು ಮೈಗೂಡಿಸಿಕೊಳ್ಳುತ್ತದೆ. ಕ್ರಿಕೆಟ್ಟನ್ನು ಜೆಂಟಲ್‌ಮ್ಯಾನ್‌ಗಳ ಆಟ ಎನ್ನುತ್ತಿದ್ದರು. ಅದು ಆ ಕಾಲ. ದೇಶದ ರಾಜರುಗಳು, ಕುಲೀನರು ಮತ್ತು ವಸಾಹತುಶಾಹಿಗಳು ಮಾತ್ರ ಆಡುತ್ತಿದ್ದ ಕಾಲ. ಅದನ್ನು ಜೆಂಟಲ್‌ಮ್ಯಾನ್ ಆಟ ಎನ್ನುವಾಗಲೂ ಭಾರತದ ಕಬಡ್ಡಿ ಯೂರೋಪಿನ ಸಾಮಾನ್ಯ ಜನರ ಆಟವಾದ ಫುಟ್‌ಬಾಲ್, ಅಮೆರಿಕದ ಕರಿಯರ ರಗ್ಬಿ ಇವೆಲ್ಲವನ್ನು ಜೆಂಟಲ್‌ಮ್ಯಾನ್ ಆಟ ಅಲ್ಲ ಎನ್ನುವ ವಸಾಹತುವಾದಿ ದೃಷ್ಟಿಯೇ ಇದ್ದಿತ್ತು.

ದುರಂತವೆಂದರೆ ಎರಡನೇ ಮಹಾಯುದ್ಧದ ನಂತರ ಮೊದಲಾದ ನಿರ್ವಸಾಹತೀಕರಣ ಪ್ರಕ್ರಿಯೆಯಲ್ಲಿ ಈ ಬಗೆಯ ವಸಾಹತುವಾದಿ ಸಂಸ್ಕೃತಿಗಳು ಮಾಯವಾಗಬೇಕಿತ್ತು. ಆಫ್ರಿಕಾದ ಕೆಲವು ದೇಶಗಳಲ್ಲಿ ಮಾಯವಾದದ್ದು ಈಗ ನವ ವಸಾಹತುವಾದಿ ಕಾಲಘಟ್ಟದಲ್ಲಿ ಮತ್ತೆ ತಲೆ ಎತ್ತುತ್ತಿದೆ. ಆದರೆ ಭಾರತದಲ್ಲಿ ಮಾತ್ರ ನಿರ್ವಸಾಹತೀಕರಣ ಪ್ರಕ್ರಿಯೆಯು ಯಾವ ಕ್ಷೇತ್ರದಲ್ಲಿ ಪೂರ್ಣಗೊಳ್ಳದಿದ್ದುದಕ್ಕೆ ಕ್ರಿಕೆಟ್ಟು ಅನಧಿಕೃತ ರಾಷ್ಟ್ರೀಯ ಕ್ರೀಡೆಯಾಗಿ ಬಿಟ್ಟಿರುವುದೇ ಸಾಕ್ಷಿ. ಬ್ರಿಟಿಷ್ ವಸಾಹತುವಾದದ ಮುಂದುವರಿಕೆಗೆ ಹೇಗೆ ಇಲ್ಲಿಯ ದೊಡ್ಡ ಬಂಡವಾಳಿಗರು ಮತ್ತು ಊಳಿಗಮಾನ್ಯ ಪ್ರಭುಗಳು ವಾಹಕರಾಗಿದ್ದರೋ ಅದೇ ರೀತಿ ಕ್ರಿಕೆಟ್ಟೆಂಬ ವಸಾಹತುವಾದಿ ಆಟ ಮತ್ತು ಸಂಸ್ಕೃತಿಯ ಉಳಿವು ಮತ್ತು ಬೆಳವಿಗೂ ಇದೇ ವರ್ಗಗಳೇ ವಾಹಕವಾದವು. ಈಗ ಕ್ರಿಕೆಟ್ಟಿನ ಜಾಗತೀಕರಣದ ಕಾಲಘಟ್ಟದಲ್ಲೂ ಅದೇ ವರ್ಗಗಳ ಹೊಸ ಅವತಾರವಾದ ನವಶ್ರೀಮಂತ ವರ್ಗವೇ ಕ್ರಿಕೆಟ್ಟೆಂಬ ನವ ಸಾಂಸ್ಕೃತಿಕ ವಸಾಹತೀಕರಣಕ್ಕೆ ಕ್ರೀಡಾಂಗಣದ ಒಳಗೂ ಹೊರಗೂ ವಾಹಕರಾಗುತ್ತಿದ್ದಾರೆ. ಹೀಗಾಗಿ ಅದು ಕೇಳುತ್ತಿರುವ ಸಂಸ್ಕೃತಿಯನ್ನು ಮೈಗೂಡಿಸಿಕೊಳ್ಳುತ್ತಿದೆ. ಈಗ ಕ್ರಿಕೆಟ್ಟಿನ ಆಕ್ರಮಣಶೀಲ ಜಾಗತೀಕರಣವಾಗುತ್ತಿದ್ದಂತೆ ಸ್ಲೆಡ್ಜಿಂಗ್‌ನಂತ ಅನಾಗರಿಕತೆಯನ್ನೂ ಒಂದು ಮಿತಿಯೊಳಗೆ ಆಟದ ಭಾಗವೇ ಎಂಬಂತೆ ಸಹಜಗೊಳಿಸಲಾಗುತ್ತಿದೆ. ಆದರೆ ಇಂದಿನ ಮಿತಿಯೊಳಗೂ ಆಸ್ಟ್ರೇಲಿಯಾದವರ ವರ್ತನೆ ಸಹನೀಯ ಎಂಬ ಮಿತಿಯನ್ನು ದಾಟಿದ್ದರಿಂದಲೇ ಅದು ಈ ಪ್ರಮಾಣವನ್ನು ಪಡೆದುಕೊಂಡಿದೆ ಮತ್ತು ಅದು ನವಶ್ರೀಮಂತರ ಮತ್ತು ನವವಸಾಹತುವಾದಿಗಳ ಒಂದೇ ಬಗೆಯ ಸಂಸ್ಕೃತಿಯೊಳಗೆ ನಡೆಯುತ್ತಿರುವ ಒಳಜಗಳವೂ ಆದ್ದರಿಂದ ಬೇಗನೆ ಬಗೆಹರಿಯುತ್ತದೆ.

ಆದರೆ ಅದರಾಚೆಗೆ ಯಾಜಮಾನ್ಯ ಸಂಸ್ಕೃತಿಯ ಅಧಿಪತ್ಯವಿಲ್ಲದ ಶುದ್ಧ ಕ್ರೀಡೆಯ ಪ್ರಶ್ನೆ ಮಾತ್ರ ಹಾಗೇ ಉಳಿದುಕೊಳ್ಳುತ್ತದೆ. ■

ನೋ ಕಾಮೆಂಟ್ಸ್

"ಬಂಡವಾಳವಾದಿ ಸಿದ್ಧಾಂತವನ್ನು ಬೆಂಬಲಿಸುವ
ಸದ್ಯದ ಭವಿಷ್ಯದಲ್ಲೇ ತೀವ್ರವಾದ ಪಶ್ಚಾತ್ತಾಪವನ್ನು
ಬೇಕಾಗುತ್ತದೆ."

-ವಿ.ಎಸ್.ಅಚ್ಯುತಾನಂದನ
ಕೇರಳದ ಕಮ್ಯುನಿಸ್ಟ್ ಮುಖ್ಯಮಂ
ಮತ್ತೊಬ್ಬ ಹಿರಿಯ ಕಮ್ಯುನಿ
ಮುಖಂಡ ಜ್ಯೋತಿಬ
ಹೇಳಿಕೆಯ ಬ

"ಗಣಿಗಾರಿಕೆ ನಡೆಸುತ್ತಾ ಜನರ ನೆಮ್ಮದಿಯನ್ನು ಹಾ
ಮಾಡುವುದಲ್ಲದೆ ದೇವರಿಗೂ ನೆಮ್ಮದಿ ಇಲ್ಲದ
ಮಾಡುವುದು ಸರಿಯೇ?"

-ಸಿರಿಯಾಕ್ ಜೋಸೆ
ಮುಖ್ಯ ನ್ಯಾಯಮೂ



"ದಯವಿಟ್ಟು ಕ್ರಿಕೆಟ್ಟನ್ನು ಸಂತ
ಆಟವನ್ನಾಗಿಸಬೇಡಿ. ಅಲ್ಪಸ್ವಲ್ಪ
ಕೀಟಲೆ, ದೂಷಣೆ, ಕ್ಷೇತ್ರದಲ್ಲಿ
ಆಗುತ್ತೆ. ಆಗಲಿ ಬಿಡಿ."

-ಜಗಮೋಹನ್ ದಾಲ್ಮಿಯ

ನಂಬಿದ್ರೆನಂಬಿ ಬಿಟ್ರೆಬಿಡಿ

"ದೇಶದಲ್ಲೆಲ್ಲೂ ಸಾವಯವ ಕೃಷಿಯಲ್ಲಿ ತೊಡಗಿದ
ರೈತರು ಆತ್ಮಹತ್ಯೆ ಮಾಡಿಕೊಂಡಿಲ್ಲ."

-ವಂದನಾ

"ಜನತಾ ಪಕ್ಷ ಗರಿಕೆ ಹುಲ್ಲಿದ್ದಂತೆ. ಈ ಪಕ್ಷವ
ಯಾರಿಂದಲೂ ಮುಗಿಸಲು ಸಾಧ್ಯವಿಲ್ಲ."

-ದೇವೇಗೌ

"ನಾವು ಅಧಿಕಾರಕ್ಕೆ ಬಂದರೆ ರೈತರಿಗೆ ಪುಕ್ಕಟೆ ವಿದು
ಕೊಡುತ್ತೇವೆ."

-ಸದಾನಂದ ಗೌ

ಯಾವ ಭಾರತಕ್ಕೆ ರತ್ನ?



"ನಮ್ಮ ನಾಯಕರಾದ
ವಾಜಪೇಯಿಯವರಿಗೆ ಈ
ಬಾರಿಯ ಭಾರತ ರತ್ನ ಪ್ರಶಸ್ತಿ
ಕೊಡಬೇಕು."

-ವೆಂಕಯ್ಯ ನಾಯ್ಡು
ಬಿಜೆಪಿ ಮುಖಂಡ



"ನಮ್ಮ ಹಿರಿಯ ನಾಯಕರಾದ
ಜ್ಯೋತಿಬಸುರವರಿಗೇ
ಭಾರತ ರತ್ನ ಪ್ರಶಸ್ತಿ
ಕೊಡಬೇಕು."

-ಬಿನಯ್ ಕೋನಾ
ಸಿಪಿಎಂ ಮುಖ



"ದಲಿತರನ್ನು ಹಾಗೂ
ದಮನಿತರನ್ನು
ಮೇಲೆತ್ತುವುದರಲ್ಲಿ
ಅತ್ಯಮೂಲ್ಯ ಕೊಡುಗೆ
ನೀಡಿರುವ ಕಾನ್ಶಿರಾಮರಿಗೂ
ಭಾರತ ರತ್ನ ಪ್ರಶಸ್ತಿ
ನೀಡಬೇಕು."

- ಮಾಯಾ



"ಸಚಿನ್ ತೆಂಡೂಲ್ಕರ್‌ಗೇಕೆ
ಭಾರತ ರತ್ನ ಕೊಡ
ಬಾರದು?"

-ಸಿಎನ್‌ಎನ್-ಐಬಿಎ
ಚಾನೆಲ್ ತನ್ನ ವೀಕ್ಷಕ
ಕೇಳಿದ

'ಭಂಡ'ವಾಳ ವಾದ!

"ನಮ್ಮ ಸಹಭಾಗಿ ಆರ್‌ಎಸ್‌ಪಿ ಪಕ್ಷಕ್ಕೆ ಕಳೆದ ಎಡರ
ಸರ್ಕಾರ ಬಂಡವಾಳಶಾಹಿ ಚೌಕಟ್ಟಿನಲ್ಲಿ ಕೆಲಸ ಮಾಡು
ಎಂದು ಅರ್ಥವಾಗಲಿಲ್ಲ ಅಂದರೆ ಕಳೆದ ಮೂವ
ವರ್ಷಗಳಿಂದ ಅವರು ಎಡರಂಗ ಸರ್ಕಾರದಲ್ಲಿ ಏ
ಮಾಡುತ್ತಿದ್ದರು?"

-ಪ್ರಕಾಶ್ ಕಾರ

ಶತ್ರುವಿನ ಮೂರು ಮುಖಗಳು

"ಪಾಕಿಸ್ತಾನದ ಜನತೆಯ ಇಂದಿನ ಬವಣೆಗೆ ಮೂ
ಕಾರಣಗಳಿವೆ. ಅವು ಅಲ್ಲ, ಅಮೆರಿಕ ಮತ್ತು ಆರ್ಮಿ

-ಪಾಕಿಸ್ತಾನದ ಚಿಂತಕನೊಬ
ಉದ





ಕಂಡಹಾಗೆ

ಯಾಕೆ, ಯಾರಿಗೆ ಈ ಭಾರತರತ್ನ?


ಭಾರತ ರತ್ನ ನಮ್ಮ ದೇಶದ ಸರ್ಕಾರ ನೀಡುವ ಅತ್ಯುತ್ತಮ ನಾಗರಿಕ ಪ್ರಶಸ್ತಿ. ಇಲ್ಲಿಯತನಕ ಬೇರೆ ಎಲ್ಲಾ ರೀತಿಯ ಪ್ರಶಸ್ತಿಗಳ ಸುತ್ತ ಲಾಬಿ, ತಕರಾರು, ವಾದ ವಿವಾದಗಳು ನಡೆಯುತ್ತಿದ್ದರೂ ಭಾರತ ರತ್ನ ಪ್ರಶಸ್ತಿಗಳ ಬಗ್ಗೆ ಇಂತಹ ಮಾತುಗಳು ಕೇಳಿಬಂದಿರಲಿಲ್ಲ. ಆದರೆ ಈ ಬಾರಿ ಈ ಪ್ರಶಸ್ತಿಗಳನ್ನು ನೀಡುವ ಗಣರಾಜ್ಯೋತ್ಸವದ ದಿನ ಹತ್ತಿರವಾಗುತ್ತಿರುವಂತೆ ಇದನ್ನು ತಮ್ಮದಾಗಿಸಿಕೊಳ್ಳಲು ಪೈಪೋಟಿ ನಡೆಯುತ್ತಿವೆ. ಯಾವ ಗಾಂಭೀರ್ಯವೂ ಇಲ್ಲದೆ ಬೀದಿ ಜಗಳದ ಮಟ್ಟಕ್ಕೆ ಬಂದಿರುವ ಈ ಲಾಬಿ ಯತ್ನಗಳ ಹಿಂದೆ ರಾಜಕೀಯ ಕುತಂತ್ರಗಳೂ ಅಡಗಿರುವುದು ಹೇಸಿಗೆ ಹುಟ್ಟಿಸುತ್ತಿವೆ.


ಈ ಲಾಬಿಯನ್ನು ಪ್ರಾರಂಭಿಸಿದ್ದು ಎಲ್.ಕೆ. ಅಡ್ವಾಣಿ ಎಂಬ ಚಡ್ಡಿ. ಬಿಜೆಪಿಯಂತಹ ರಕ್ತಪಿಪಾಸು ಪಕ್ಷಕ್ಕೆ ಮಾನವೀಯ ಮುಖವಾಡ ತೊಡಿಸಿ ಜನರನ್ನು ತಪ್ಪು ದಾರಿಗೆಳೆಯಲು ವಿಫಲ ಯತ್ನ ನಡೆಸಿದ್ದ ವಾಜಪೇಯಿಗೆ ಭಾರತ ರತ್ನ ನೀಡಬೇಕೆಂದು ಅಡ್ವಾಣಿ ಬಹಿರಂಗವಾಗಿ ಅಪ್ಲಿಕೇಷನ್ ಹಾಕಿದ್ದಾರೆ. ಈ ಅಡ್ವಾಣಿಗೆ ಭಾರತದ ಪ್ರಧಾನ ಮಂತ್ರಿ ಆಗುವ ಆಶೆ; ಆ ದಿಕ್ಕಿನಲ್ಲೇ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಗುಜರಾತಿನಲ್ಲಿ ಚುನಾವಣೆಗಳು ನಡೆಯುವ ಮುನ್ನ ಅಡ್ವಾಣಿಯನ್ನು ಒಂದು ಚಿಂತೆ ಕಾಡಲಾರಂಭಿಸಿತು. ಅಕಸ್ಮಾತ್ ಆ ಚುನಾವಣೆಯಲ್ಲಿ ನರಹಂತಕ ನರೇಂದ್ರ ಮೋದಿ ಗೆದ್ದು ಬಂದರೆ, ಮುಂದೆ ತಾನೇ ಪ್ರಧಾನಮಂತ್ರಿ ಸ್ಥಾನಕ್ಕೆ ಬಿಜೆಪಿ ಅಭ್ಯರ್ಥಿ ಎಂದು ಆತ ಘೋಷಿಸಿಕೊಂಡರೆ ತನ್ನ ಕತೆ ಮುಗಿಯಿತೆಂದೇ ಭಾವಿಸಿದ ಅಡ್ವಾಣಿ ತರಾತುರಿಯಲ್ಲಿ ತಾನೇ ಬಿಜೆಪಿಯ ಅಭ್ಯರ್ಥಿ ಎಂದು ಘೋಷಿಸಿಕೊಂಡರು.

ಅಡ್ವಾಣಿ ಸಮಸ್ಯೆ ಏನೆಂದರೆ ಸೀನಿಯಾರಿಟಿಯಲ್ಲಿ ಆತ ಮೋದಿಗಿಂತ ಹಿರಿಯ. ಆದರೆ ಆತನಿಗಿಂತಲೂ ಹಿರಿಯನಾದ ವಾಜಪೇಯಿ ಇನ್ನೂ ಸಕ್ರಿಯ ರಾಜಕೀಯದಿಂದ ಅಧಿಕೃತವಾಗಿ ನಿವೃತ್ತಿಯನ್ನು ಘೋಷಿಸಿಲ್ಲ. ಈಗಾಗಲೇ ವಯಸ್ಸಿನ ಕಾರಣದಿಂದ ವಾಜಪೇಯಿಗೆ ನಿಲ್ಲಲಾಗುವುದಿಲ್ಲ, ನಡೆಯಲಾಗುವುದಿಲ್ಲ, ನೆಟ್ಟಗೆ ಮಾತನಾಡಲಾಗುವುದಿಲ್ಲ. ಆದರೆ ಅವಕಾಶ ಸಿಕ್ಕರೆ ಮತ್ತೊಮ್ಮೆ ತಾನೇಕೆ ಪ್ರಧಾನಿಯಾಗಬಾರದೆಂಬ ಆಶೆ ಮಾತ್ರ ಇನ್ನೂ ಮಾಯವಾಗಿಲ್ಲ. ಆದ್ದರಿಂದ ಹೇಗಾದರೂ ಮಾಡಿ ವಾಜಪೇಯಿ ರಾಜಕೀಯಕ್ಕೆ ಹಿಂದಿರುಗದಂತೆ ನೋಡಿಕೊಳ್ಳಲು, ಆ ಮೂಲಕ ತಾನೇ ಪ್ರಧಾನಮಂತ್ರಿ ಸ್ಥಾನಕ್ಕೆ ಅಭ್ಯರ್ಥಿಯೆಂಬುದನ್ನು ಭದ್ರಪಡಿಸಿಕೊಳ್ಳಲು ಅಡ್ವಾಣಿ "ವಾಜಪೇಯಿಗೆ ಭಾರತ ರತ್ನ ಪ್ರಶಸ್ತಿ ನೀಡಿ" ಎಂದು ಹೇಳಿದ್ದಾನೆ. ಹೇಗಿದ್ದರೂ 'ರತ್ನ'ಗಳು ಅಲಂಕಾರಕ್ಕೆ ಮಾತ್ರವೇ, ದೈನಂದಿನ ಬದುಕಿನ ಬೆವರು, ಧೂಳುಗಳಿಂದ ದೂರ ಇರಬೇಕಾದದ್ದು ಎಂಬ ಲೆಕ್ಕಾಚಾರ ಅಡ್ವಾಣಿಯದ್ದು!

ಅಂದಹಾಗೆ ಈ ವಾಜಪೇಯಿಗೆ ಯಾಕೆ ಭಾರತ ರತ್ನ ಪ್ರಶಸ್ತಿ ಕೊಡಬೇಕು?

1942 ರಲ್ಲಿ ಮಹಾತ್ಮಾ ಗಾಂಧಿ ಸ್ವಾತಂತ್ರ್ಯ ಸಂಗ್ರಾಮದ ಭಾಗವಾಗಿ 'ಮಾಡು ಇಲ್ಲವೆ ಮಡಿ' ಆಂದೋಲನಕ್ಕೆ ಕರೆ ನೀಡಿದಾಗ ವಾಜಪೇಯಿಗೆ 16 ವರ್ಷ ವಯಸ್ಸು. ಆದರೆ ಅಷ್ಟೊತ್ತಿಗಾಗಲೇ ಹಿಂದೂ ಮಹಾಸಭಾದ ಸದಸ್ಯನಾಗಿದ್ದ ಈತ ಆ ಸಂಘಟನೆಯ ಆದೇಶದಂತೆ ಸ್ವಾತಂತ್ರ್ಯಕ್ಕಾಗಿ ನಡೆಯುತ್ತಿದ್ದ ಹೋರಾಟದಿಂದ ದೂರ ಉಳಿದಿದ್ದ. ಮಾತ್ರವಲ್ಲ ಭಾಟೇಶ್ವರ ಎಂಬಲ್ಲಿ ನೂರಾರು ಜನ ಸ್ವಾತಂತ್ರ್ಯ ಹೋರಾಟಗಾರರು ದಂಗೆ ಎದ್ದಾಗ ಪೊಲೀಸರಿಗೆ ಅವರ ನಾಯಕರ ಹೆಸರುಗಳನ್ನು ನೀಡಿ ಅವರೆಲ್ಲ ಜೈಲು ಶಿಕ್ಷೆಗೆ ಗುರಿಯಾಗುವಂತೆ ಮಾಡಿದ್ದ. ಆದರೆ ಸ್ವಾತಂತ್ರ್ಯ ಬಂದ ನಂತರ ತಾನೂ ಅದರಲ್ಲಿ ಸಕ್ರಿಯವಾಗಿದ್ದೆ ಎಂದು ಸುಳ್ಳು ಹೇಳಲಾರಂಭಿಸಿದ್ದ. 1998 ರಲ್ಲಿ 'ಫ್ರಂಟ್‌ಲೈನ್' ಎಂಬ ಪತ್ರಿಕೆ ಈತ ಎಂತಹ ಸ್ವಾತಂತ್ರ್ಯ ಹೋರಾಟಗಾರ ಎಂಬುದರ ಅಸಲಿ ಸತ್ಯವನ್ನು ಬಹಿರಂಗಪಡಿಸಿತ್ತು. ಹೀಗೆ ಬ್ರಿಟಿಷರೊಂದಿಗೆ ಕೈಜೋಡಿಸಿದ್ದು, ಗಾಂಧಿಯನ್ನು ಕೊಂದವರ ಸಂಘಟನೆಯ ಸದಸ್ಯನಾಗಿರುವ, ಕೋಮುವಾದಿ 'ಆರ್‌ಎಸ್‌ಎಸ್ ನನ್ನ ಆತ್ಮ' ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಮನುಷ್ಯ ವಾಜಪೇಯಿ. ಅದು ಹೇಗೆ ಭಾರತ ರತ್ನ ಆಗುತ್ತಾನೆ?





ವಿಚಿತ್ರವೆಂದರೆ ವಾಜಪೇಯಿ ಪರವಾಗಿ ಅಡ್ವಾಣಿ ತನ್ನದೇ ಆದ ಕಾರಣಗಳಿಗೆ ಲಾಬಿ ಮಾಡಿದ್ದನ್ನು ಕಂಡು ಪಶ್ಚಿಮ ಬಂಗಾಳದ ಸಿಪಿಐಂ ಪಕ್ಷದ ಪಾಲಿಟ್ ಬ್ಯೂರೋ ಸದಸ್ಯ ಬಿಮನ್ ಬೋಸ್ "ಭಾರತ ರತ್ನ ಪ್ರಶಸ್ತಿಯನ್ನು ಜ್ಯೋತಿ ಬಸುಗೆ ನೀಡಬೇಕು" ಎಂಬ ವಾದವನ್ನಿಟ್ಟ. ಇತ್ತೀಚೆಗೆ "ಬಂಡವಾಳಶಾಹಿ ಧೋರಣೆ ಇಲ್ಲದೆ ಯಾವ ಪ್ರಗತಿಯೂ ಸಾಧ್ಯವಿಲ್ಲ" ಎಂದು ಘೋಷಿಸಿದ ಕಮ್ಯುನಿಸ್ಟ್ ನಾಯಕ ಈ ಜ್ಯೋತಿ ಬಸು. ಅಷ್ಟೇ ಅಲ್ಲ ನಂದಿಗ್ರಾಮದಂತಹ ನರಹತ್ಯೆಯನ್ನು ಸಮರ್ಥಿಸಿಕೊಂಡು ಪಶ್ಚಿಮ ಬಂಗಾಳದ ಎಡರಂಗ ಪಕ್ಷವನ್ನು ಬಲದಿಕ್ಕಿನಲ್ಲಿ ಮುನ್ನಡೆಸಿದ ವ್ಯಕ್ತಿ ಈತ.


(ಸದ್ಯಕ್ಕೆ ಜ್ಯೋತಿ ಬಸುಗೆ ಭಾರತ ರತ್ನ ಪ್ರಶಸ್ತಿಯನ್ನು ನೀಡುವ ಪ್ರಸ್ತಾಪಕ್ಕೆ ಸಿಪಿಎಂ ಪಕ್ಷವೇ ಅಂತ್ಯ ಹಾಡಿದೆ. ಅದಕ್ಕೆ ಪಕ್ಷ ನೀಡಿರುವ ಕಾರಣ ತಮ್ಮ ನಾಯಕರು ಸರ್ಕಾರ ನೀಡುವ ಪ್ರಶಸ್ತಿಗಳನ್ನು ಸ್ವೀಕರಿಸುವುದಿಲ್ಲ ಎಂಬುದು).


ಇವೆಲ್ಲ ಆದಮೇಲೆ ತಾನೇಕೆ ಸುಮ್ಮನಿರಬೇಕೆಂದು ಮಾಯಾವತಿ ಕಾನ್ಶೀರಾಮ್ ಅವರಿಗೆ ಭಾರತ ರತ್ನ ನೀಡಬೇಕೆಂದು ಹೇಳಿದ್ದಾರೆ. ಇವೆಲ್ಲದರ ಜೊತೆ ಮಾತೆತ್ತಿದರೆ "ಇನ್‌ಫೋಸಿಸ್ ನಾರಾಯಣಮೂರ್ತಿಗೆ ರಾಷ್ಟ್ರಪತಿ ಸ್ಥಾನ" ಎಂದು ಬಾಯಿ ಬಡಿದುಕೊಳ್ಳುತ್ತಿದ್ದ ಕಾರ್ಪೊರೇಟ್ ಮಾಧ್ಯಮಗಳು ಸದ್ಯಕ್ಕೆ ಆತನ ಕೈಬಿಟ್ಟು (ರಾಷ್ಟ್ರಗೀತೆ ವಿವಾದಕ್ಕೆ ಅಪಾರ ಧನ್ಯವಾದಗಳು!) ಈಗ "ಸಚಿನ್ ತೆಂಡೂಲ್ಕರ್‌ಗೆ ಭಾರತ ರತ್ನ ಪ್ರಶಸ್ತಿ ನೀಡಬೇಕು" ಎಂಬ ಎಸ್‌ಎಂಎಸ್ ಆಂದೋಲನವನ್ನು ಶುರು ಹಚ್ಚಿಕೊಂಡಿವೆ.

ವಾಸ್ತವವಾಗಿ ಈ ಭಾರತ ರತ್ನ ಪ್ರಶಸ್ತಿಯನ್ನು ಯಾಕೆ? ಯಾರಿಗೆ ಕೊಡಬೇಕು ಎಂಬ ಪ್ರಶ್ನೆಯನ್ನೇ ಎಲ್ಲರೂ ಮತ್ತೆ ಕೇಳಿಕೊಳ್ಳಬೇಕಿದೆ. ಏಕೆಂದರೆ ಇದನ್ನು ನೀಡುವುದರ ಹಿಂದಿರುವ ಉದ್ದೇಶಕ್ಕೂ, ಈಗ ನಡೆಯುತ್ತಿರುವ ಲಾಬಿಗೂ ಅಜಗಜಾಂತರ ವ್ಯತ್ಯಾಸವಿದೆ.

ಮೊದಲನೆಯದಾಗಿ ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದೇ ಬ್ರಿಟಿಷರು ನೀಡುತ್ತಿದ್ದ ಪ್ರಶಸ್ತಿಗಳ ಪರ್ಯಾಯವಾಗಿ. ಅಂದು ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಲ್ಲಿಸಿದ ಸೇವೆಗಾಗಿ ನೀಡುತ್ತಿದ್ದ ಪ್ರಶಸ್ತಿಗಳ ಬದಲಾಗಿ ಭಾರತದ ಸಮಾಜಕ್ಕೆ ಸಲ್ಲಿಸಿದ ಸೇವೆಗಾಗಿ ಇದನ್ನು ನೀಡಲು ಪ್ರಾರಂಭಿಸಲಾಯಿತು. ಹಾಗೆಯೇ ಸಾಹಿತ್ಯ, ಕಲೆ, ವಿಜ್ಞಾನ ಮತ್ತು ಸಾರ್ವಜನಿಕ ಹಿತಾಸಕ್ತಿಗಳಿಗಾಗಿ ನೀಡಿದ ಅತ್ಯುತ್ತಮ ಕೊಡುಗೆಯ ಆಧಾರದ ಮೇಲೆ ಪ್ರಶಸ್ತಿ ವಿಜೇತರನ್ನು ಆಯ್ಕೆ ಮಾಡಲಾಗುತ್ತಿತ್ತು.

ಆದರೆ ಕಳೆದ ಮೂರು ದಶಕಗಳಿಂದ ಯಾವ ಸಂದರ್ಭದಲ್ಲಿ ಯಾರನ್ನು ಭಾರತ ರತ್ನ ಎಂದು ಆಯ್ಕೆ ಮಾಡಲಾಗಿದೆ ಎಂದು ನೋಡಿದರೆ ಇದೂ ಕೂಡ ಹೇಗೆ ರಾಜಕೀಯ ತಂತ್ರಗಳಿಗೆ ಬಲಿಯಾಗಿದೆ ಎಂಬುದು ಅರ್ಥವಾಗುತ್ತದೆ.





◆ 1976 ರಲ್ಲಿ ಕೆ. ಕಾಮರಾಜ್‌ರವರಿಗೆ ಈ ಪ್ರಶಸ್ತಿಯನ್ನು ನೀಡಿದಾಗ ಇಂದಿರಾ ಗಾಂಧಿ ಪ್ರಧಾನಮಂತ್ರಿ ಆಗಿದ್ದರು. ಲಾಲ್‌ಬಹದ್ದೂರ್ ಶಾಸ್ತ್ರಿಯವರು ಮರಣ ಹೊಂದಿದ್ದ ನಂತರ ಆಗಿನ್ನೂ ರಾಜಕೀಯವಾಗಿ ಬಾಲಿಶವಾಗಿದ್ದ ಇಂದಿರಾ ಗಾಂಧಿ ಕಾಂಗ್ರೆಸ್ ಅಧ್ಯಕ್ಷೆ ಸ್ಥಾನಕ್ಕೆ ಏರುವುದಕ್ಕೆ ಕಾಮರಾಜ್ ಸಹಕಾರಿಯಾಗಿದ್ದರು ಎಂಬುದು ಗಮನಾರ್ಹ.

◆ 1990 ರಲ್ಲಿ ಬಿ.ಆರ್. ಅಂಬೇಡ್ಕರ್‌ರವರನ್ನು ಆಯ್ಕೆ ಮಾಡಿದ್ದು ವಿ.ಪಿ ಸಿಂಗ್‌ರವರ ಸರ್ಕಾರ. ಮಂಡಲ್ ವರದಿಯನ್ನು ಜಾರಿಗೆ ತಂದಿದ್ದು ಅದೇ ವರ್ಷ. ಅಂದರೆ ವಿ.ಪಿ. ಸಿಂಗ್ ತಮ್ಮನ್ನು ದಲಿತರ ಪರವಾಗಿ ಎಂದು ಬಿಂಬಿಸಿಕೊಳ್ಳಲೆಂದೇ ಅಂಬೇಡ್ಕರ್‌ರವರನ್ನು ಭಾರತ ರತ್ನ ಎಂದಿದ್ದರು.

◆ 1991 ರಲ್ಲಿ ಪಿ.ವಿ. ನರಸಿಂಹರಾವ್ ಸರ್ಕಾರ ಸರ್ದಾರ್ ವಲ್ಲಭಾಯಿ ಪಟೇಲ್‌ರಿಗೆ ಈ ಗೌರವವನ್ನು ನೀಡಿತ್ತು. ನೆನಪಿಡಿ, 1991 ರಲ್ಲೇ ಸಂಘ ಪರಿವಾರದವರ ಹಿಂದೂತ್ವದ ಅಬ್ಬರ ಹೆಚ್ಚಾಗಿತ್ತು. ಅವರಿಗಿಂತಲೂ ತಾನೇನು ಕಡಿಮೆ ಹಿಂದೂತ್ವವಾದಿಯಲ್ಲ ಎಂದು ತೋರಿಸಿಕೊಳ್ಳಲೆಂದೇ ಕೇಸರಿ ಬಳಗದವರಿಗೂ ಇಷ್ಟವಾಗುವ ಪಟೇಲ್‌ರನ್ನು ಪಿ.ವಿ.ಎನ್. ಆಯ್ಕೆ ಮಾಡಿದ್ದರು.

◆ 1992 ರಲ್ಲಿ ಮೌಲಾನ ಅಬ್ದುಲ್ ಕಲಾಂ ಆಜಾದ್‌ರನ್ನು ಆಯ್ಕೆ ಮಾಡಿದ್ದು ಮತ್ತದೇ ಪಿ.ವಿ. ನರಸಿಂಹರಾವ್ ಸರ್ಕಾರ. ಇದಕ್ಕೆ ಕಾರಣ ಬೇರೇನೂ ಅಲ್ಲ. 1991 ರಲ್ಲಿ ಹಿಂದೂತ್ವವಾದಿಗಳನ್ನು ಸಂತುಷ್ಟಗೊಳಿಸಿದ್ದರೆ, ಅದರ ಮುಂದಿನ ವರ್ಷ ಮುಸಲ್ಮಾನರನ್ನು ಸಂತೃಪ್ತಿಗೊಳಿಸುವ ಹುನ್ನಾರವಷ್ಟೇ.

ಕಾಮರಾಜ್ ಆಗಲಿ, ಅಂಬೇಡ್ಕರ್ ಆಗಲಿ, ಅಬ್ದುಲ್ ಕಲಾಂ ಆಜಾದರಾಗಲಿ ಭಾರತ ರತ್ನರೆನಿಸಿಕೊಳ್ಳಲು ಅರ್ಹರಲ್ಲ ಎಂದಲ್ಲ, ಅವರೆಲ್ಲ ಭಾರತಕ್ಕೆ ಸಾಕಷ್ಟು ಕೊಡುಗೆ ನೀಡಿದ್ದ ರತ್ನಗಳೇ ಆಗಿದ್ದಾರೆ. ಆದರೆ ಅವರನ್ನು ಆಯ್ಕೆ ಮಾಡಿಕೊಳ್ಳುವ ಮೂಲಕ ಪ್ರತಿಯೊಬ್ಬರೂ ಅವರನ್ನು ತಮ್ಮ ರಾಜಕೀಯದ ದಾಳಗಳನ್ನಾಗಿಸಿಕೊಂಡಿದ್ದಾರೆ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕೆಂಬ ಉದ್ದೇಶ ಅಷ್ಟೇ.

ಈಗ ನಡೆಯುತ್ತಿರುವುದೂ ಇಂತಹದ್ದೇ ದುರಾದೃಷ್ಟಕರ ರಾಜಕೀಯ ಲಾಬಿಯೇ.

ಕಳೆದ ಏಳು ವರ್ಷಗಳಿಂದ ಯಾರಿಗೂ ಭಾರತ ರತ್ನ ಪ್ರಶಸ್ತಿಯನ್ನು ನೀಡಿಲ್ಲ, ಈಗ ನಡೆಯುತ್ತಿರುವ ಹೇಸಿಗೆ ಹುಟ್ಟಿಸುವ ಲಾಬಿಗಳು ನಿಲ್ಲುವ ತನಕ ಅದನ್ನು ಯಾರಿಗೂ ಕೊಡದಿದ್ದರೇ ವಾಸಿ.....

–ಗೌರಿ ಲಂಕೇಶ್

ಗೋವಿಂದನ ಕೊನೆಯ ಮಾತುಗಳು

'ಜಗ್ಗ ನಿಕಾಲಿ ಆಗ್ಬೇಕು ಇಲ್ಲಾಂದ್ರೆ ನಾನು' ಅಂದಿದ್ದ

ಆದು ಇಷ್ಟು ಬೇಗನೆ ಮುಗಿಯುವ ಘಟವಲ್ಲ, ಇದೇ ಆತನ ಕೊನೆಯ ಸಂದರ್ಶನವಾಗಲಿದೆ ಎಂದು ಆವತ್ತು ಅನ್ನಿಸಲಿಲ್ಲವಾದರೂ ಅಲ್ಲಿ ಎಲ್ಲವೂ ಸರಿಯಿರಲಿಲ್ಲ.

ಅದು 2007 ರ ಡಿಸೆಂಬರ್ 25 ರ ಕ್ರಿಸ್‌ಮಸ್ ರಾತ್ರಿ. ಸಮಯ ಎಂಟೂವರೆಯಾಗಿತ್ತು. 'ನೋಡಿ ಸಾರ್, ಅದ್ಯಾವುದೋ ಪತ್ರಿಕೇಲಿ ಗೋರಿಲ್ಲಾ ಶ್ರೀಧರ ಮತ್ತು ಮೆಂಟ್ಲು ಪ್ರಕಾಶ ಸೇರ್‍ಕೊಂಡು ನನಗೆ ಮುಹೂರ್ತ ಇಟ್ಟವ್ರೆ ಅಂಥ ಸುಳ್ಳುಸುಳ್ಳೇ ಬರೆದಿದ್ದಾರೆ. ಸತ್ಯ ಏನೂ ಅಂತ ನೀವೇ ನೋಡಿ. ನಾನೂ ಗೋರಿಲ್ಲಾ ಒಟ್ಟೊಟ್ಟಿಗೇ ನಿಂತುಕೊಂಡು ಇಂಟರ್‌ವ್ಯೂ ಕೊಡ್ತೀವಿ ಬರೀತೀರಾ?' ಎಂದು ಪದೇಪದೇ ಫೋನ್ ಮಾಡಿ ಕೇಳಿದ್ದ ತಿಮ್ಮೇನಹಳ್ಳಿ ಗೋವಿಂದ.

ಈ ಹೊತ್ತಿಗಾಗಲೇ ಉದಯ ಮತ್ತು ಟೀವಿ ನೈನ್‌ಗಳಿಗೆ ಗೋರಿಲ್ಲನ ಜೊತೆ ಪೋಜು ಕೊಟ್ಟಿದ್ದ ಗೋವಿಂದನ ತಥಾಗತ ಡೈಲಾಗ್‌ಗಳಲ್ಲಿ ನನಗೆ ಯಾವುದೇ ಕುತೂಹಲವಿರಲಿಲ್ಲವಾದರೂ ಕಳೆದ ಮೂರು ತಿಂಗಳುಗಳಿಂದ ತಿಮ್ಮೇನಹಳ್ಳಿಯಲ್ಲಿ ಕೇಳಿಬರುತ್ತಿದ್ದ ಗೋವಿಂದನ ಹಾವಳಿಗಳು, ಸೂರಿ ಹತ್ಯೆ, ಆತ ಮತ್ತು ಜೇಕೆ ನಡುವಿನ ಸಂಬಂಧ, ಕಾಮಾಕ್ಷಿಪಾಳ್ಯದ ಗ್ಯಾಂಗ್‌ವಾರ್‌ನ ಲೇಟೆಸ್ಟ್ ವಿದ್ಯಮಾನಗಳು ಮತ್ತು ಆತನ ಸುತ್ತಣ ದುಷ್ಮನಿಯ ಬಗ್ಗೆ ವಿಚಿತ್ರ ಕುತೂಹಲವೊಂದು ಇದ್ದೇ ಇತ್ತು. ಅಷ್ಟಕ್ಕೂ ಗೋವಿಂದನ ಮೊದಲ ಸಂದರ್ಶನ ಮಾಡಿದ್ದೇ ನಾನು. ಅರುಣನ ಹತ್ಯೆ ನಡೆದ ಮಾರನೇ ದಿನ ಪೀಣ್ಯದ ಮನೆಯೊಂದರಲ್ಲಿ ಸಿಕ್ಕು ತಮ್ಮಯ್ಯನ ವಿರುದ್ಧ ಹಲ್ಲು ಕಡಿದಿದ್ದ ಗೋವಿಂದನ ಆವತ್ತಿನ ಸ್ಥಿತಿಗೂ ಆದಾಗಿ ಏಳು ವರ್ಷಗಳೇ ಸಂದ ಇವತ್ತಿನ ರೀತಿಗೂ ಅಜಗಜಾಂತರ ವ್ಯತ್ಯಾಸವಿತ್ತು. ಒಂದು ಸುಮೋ, ಮತ್ತೊಂದು ಕ್ವಾಲೀಸ್ ನಡುವೆ ಸ್ಯಾಂಟ್ರೋದಲ್ಲಿ ಕುಳಿತಿದ್ದ ತಿಮ್ಮೇನಹಳ್ಳಿ ಗೋವಿಂದ-

'ಬನ್ನಿ ಸಾರ್' ಅಂದ. ತಲೆ ಕೂದಲು ನೆರೆದಿತ್ತು. ಕುಡಿದಿದ್ದ. ಏಳು ವರ್ಷಗಳ ಹಿಂದಿದ್ದ ಗೋವಿಂದನಿಗೆ ಹೋಲಿಸಿದರೆ ಒರಟುತನ ಇನ್ನೂ ಹೆಚ್ಚಿದಂತೆ ಕಾಣುತ್ತಿತ್ತು. ಸುತ್ತ ಕಮ್ಮಿಯೆಂದರೂ ಏಳೆಂಟು ಬೈಕುಗಳಲ್ಲಿ ಹುಡುಗರಿದ್ದರು. ಹಾಗೇ ಹೊಸಕೆರೆಹಳ್ಳಿಯ ಎಪಿಎಸ್ ಎದುರಿನಿಂದ ಆವಲಹಳ್ಳಿ ಮೂಲಕ ವಿಜಯನಗರಕ್ಕೆ ಬಂದು ತಿಮ್ಮೇನಹಳ್ಳಿಯ ತನ್ನ ಮನೆಯೆದುರಿಗೇ ಕಾರಿಳಿದ ಗೋವಿಂದನ ನಡಿಗೆಯಲ್ಲೇ ಏನೋ ದೋಷವಿತ್ತು. ಮನೆಯೆದುರೇ ಇದ್ದ ವಠಾರದ ಕೋಣೆಯೊಂದನ್ನು ಹೊಕ್ಕು ನೆಲಕ್ಕೆ ಹಾಸಿದ್ದ ಧೂಳಿನ ಹಾಸಿಗೆಗೆ ಮೈಚೆಲ್ಲಿದ ಗೋವಿಂದನ ಕೈಯೊಂದು ಅಪ್ರಯತ್ನವಾಗಿ ಆತನ ಎಡಗಾಲಿನ ಪಾದ ಒತ್ತುತ್ತಿತ್ತು.

ಎಡಪಾದ ಊದಿಕೊಂಡಿತ್ತು. ಆತ ಚೈನ್ ಸ್ಮೋಕರ್. ಒಂದನ್ನು ಆಷ್‌ಟ್ರೇಗೆ ಕುಕ್ಕಿದ ಮರುಗಳಿಗೆಯಲ್ಲೇ ಮತ್ತೊಂದು ಸಿಗರೇಟ್ ಹೊತ್ತಿಸುತ್ತಿದ್ದ. ಕ್ಷಣಕ್ಷಣಕ್ಕೂ ಕ್ಯಾಕರಿಸಿ ಕಫ ಮುಕ್ಕಳಿಸುತ್ತಿದ್ದ. ಹಾಗೇ ಕ್ಯಾಕರಿಸಿದಾಕ್ಷಣ ಪಕ್ಕದಲ್ಲಿದ್ದವನೊಬ್ಬ ಪ್ಲಾಸ್ಟಿಕ್ ಲೋಟವನ್ನು ಆತನ ಬಾಯಿಗೆ ಹಿಡಿದು ಉಗಿದಾಕ್ಷಣ ಅದನ್ನ ಇನ್ನೊಬ್ಬನ ಕೈಗಿಡುತ್ತಿದ್ದ. ಸರಿಸುಮಾರು 20 ಉದ್ದದ ಲಾಂಗ್‌ಗಳ ಕಟ್ಟೊಂದನ್ನು ಯಾರೋ ಹುಡುಗನೊಬ್ಬ ರೂಮಿನೊಳಕ್ಕೆ ತಂದದ್ದೇ ಹೊಸ ಸಿಗರೇಟಿಗೆ ಕಡ್ಡಿಗೀರಿದ ಗೋವಿಂದ ದೀರ್ಘ ಹೊಗೆಯೆಳೆದು-

● ನೋಡಿ ಸಾರ್, ನಾನು ಅದ್ಯಾರೋ ಹೆಂಗಸನ್ನ ಜಗ್ಗನಿಗೆ ನ್ಯೂಸ್ ಕೊಡ್ತಾಳೆ ಅಂತ ರೇಪ್ ಮಾಡಿದ್ರೆ ಆಕೆ ಪೊಲೀಸರಿಗೆ ಕಂಪ್ಲೇಂಟ್ ಕೊಡ್ತಿರಲಿಲ್ವಾ? ರೋಡಲ್ಲಿ ಹೋಗಿ ಬರೋರನ್ನೆಲ್ಲ ಸುಮ್ಮಸುಮ್ಮನೇ ಹಿಡಕೊಂಡು ಹೊಡಿಯೋಕ್ಕಾಗುತ್ತಾ? ನಾನೂ ಇಪ್ಪತ್ತು ವರ್ಷ ಫೀಲ್ಡ್ ಮಾಡಿರೋನು. ನನ್ನ ಮೇಲೆ ಅಟ್ಯಾಕ್ ಮಾಡೋಕೆ ಸ್ಕೆಚ್ಚು ಹಾಕೋಕೆ ಯಾರಾದ್ರೂ ವಾಚ್ ಮಾಡುದ್ರೆ ನೋಡ್ತಾ ಇರ್‍ತಾ? ಯಾರು ಎತ್ತ ಅಂತ ವಿಚಾರಿಸೋದು ತಪ್ಪಾ? ಇದನ್ನೆಲ್ಲ ಹಬ್ಬಿಸ್ತಾ ಇರೋರೇ ನನ್ನ ದುಷ್ಮನ್‌ಗಳು.....!

● ಯಾರು?

● ಅದೇ ಸಾರ್, ಆ ಮಾರನೇಹಳ್ಳಿ ಜಗ್ಗಾ, ಟಿಪಿ ರಾಜ, ತಮ್ಮಯ್ಯನ ತಮ್ಮ ಮನೋಹರ; ಕೊರಂಗು-ಕೋತಿರಾಮ ಎಲ್ರೂ ಇದ್ದಾರೆ. ಯಾಕೆ ಗೊತ್ತಾ? ತಿಮ್ಮೇನಹಳ್ಳೀಲಿದ್ರೆ ಗೋವಿಂದನ್ನ ಹೊಡಿಯೋಕ್ಕಾಗಲ್ಲ ಅನ್ನೋದು ಅವರಿಗೆ ಚೆನ್ನಾಗಿ ಗೊತ್ತು. ಈ ರೀತಿ ಕ್ಯಾತೆ ತೆಗೆದು ಪೊಲೀಸ್ ಕೇಸಾದ್ರೆ ಮತ್ತೆ ನಾನು ಜೈಲು ಪಾಲಾಗ್ತೀನಿ ಅಥವಾ ಅಬ್‌ಸ್ಕಾಂಡಿಂಗ್ ಆಗಿ ನೋ ಎಂಟ್ರೀಲಿರ್ತೀನಿ ನೋಡಿ. ಆವಾಗ ನನ್ನನ್ನ ಅಟ್ಯಾಕ್ ಮಾಡಿ ಮುಗಿಸಿಬಿಡೋದು ಅವರ ಪ್ಲಾನು. ಏಕೆಂದ್ರೆ ತಿಮ್ಮೇನಹಳ್ಳೀಲಿದ್ರೆ ಯಾವ ಸನ್ ಮಗನ ಕೈಲೂ ಈ ಗೋವಿಂದನ್ನ ಮುಟ್ಟೋಕಾಗಲ್ಲ, ಸುಮ್ನೆ ಚಿಟಿಕೆ ಹೊಡ್ದೆ ಅಂದ್ರೆ ಸಾವಿರ ಜನರನ್ನ ಸೇರಿಸಿಬಿಡ್ತೀನಿ. ಇಲ್ಲಿರೋರೆಲ್ಲ ನನ್ನ ಸೆಂಟರೇ ಹೊರತು ಯಾರೂ ರೌಡಿಗಳಲ್ಲ, ಇಲ್ಲಿಗೆ ನುಗ್ಗಿ ನನ್ನನ್ನ ಹೊಡೆಯೋಕ್ಕೆ ಜಗ್ಗನಂಥ ನೂರು ಮಂದಿ ಬಂದ್ರೂ ಸಾಧ್ಯ ಆಗೋಲ್ಲ.

ಮೊದ್ಲು ತಿಮ್ಮನ್ನ ಹೊಡ್ದೆ ಅಂತ ಪುಕಾರೆಬ್ಬಿಸಿದ್ರು. ಆನಂತ್ರ ನೀರಾನೆ ತಮ್ಮ ಬಸವನ್ನ ಹೊಡ್ದೆ ಅಂದ್ರು. ಈಗ ಗೋರಿಲ್ಲಾ ಶ್ರೀಧರನ್ನ ಹುಯ್ದುದೀನಿ ಅಂತಿದ್ದಾರೆ. ಅವರೆಲ್ಲ ನಮ್ಮ ಹುಡುಗ್ರು. ನಮ್ಮ ಹುಡುಗ್ರನ್ನ ನಾನು ಹೊಡೀದೇ ಯಾರು ಹೊಡೀತಾರೆ?

ಗೋರಿಲ್ಲಾ ಮೆಂಟ್ಲು ಪ್ರಕಾಶನ ಶಿಷ್ಯನಾದ್ರೂ ನಂ ಹುಡುಗನೇ. ಏನೋ ಒಂದು ಕೆಲ್ಸಾ ಹೇಳಿದ್ದೆ. ಮಾಡ್ದೆ ಅಂತ ಸುಳ್ಳು ಹೇಳ್ದ. ಅದಕ್ಕೇ ಎರಡು ಬಿಟ್ಟೆ. ಅಷ್ಟೇ-

ಕ್ಷಣಹೊತ್ತು ಮಾತು ನಿಲ್ಲಿಸಿ ದೀರ್ಘ ಧಮ್ಮೆಳೆದ ಗೋವಿಂದ ಪ್ಲಾಸ್ಟಿಕ್ ಲೋಟ ಒಂದನ್ನ ಈಸಿಕೊಂಡಿದ್ದೇ ಮತ್ತೆ ಅದಕ್ಕೆ ಕಫ ಉಗಿದುಕೊಟ್ಟವನು ಮತ್ತೆ ಮಾತಿಗಿಳಿದ.

ನೋಡಿ ಸಾರ್, ಮೆಂಟ್ಲು ಪ್ರಕಾಶ ಮತ್ತು ಗೋರಿಲ್ಲಾ

■ ರಾ. ಸೋಮನಾಥ್

ನನಗೆ ಯಾರೂ ಬಾಸ್ ಅಲ್ಲ. ನಾನೇ ಕಿಂಗ್‌ಮೇಕರ್. ಈ ತಿಮ್ಮೇನಹಳ್ಳಿ ತಣ್ಣಗಾಗಬೇಕು ಅಂದ್ರೆ ಒಂದೋ ಮಾರೇನಹಳ್ಳಿ ಜಗ್ಗ ನಿಕಾಲಿ ಆಗ್ಬೇಕು ಇಲ್ಲಾಂದ್ರೆ ಈ ಗೋವಿಂದನ ಕತೇನೇ ಮುಗಿಬೇಕು. ಹಂಗಾದ್ರೆ ಮಾತ್ರಾನೇ ತಿಮ್ಮೇನಹಳ್ಳಿ ತಣ್ಣಗಾಗೋದು. ನನ್ನನ್ನ ಮುಗಿಸೋಕ್ಕೆ ದುಷ್ಮನ್‌ಗಳು ಏನೇನೋ ಸ್ಕೆಚ್ ಹಾಕ್ತಾನೇ ಇದ್ದಾರೆ. ನಾನು ಬಿಡ್ತೀನಾ? ಫೈಟ್ ಮಾಡೇ ಮಾಡ್ತೀನಿ; ಎಂದಿದ್ದ ತಿಮ್ಮೇನಹಳ್ಳಿ ಗೋವಿಂದ. ಇದೇ ಆತನ ಕೊನೆಯ ಸಂದರ್ಶನವಾಗಲಿದೆ ಎಂಬುದು ಯಾರಿಗೆ ಗೊತ್ತಿತ್ತು? ಇದಾಗಿ ಹತ್ತೇ ದಿನಕ್ಕೆ ತನ್ನ ಮನೆ ಹಿಂಬದಿಯಲ್ಲೇ ಮುಗಿದುಹೋಗಿದ್ದ ತಿಮ್ಮೇನಹಳ್ಳಿ ಗೋವಿಂದ. ಸಾವಿನ ವಾಸನೆ ಆತನ ಮಾತಲ್ಲೇ ಇತ್ತೆಂಬುದಕ್ಕೆ ಇದಕ್ಕಿಂತ ಬೇಕೆ?




ಸೇರಿಕೊಂಡು ನನ್ನನ್ನು ಮುಗಿಸ್ತಾರೆ ಅನ್ನೋದೇ ಕಟ್ಟುಕತೆ. ಮೆಂಟ್ಲು, ಗೋರಿಲ್ಲಾ, ಕೋಳಿ ಮಂಜ ಮತ್ತು ನೀರಾನೆ ಎಲ್ಲಾ ಒಂದು ಬ್ಯಾಚಿನ ಫ್ರೆಂಡ್ಸು. ಮಾಲೂರು ಹತ್ರ ಯಾರೋ ದಯಾನಂದ್ ಶೆಟ್ಟಿ ಅನ್ನೋನ್ನ ಕೊಂದಿದ್ರು. ಕೊಂದವನ ಹೆಂಡ್ತೀನೇ ಸುಪಾರಿ ಕೊಟ್ಟಿದ್ಲು. ಆನಂತ್ರ ಕನಕಪುರದ ಹತ್ರ ಇನ್ನಾರನ್ನೋ ಸುಪಾರಿಗೆ ಮುಗಿಸಿದ್ರು. ಈ ರೀತಿ ಮೂರ್‍ನಾಲ್ಕು ಸುಪಾರಿ ಮರ್ಡರ್ ಮಾಡಿದ್ದಾರೆ ಅಂತ ಗೊತ್ತಾಗಿದ್ದೇ ಮೆಂಟ್ಲು ಪ್ರಕಾಶನ್ನ ಕರೆದು ಉಗಿದೆ. ನನ್ಮಕ್ಳಾ ಸುಪಾರಿ ಕೊಲೆ ಮಾಡಬ್ಯಾಡ್ರೋ ದೇವ್ರು ಒಳ್ಳೇದ್ ಮಾಡಾಕಿಲ್ಲಾ ಎಂದೆ. ಅದೇನೋ ಅವರವರೇ ಕಿತ್ತಾಡ್ಕೊಂಡ್ರು. ಮೆಂಟ್ಲುನ್ನ ಯಾರ್‍ಯಾರೋ ಹೊಡಿತೀವಿ ಅಂತಿದ್ರು. ಅವರನ್ನೆಲ್ಲ ನಾನೇ ಕರೆದು ವಾರ್ನ್ ಮಾಡಿದ್ದೆ. ಏನೇ ಆದ್ರೂ ಮೆಂಟ್ಲುನ್ನ ನಾನು ಉಳಿಸ್ಕೋತೀನಿ....! ಅಂದ ಗೋವಿಂದ.

● ನೋಡಿ ಸಾರ್ ಮೂರು ದಿನದ ಹಿಂದೆ ನಮ್ಮ ಹುಡುಗರ ಗಾಡೀನೇ ದುಷ್ಮನ್‌ಗಳು ಹೊಡಿದಿದ್ದಾರೆ. ವಾರದ ಹಿಂದೆ ನಮ್ ಹುಡ್ಗ ನಾರಾಯಣನ ಮಾರುತಿ ಕಾರನ್ನು ಚಿಂದಿ ಮಾಡಿದ್ದಾರೆ. ಕುಮಾರನ ಸ್ಯಾಂಟ್ರೋ ಗಾಡಿ, ನರಸಿಂಹನ ಇಂಡಿಕಾ ಎಲ್ಲಾನ್ನೂ ಜಗ್ಗನ ಹುಡುಗರು ರಾತ್ರಿ ಬಂದು ಹೊಡಿತಿದ್ದಾರೆ. ಅದೂ ಪಸರ್ ಇಲ್ದೇ ಟೂ ವೀಲರ್‌ನಲ್ಲಿ ಬಂದು ಗಾಡಿ ಹೊಡೆದು ಎಸ್ಕೇಪಾಗ್ತಿದ್ದಾರೆ. ಇದನ್ನೆಲ್ಲಾ ಮಾಡ್ತಿರೋನು ತಮ್ಮಯ್ಯನ ಶಿಷ್ಯ ಕರಿಯಾ ಅಲಿಯಾಸ್ ಗುಂಡಾ. ಅವನ ಜೊತೆ ಸೇರೂನೂ ಇರ್‍ತಾನೆ. ಇವರೆಲ್ಲ ತಮ್ಮಯ್ಯನ ಕಡೆ ಹುಡುಗ್ರು. ಏರಿಯಾದಲ್ಲಿ ಗಲಾಟೆ ನಡೀತಿದೆ ಅನ್ನಿಸಿ ನನ್ನನ್ನ ಏರಿಯಾ ಬಿಡಿಸೋದು ಇವರ ತಂತ್ರ. ಒಮ್ಮೆ ನಾನು ನೋ ಎಂಟ್ರಿಗೆ ಬಿದ್ದೆ ಅಂದ್ರೆ ಅಟ್ಯಾಕ್ ಮಾಡಿ ಮುಗಿಸಬೌದು ನೋಡೀ....!

ಇಷ್ಟೆಲ್ಲಾ ತೊಂದ್ರೆ ಇರೋದು ಜೊತೇಲಿರೋ ಹುಡುಗ್ರನ್ನ ಚೆನ್ನಾಗಿಟ್ಟುಕೊಳ್ಳೋದಲ್ವಾ? ಎಂಬ ಪ್ರಶ್ನೆಗೆ ಆತ ಹೇಳಿದ್ದು-

ಯಾರ್ ಸಾರ್ ಹೇಳಿದ್ದು; ನಂ ಹುಡುಗ್ರನ್ನ ನಾನ್ ಹೊಡೀದೇ ಇನ್ಯಾರ್ ಹೊಡೀತಾರೆ. ನೀರಾನೆ ಈಗ ಮಹಾಲಕ್ಷ್ಮಿ ಲೇಔಟ್ ಶಶಿ ಮರ್ಡರ್ ಕೇಸಲ್ಲಿ ಜೈಲಲ್ಲಿದ್ದಾನೆ.



ಆವನ ತಮ್ಮ ಬಸವನ್ನೂ ನಾನೇ ಕರೆಸಿಕೋತಾ ಇಲ್ಲ, ಬಂದ್ರೆ ಸುಮ್ನೇ ಪೊಲೀಸರ ಕಣ್ಣು ಯಾಕೆ ಅಂತಾ? ತಿಮ್ಮನ್ನೂ ಹೊಡೆದೆ ಅಂತ ಪುಕಾರೆಬ್ಬಿಸಿದ್ರು. ತಿಮ್ಮ ನಿನ್ನೆ ಅಷ್ಟೇ ಬಂದಿದ್ದ. ಕ್ರಿಕೆಟ್ ಬೆಟ್ಟಿಂಗ್ ಕಟ್ಟಿದ್ದೆ ಹೊಡಿಬೌದು ಬಯ್ಯಬೌದು. ಹಾಗಂಥ ಯಾರಿಗಾದ್ರೂ ಒಂದು ರೂಪಾಯಿ ಮೋಸ ಮಾಡಿದ್ದೀನಾ? ನಾನು ಮೂಡ್ಲಪ್ಪನ ಮಗ ಗೋವಿಂದ. ಯಾರಿಗಾದ್ರೂ ಮೋಸ ಮಾಡುದ್ರೆ ಜನಾ ಏನಂದ್ಕೋತಾರೆ? ಅಷ್ಟಕ್ಕೂ ಬಸವಾ ನಂ ಹುಡ್ಗಾ ಅಲ್ಲವೇ ಅಲ್ಲ. ನಂ ಹುಡುಗ್ರನ್ನ ಹೊಡೆದು ಮೊಬೈಲ್ ಕಿತ್ಕೋತಿದ್ದ. ಆವಾಗ್ಲೇ ಅವನ್ನ ದೂರ ಮಾಡಿದ್ದೆ. ನಂದೇ ಗ್ರಾನೈಟ್ ಬಿಸಿನೆಸ್ ಇದೆ. ನೋಡೀ...." ಎಂದು ಮೂರು ಪುಟ್ಟ ಶಿಲಾಬಿಲ್ಲೆಗಳನ್ನು ತರಿಸಿ ಮುಂದಿಟ್ಟ. ಗ್ರಾನೈಟ್ ಕ್ವಾರಿ ಎಲ್ಲಿದೆ? ಅಂದರೆ ಅದೆಲ್ಲಾ ಟಾಪ್ ಸೀಕ್ರೆಟ್ ಎಂದ.

● ಅಷ್ಟಕ್ಕೂ ನಿಮ್ಮ ತಾಯಿ ನರಸಮ್ಮ ನವರು ತೀರಿಕೊಂಡಾಗಲಾದ್ರೂ ಬಾಸ್ ಜೇಕೆ ಬರಬೇಕಿತ್ತಲ್ವಾ?

ಗೋವಿಂದ ಕ್ಷಣಹೊತ್ತು ಯೋಚಿಸದೇ ಡೈಲಾಗ್ ಹೊಡೆದ. ನೋಡಿ ಸಾರ್ ಜೇಕೆ ಸಹವಾಸಾನೇ ಬೇಡ ಅಂತ ಬಿಟ್ಟಿರೋವಾಗ ಅವರನ್ನ ನಾನ್ಯಾಕೆ ಕರೆಸಲಿ? ನನಗೆ ಇರೋ ಜನಬೆಂಬಲಾನೇ ಸಾಕು. ಸುಮ್ನೆ ಬರ್‍ರೋ ಅಂದ್ರೆ ಐನೂರು ಜನ ಬರ್‍ತಾರೆ. ನಾನು ಕಿಂಗ್‌ಮೇಕರ್. ಮುಂದೆ ಯಾರು ಕೌನ್ಸಿಲರ್ ಆಗ್ಬೇಕು ಅನ್ನೋದನ್ನ ಡಿಸೈಡ್ ಮಾಡೋದೇ ನಾನು. ನಾನೇನಾದ್ರೂ ಆ ಲೇಔಟ್ ಮಂಜನ್ನ ಮುಗಿಸದೇ ಹೋಗಿದ್ರೆ ಜೇಕೆ ಇವತ್ತು ನೆಮ್ಮದಿಯಾಗಿ ಇರೋಕ್ಕಾಗ್ತಿತ್ತಾ? ಅದನ್ನ ಜೇಕೆ ಆಗ್ಲೀ ಅಂಕಲ್ ನಾಯ್ಡು ಆಗ್ಲಿ ಮೊದ್ಲು ಅರ್ಥ ಮಾಡ್ಕೋಬೇಕಾಗಿತ್ತು. ಸೂರಿ ನನ್ನ ಶಿಷ್ಯ. ಅವನ್ನ ಜೇಕೆಗೆ ಪರಿಚಯ ಮಾಡಿಕೊಟ್ಟಿದ್ದೇ ನಾನು. ನನ್ನನ್ನೇ ಯಾಮಾರ್‍ಸಿ ಜೇಕೆ ಮತ್ತು ನಾಯ್ಡು ಅವನ್ನ ಬೆಳೆಸ್ಕೊ ಳ್ಳೋದುದ್ರು. ಏಕೆಂದ್ರೆ ನಾನು ಕುಂಟು ಕುದ್ರೆ ಆಗ್ಬ ನೋಡಿ. ಈ ಕಾಲು ಪದೇಪದೇ ಊತ ಬರ್‍ತಿತ್ತು. ಅದ ಹೊತ್ತಿಗೆ ಸೂರಿ ತಮ್ಮಯ್ಯನ್ನ ಮರ್ಡರ್ ಮಾಡಿ shin ಆಗ್ಬಿಟ್ಟ. ಯಾವತ್ತು ಮಚ್ಚನ ಕೊಲೆ ಕೇಸಲ್ಲಿ ಎಂಡಿ(ಜೇ ಮೈಸೂರು ಜೈಲಿಗೆ ಬಂದ್ರೋ ಮೊದಮೊದಲು ಚೆನ್ನಾ ಮಾತಾಡ್ತಾ ಇದ್ರು. ಅದೇನೋ ಅವರನ್ನ ನೋಡೋ ನಾನು ಬಂದೆ ಅಂದ್ರೆ ಉಳಿದ ಎಲ್ಲಾ ಹುಡುಗ್ರೂ ಜಾ ಖಾಲಿ ಮಾಡಿಬಿಡೋರು. ಆಗಾಗ ಊಟಕ್ಕೆ ಕರೆಯೋ ಇಲ್ಲನ್ನಾ ಊಟ ಆಗ್ಯೆತೆ ಅಂತ ನಾನೇ ಹೇಳಿ ಕಳಿಸ್ತ

ಇನ್ನೇನು ಎಂಡಿ ನಾಳೆ ರಿಲೀಜಾಗ್ತಿದ್ದಾರೆ ಅನ್ ಹಿಂದಿನ ದಿನ ನನ್ನನ್ನ ಬರೋಕ್ಕೆ ಹೇಳಿದ ಮಾತಾಡಿಸಿಲ್ಲ ಅಂತ ಬೇಜಾರ್ ಮಾಡ್ ಬ್ಯಾಡ ಕಣೋ ನಾಳೆ ರಿಲೀಜ್ ಆಗ್ತಿದ್ದ ಅಂದ್ರು. ಬ್ರೂಸ್ಲೀ, ಅಂಕಲ್ ನಾಯ್ಡು ಸೂ ಎಲ್ಲಾ ಸೇರಿ ನನ್ನನ್ನ avoid ಮಾಡ ಇರೋದರ ಬಗ್ಗೆ ಅವರಲ್ಲಿ ಹೇಳಿಕೊಂಡೆ.

ಆಗ ಎಂಡಿ 'ನೀನೂ ಒಂದೇ. ಸೂರಿನ ಒಂದೇ ನನಗೆ ಎಲ್ಲಾರೂ ಒಂದೆ ಕಣೋ ಅಂದ್ರು. ಅದಾಗಿ ಸರಿಸುಮಾರು ವರ್ಷ ಸೂರೀನೇ ಬಂದು ಎಂಡಿ ಕರೀತಾವ್ರೆ; ಹು ಹನುಮೇಗೌಡನ ಪಾಳ್ಯದಲ್ಲಿ ಅವ ಹುಟ್ಟುಹಬ್ಬದ ಪ್ರಯುಕ್ತ ಸಾಮೂಹಿಕ ವಿವಾ ಮಾಡ್ತಿದ್ದಾರೆ ಅಂದ. ಎಲಾ ಇವ್ನ? ಎಂ ಕರೀತಿದ್ದಾರೆ ಅಂತ ನನಗೆ ಸೂರಿ ಹೇಳೋದಾ ಸೂರಿನ್ನ ಎಂಡಿಗೆ ಪರಿಚಯ ಮಾಡಿಕೊಟ್ಟಿದ ನಾನು. ಜೇಕೆಗೆ ಬೇಕಿದ್ರೆ ನನಗೇ ಡೈರೆಕ್ಟಾ ಹೇಳಬೇಕಿತ್ತು, ಅದನ್ನ ಬಿಟ್ಟು ನನ್ನ ಶಿಷ

ಕೈಯಲ್ಲಿ ಹೇಳಿ ಕಳಿಸೋದು ಅಂದ್ರೇನು? ಎಂ ಬರ್ತ್‌ಡೇಗೆ ಹೋಗಲೇಬಾರ್ದು ಅಂತ ಅವತ್ತೇ ಡಿಸೈ ಮಾಡ್ದೆ!


ಇದಾಗಿ ವಾರಕ್ಕೇ ಎಂಡಿಯಿಂದ ಫೋನ್ ಬಂತ ನಿನ್ನತ್ರ ಮಾತಾಡ್ಬೇಕು ಬಾರೋ ಅಂತ ಕರೆಸ್ಕೊಂಡ ಯಾಕೋ ಬರ್ತ್‌ಡೇಗೆ ಬರಲಿಲ್ಲ ಅಂದ್ರು. ಯಾರ ಬರ್ತ್‌ ಅಂದೆ. ಯಾಕೋ ಸೂರಿ ಹೇಳ್ಲಿಲ್ವೇನೋ ಅಂತ ಕೇಳಿದ ನಾನು ಖಡಕ್ಕಾಗೇ ಹೇಳ್ದೆ. ಯಾಕಣ್ಣಾ ಬರ್ತ್‌ಡೇಗೆ ಬರೋ ನೀವು ಹೇಳಿದ್ರಾ? ಅಥವಾ ನಾಯ್ಡು ಹೇಳಿದ್ನಾ? ಹೇಳಿ ಸೂರಿ. ಸೂರಿ ಯಾರಣ್ಣಾ? ಸೂರೀನ ನಾನು ನಿವ ಪರಿಚಯಿಸಿ ಕೊಟ್ನಾ? ಅಥವಾ ಅವನು ನನ ಪರಿಚಯಿಸಿಕೊಟ್ನಾ? ಬರ್ತ್‌ಡೇಗೆ ಕರಕೊಂಡು ಬರೋ ಅವನ್ನಾ ಕಳಿಸೋದು? ಅಂತ ಮುಖ ಹೊಡೆದಂಗೆ ಕೇಳಿಬಿಟ್ಟೆ. ತಪ್ಪಾ; ನೀ ಹೇಳಿ?



ಜೇಕೆ

ತಮ್ಮಯ್ಯನ ಮರ್ಡರ್ ಆದಮೇ ಸೂರಿಗೆ 'ಗುರೂ' ಅನ್ನೋದಕ್ಕೆ ಹ ಜನಾ ಹುಟ್ಟಿಕೊಂಡರು. ನನ್ನತ್ರ ಇ ಅಮ್ಮಾ ಅಕ್ಕಾ ಅಂತ ಬೈಸಿಕೊಳ್ಳೋದ ತಾನೇ ಬಾಸ್ ಆಗಿಬಿಟ್ರೆ? ಇದು ಸೂರಿ ಪ್ಲಾನ್ ಆಗಿತ್ತು. ಅದಕ್ಕೆ ನಾಯ್ಡು ಅಂಕ ಕುಮ್ಮಕ್ಕು ಕೊಟ್ಟ. ಅವನೊಬ್ಬ ಬ ಅಂತ ಇದ್ದಾನೆ. ಗುಂಡಸೇನಯ್ಯಾ ನೀನು ಅಂತ ಅವನ್ನ ನಾನೇ ಗೇಲಿ ಮಾಡಿ ಎಲ್ಲಾ ಸೇರಿ ಸೂರಿನ್ನ ನನ್ನ ವಿರುದ್ಧ ಎತ್ತಿಕಟ್ಟಿದ್ರು. ನಾನು ಬಳ್ಳಾರಿ ಜೈಲಿಗೆ ಹಾಕಿಸಿಕೊಂ ಸೂರಿ ಬೆಂಗಳೂರು ಜೈಲಲ್ಲಿದ್ದ. ಫೀಲ್ಡಲ್ಲಿ ಬೆಳೆದುಬಿ ನಾನು ಕುಂಟು ಕುದುರೆ ಆಗಿಬಿಟ್ಟೆ ನೋಡಿ, ಅದ ಜೇಕೆಗೆ ನಾನು ಬೇಡವಾಗಿ ಬಿಟ್ಟೆ.

ನಿನ್ನನ್ನ ಮುಗಿಸೋಕೆ ಸುನೀಲ-ಒಂಟಿ ಸಪ್ರೋ



ಗೋರಿಲ್ಲಾ ಜೊತೆ ಗೋವಿಂದ

ಕೊಡ್ತಾರೆ ಅನ್ನೋದು ನಿಜಾನಾ? ಎಂಬ ಪ್ರಶ್ನೆಗೆ ಗೋವಿಂದ ಬೇರೆಯದೇ ಉತ್ತರ ಕೊಟ್ಟ. ಸುನೀಲನಿಗಾಗಲಿ, ಒಂಟೆಗಾಗಲಿ ನನ್ನನ್ನ ಮುಗಿಸಬೇಕು ಅಂತಿದ್ರೆ ನಾನು ಇಷ್ಟು ದಿನ ಬದುಕ್ತಾನೇ ಇರ್ತಿಲ್ಲ. ಒಂಟೆ ಮತ್ತು ನಾನು ಜೈಲಲ್ಲಿ ಒಟ್ಟಿಗೇ ಇದ್ದವ್ರು. ಒಂಟೆ ಮಾತನ್ನ ಸುನೀಲ ಯಾವತ್ತೂ ತೆಗೆದುಹಾಕೊಲ್ಲ. ಜೈಲಲ್ಲಿ ಒಂಟೆ ಜೊತೆ ನಾನು ಮಾತಾಡ್ತೆ ಅನ್ನೋ ಕಾರಣಕ್ಕೆ ಬೈಕ್ ಜಗ್ಗಿ ನನ್ನನ್ನು ಅಲ್ಲಾಟ ಎಂದು ಕಿಚಾಯಿಸಿಬಿಟ್ಟ. ಬಿಡ್ತೀನಾ ಅವನ್ನ? ಹಾಗಂಥ ಜಗ್ಗಿ ಹುಡುಗ್ರನ್ನ ನಾನ್ಯಾಕೆ ದೂರ ಮಾಡ್ಲಿ? ಜಗ್ಗಿ ಕಡೆ ಹುಡುಗ್ರೆಲ್ಲ ನನ್ನತ್ರ ಚೆನ್ನಾಗೇ ಇದ್ದಾರೆ. ಆದರೆ ಜಗ್ಗಿ ಜೊತೆ ನನ್ನ ದುಷ್ಮನಿ ಇದ್ದೇ ಇದೆ(!) ಒಂಟೆ ಜೊತೆ ಮಾತಾಡಿದ್ದಕ್ಕೆ ನನ್ನನ್ನ ಅಲ್ಲಾಟ ಅಂದ ಜಗ್ಗಿನ್ನ ಮುಗಿಸದೇ ಬಿಡೋಲ್ಲ ಎಂದ ಗೋವಿಂದನ ಮಾತುಗಳೇ ಆತನ ತಂತ್ರವನ್ನು ಬಿಡಿಸಿ ಹೇಳುತ್ತಿತ್ತು.

ಪದೇಪದೇ ಹೊರಗಿದ್ದ ಹುಡುಗರನ್ನ ಬಯ್ಯುತ್ತಿದ್ದ. ಜೊತೆಗೇ ಕೂತಿದ್ದ ಸಕ್ರೆ ಅನ್ನೋ ಹುಡುಗನ್ನ ಏನೋ ತಪ್ಪು ಹೇಳಿದನೆಂದು ಹೊಡೆಯುವುದಕ್ಕೇ ಹೋದ. ಅಮ್ಮನ್, ಅಕ್ಕನ್ ಯಥೇಚ್ಛವಾಗಿ ಬಳಸುತ್ತಿದ್ದ.

ನೋಡಿ ಸಾರ್ ನನ್ನನ್ನ ನಾಯಿ ಗೋವಿಂದ ಅಂತಾರೆ. ನಾಯಿನ್ನ ನಾನು ಎಷ್ಟೊಂದು ಪ್ರೀತಿಸ್ತೀನಿ ಗೊತ್ತಾ? ನೋಡಿ ನಾಯಿಗೆ ಹಾಲು ಕುಡಿಯೋಕ್ಕೆ ಅಂತಲೇ ಬಟ್ಟಲು ತಂದು ಇಟ್ಟಿದ್ದೀನಿ ಎಂದ. ಅಷ್ಟರಲ್ಲಿ ಹೊರಗಲ್ಲೋ ನಾಯಿ ಬೊಗಳಿದಂತಾಯ್ತು. ಅದನ್ನ ಕೇಳಿಸಿಕೊಂಡಿದ್ದೇ ತಡ; ಏ ಹೋಗ್ರೋ, ಟೆರೇಸ್ ಮೇಲೆ ನಿಂತು ನೋಡ್ರೋ ಎಂದು ಹುಡುಗರನ್ನ ಅಟ್ಟಿದ. ನೋಡಿ ಬಂದ ಹುಡುಗನೊಬ್ಬ 'ಮಾಮಾ... ಯಾವ್ದೋ ಬೈಕು!' ಅಂದ.



ಸೂರಿ

ಗೋಪಾಲಯ್ಯ ಚೆನ್ನಾಗಿ ಸಪೋರ್ಟ್ ಮಾಡ್ತಾರಾ? ಎಂದು ಕೇಳಿದ್ದಕ್ಕೆ 'ಅವ್ನಾ? ಯಾರಿಗೆ ಬೇಕ್ರೀ ಆ ಗೋಪಾಲಯ್ಯನ ಸಪೋರ್ಟು? ಐದು ಸೈಟಿನ ಡೀಲಿಗೆ ನನ್ನತ್ರಾನೇ ಎರಡು ಸೈಟು ಕೇಳ್ದ. ಇನ್ನು ಅವ್ನು ಸಪೋರ್ಟ್ ಕೊಡೋದುಂಟಾ?

ನನಗೆ ಯಾರೂ ಬಾಸ್ ಅಲ್ಲ. ನಾನೇ ಕಿಂಗ್‌ಮೇಕರ್. ಈ ತಿಮ್ಮೇನಹಳ್ಳಿ ತಣ್ಣಗಾಗಬೇಕು ಅಂದ್ರೆ ಒಂದೋ ಮಾರೇನಹಳ್ಳಿ ಜಗ್ಗ ನಿಕಾಲಿ ಆಗ್ಬೇಕು ಇಲ್ಲಾಂದ್ರೆ ಈ ಗೋವಿಂದನ ಕತೇನೇ ಮುಗಿಬೇಕು. ಹಂಗಾದ್ರೆ ಮಾತ್ರಾನೇ ತಿಮ್ಮೇನಹಳ್ಳಿ ತಣ್ಣಗಾಗೋದು. ನನ್ನನ್ನ ಮುಗಿಸೋಕ್ಕೆ ದುಷ್ಮನ್‌ಗಳು ಏನೇನೋ ಸ್ಕೆಚ್ ಹಾಕ್ತಾನೇ ಇದ್ದಾರೆ. ನಾನು ಬಿಡ್ತೀನಾ? ಫೈಟ್ ಮಾಡೇ ಮಾಡ್ತೀನಿ; ಎಂದ ತಿಮ್ಮೇನಹಳ್ಳಿ ಗೋವಿಂದ. ಆವತ್ತು ರಾತ್ರಿ ಒಂದೂವರೆಯಾಗಿತ್ತು, ಹುಡುಗರೂ ಚಿತ್ತಾಗಿದ್ದರು. ಇದೇ ಆತನ ಕೊನೆಯ ಸಂದರ್ಶನವಾಗಲಿದೆ ಎಂಬುದು ಯಾರಿಗೆ ಗೊತ್ತಿತ್ತು?

ಇದಾಗಿ ಹತ್ತೇ ದಿನಕ್ಕೆ ಅಂದರೆ 2008ರ ಜನವರಿ 6ಕ್ಕೆ ತನ್ನ ಮನೆ ಹಿಂಬದಿಯಲ್ಲೇ ಮುಗಿದುಹೋಗಿದ್ದ ತಿಮ್ಮೇನಹಳ್ಳಿ ಗೋವಿಂದ. ಸಾವಿನ ವಾಸನೆ ಆತನ ಮಾತಲ್ಲೇ ಇತ್ತೆಂಬುದಕ್ಕೆ ಇದಕ್ಕಿಂತ ಬೇಕೆ? ■

ತಿಮ್ಮೇನಹಳ್ಳಿ ಗೋವಿಂದ ಸಾವಿನ ಬಲೆಗೆ ತಾನೇ ಬಂದು ಬಿದ್ದ

ಸಾವಿನ ಮನೆ ಎಂದು ಗೊತ್ತಿದ್ದೂ ಕದ ತಟ್ಟುವುದುಂಟಾ?

ಅದು ತಿಮ್ಮೇನಹಳ್ಳಿ ಗೋವಿಂದನ ಸ್ವಯಂಕೃತಾಪರಾಧವಲ್ಲದೇ ಮತ್ತೇನಲ್ಲ. ಎಲ್ಲಿ ತನ್ನ ಸಾವಿಗೆ ಬಲೆ ಬೀಸಿದ್ದಾರೋ, ಎಲ್ಲಿ ತನ್ನ ದುಷ್ಮನ್‌ಗಳ ಹುತ್ತವಿದೆಯೋ ಅಲ್ಲಿಗೇ ಬಂದು ಅದನ್ನೇ ತನ್ನ ಭದ್ರಕೋಟೆ ಎಂದುಕೊಂಡ ಗೋವಿಂದ ಕೊನೆಗೂ ತನ್ನ ತಪ್ಪಿಗೆ ದಂಡ ತೆತ್ತಿದ್ದಾನೆ.

ಅದೂ ತಲೆದಂಡ!

ಅಂಡರ್‌ವರ್ಲ್ಡ್ ಭಾಷೆಯಲ್ಲಿ ಅದನ್ನು 'ನೋ ಎಂಟ್ರಿ' ಎನ್ನುತ್ತಾರೆ. ಅದರರ್ಥ ಅಜ್ಞಾತವಾಗಿರುವುದು, ಭೂಗತನಾಗಿರುವುದು ಅಥವಾ ತಲೆಮರೆಸಿಕೊಂಡಿರುವುದು. ತಿಮ್ಮೇನಹಳ್ಳಿ ಸೂರಿ ಕೊಲೆಯಾಗುವುದಕ್ಕೂ ಎರಡು ತಿಂಗಳು ಹಿಂದಷ್ಟೇ ಜೈಲಿಂದ ಹೊರಬಿದ್ದಿದ್ದ ಗೋವಿಂದನಿಗೆ ಮುಂದಿನ ಟಾರ್ಗೆಟ್ ತಾನೇ ಎಂಬುದು ನಿಕ್ಕಿಯಾಗಿತ್ತು.



ಗೋವಿಂದ ಹತನಾದ ಸ್ಥಳ

ಸೂರಿ ಹತನಾದ ತಿಂಗಳಿಗೇ ಗೌರಿಬಿದನೂರು ರಸ್ತೆಯಲ್ಲಿ ಎರಡು ಸುಮೋ ಮತ್ತು ಒಂದು ಇನ್ನೋವಾಗಳಲ್ಲಿ ಲೇಔಟ್ ಮಂಜನ ತಮ್ಮ ನವೀನನ ಪಡೆ ಆತನ ಆಲ್ಟೋ ಮೇಲೆ ದಾಳಿಗೆ ಯತ್ನಿಸಿತ್ತು. ಆವತ್ತು ರಿವಾಲ್ವರ್ ಹೊರತೆಗೆದು ತನ್ನ ಕಾರಿನ ವೇಗ ಹೆಚ್ಚಿಸಿ ದಬಾಯಿಸಿಕೊಂಡು ಹೋಗಿ ಬಚಾವಾಗಿದ್ದ ಗೋವಿಂದನಿಗೆ ತಾನು ನೋ ಎಂಟ್ರಿಯಲ್ಲಿದ್ದಷ್ಟೂ ಅಪಾಯ ತಪ್ಪಿದ್ದಲ್ಲ ಎನ್ನಿಸಿದ್ದು ಹೇಗೆ ಅರ್ಧ ಸತ್ಯವಾಗಿತ್ತೋ ಹಾಗೇ ತಿಮ್ಮೇನಹಳ್ಳಿಗೆ ಬಂದುಬಿಟ್ಟರೆ ತಾನು ಸೇಫು ಎಂಬ ಲೆಕ್ಕಾಚಾರವೂ ಅಷ್ಟೇ ತಪ್ಪಾಗಿತ್ತು. ತನ್ನ ತಾಯಿ ನರಸಮ್ಮ ತೀರಿಕೊಂಡಿದ್ದೇ ಆತನಕ ಅಡಕಮಾರನಹಳ್ಳಿಯ ತನ್ನ ತೋಟದಲ್ಲಿ ತಂಗುತ್ತಿದ್ದ ಗೋವಿಂದ ಇದ್ದಕ್ಕಿದ್ದಂತೆ ತನ್ನ ತಿಮ್ಮೇನಹಳ್ಳಿಯ ಮನೆಗೇ ಬಂದು ಇದ್ದುಬಿಟ್ಟ. ಕನಿಷ್ಠ ನೋ ಎಂಟ್ರಿಯಲ್ಲಿದ್ದರೆ ದುಷ್ಮನ್‌ಗೆ ಆತನನ್ನು ಪತ್ತೆಹಚ್ಚುವುದು ಕಷ್ಟವಾಗುತ್ತಿತ್ತು. ಹಾಗೊಮ್ಮೆ ಪತ್ತೆಯಾದರೂ ಆ ಹೊತ್ತಿಗಾಗಲೇ ಗೋವಿಂದ ಅಡ್ಡೆ ಬದಲಾಯಿಸುತ್ತಿದ್ದ. ಒಂದು ಜಾಗದಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ಯಾವತ್ತೂ ತಂಗದವನು ಮೂರು ತಿಂಗಳುಗಳ ಕಾಲ ತನ್ನ ತಿಮ್ಮೇನಹಳ್ಳಿಯ ಮನೆಯಲ್ಲೇ ಅಡ್ಡೆ ಹಾಕತೊಡಗಿದ್ದು ಆತನ ದುಷ್ಮನ್‌ಗಳ ಅರ್ಧ ಕೆಲಸವನ್ನು ಸಲೀಸು ಮಾಡಿ ಹಾಕಿತ್ತು.

ಆತನ ಜೊತೆಗಿರುವ ಹುಡುಗರ್‍ಯಾರು? ಯಾವ್ಯಾವ ನಂಬರಿನ ಗಾಡಿಗಳಲ್ಲಿ ಓಡಾಡುತ್ತಾರೆ? ಎಷ್ಟು ಹೊತ್ತಿಗೆ ಬರುತ್ತಾರೆ? ಎಲ್ಲಿಗೆ ಹೊರಡುತ್ತಾರೆ? ಎಷ್ಟು ಜನರಿದ್ದಾರೆ? ಇತ್ಯಾದಿ ವಿವರಗಳೆಲ್ಲ ಸಲೀಸಾಗಿ ಆತನ ದುಷ್ಮನ್‌ಗಳಿಗೆ ಸಿಗತೊಡಗಿತು. ಕನಿಷ್ಠ ಸೂರಿ ಬದುಕಿದ್ದರೆ ಗೋವಿಂದನ ಬಗೆಗೊಂದು ಅವ್ಯಕ್ತ ಭೀತಿಯಾದರೂ ಇರುತ್ತಿತ್ತು. ಸೂರಿ ಕೊಲೆಯಾದ ನಂತರ ಗೋವಿಂದ ಎಷ್ಟು ಹುಷಾರಾಗಬೇಕಿತ್ತೋ ಕನಿಷ್ಠ ಅಷ್ಟನ್ನೂ ಮಾಡದೇ ಹೋದ.


ತಿಮ್ಮೇನಹಳ್ಳಿಗೆ ಅಡ್ಡೆ ಬದಲಾಯಿಸಿದ್ದೇ ಬೆಳ್ಳಂಬೆಳಿಗ್ಗೆಯೇ ಕಂಠಮಟ್ಟ ಕುಡಿದುಬಿಡುತ್ತಿದ್ದ. ಅದಕ್ಕೆ ಕಾರಣನಾದವನು ನಾಗರಬಾವಿ ರಸ್ತೆಯ ಜೈಮಾರುತಿ ವೈನ್ಸ್‌ನ ಮಾಲೀಕ ರಾಜಣ್ಣ. ಹೊನ್ನಗಿರಿಗೌಡನ ಶರಾವತಿ ಬಾರ್ ಎದುರಿಗೇ ರಾಜಣ್ಣ ತನ್ನ ವೈನ್‌ಸ್ಟೋರ್ ತೆರೆಯಲು ಹೋದಾಗ ಆತನ ವಿರುದ್ಧ ಹೊನ್ನಗಿರಿಗೌಡ ಸ್ಥಳೀಕರನ್ನು ಎತ್ತಿಕಟ್ಟಿದ್ದ. ಆಗಿನ್ನೂ ಜೈಲಲ್ಲೇ ಇದ್ದ ಗೋವಿಂದ ಯಾರೆಲ್ಲ ರಾಜಣ್ಣ ವೈನ್‌ಸ್ಟೋರ್ ವಿರೋಧಿಸುತ್ತಿದ್ದರೋ ಅಂಥ ಒಬ್ಬೊಬ್ಬರನ್ನೇ ಕರೆದು ಆವಾಜ್ ಹಾಕಿ ರಾಜಣ್ಣನ ವೈನ್ ಸ್ಟೋರಿಗೆ ತೊಂದರೆ ಕೊಡದಂತೆ ನೋಡಿಕೊಂಡ. ಇದಕ್ಕೆ ಪ್ರತಿಯಾಗಿ ರಾಜಣ್ಣ ಪ್ರತಿನಿತ್ಯ ಕನಿಷ್ಠ ಸಾವಿರ ರೂಪಾಯಿಯ ವಿಸ್ಕಿ, ಬಿಯರ್‌ನ ಕೇಸುಗಳನ್ನು ಕಪ್ಪ ಕಾಣಿಕೆಯಾಗಿ ಗೋವಿಂದನಿಗೆ ಕಳಿಸುತ್ತಲೇ ಇದ್ದ.

ಗೋವಿಂದನನ್ನು ಅರ್ಧ ನಾಶ ಮಾಡಿದ್ದೇ ರಾಜಣ್ಣನ ಈ ಬಿಟ್ಟೀ ಲಿಕ್ಕರ್. ಗೋವಿಂದ ಬಂದಬಂದವರಿಗೆಲ್ಲ ಕುಡಿಸುತ್ತಿದ್ದ, ಜೊತೆಯಲ್ಲಿದ್ದವರಿಗೂ ಕುಡಿಸುತ್ತಿದ್ದ. ಕುಡಿದ ನಶೆಯಲ್ಲಿ ಸಿಕ್ಕ ಸಿಕ್ಕವರನ್ನೆಲ್ಲ ಹಿಡಿದು ಬಡಿಯುತ್ತಿದ್ದ. ಬರುಬರುತ್ತ ಇದು ಯಾವ ಮಟ್ಟಕ್ಕೆ ಬಂತೆಂದರೆ ಇಲ್ಲಿಗೆ ಒಂದೂವರೆ ತಿಂಗಳ ಹಿಂದೆ ಕಬಡ್ಡಿ ನರಸಿಂಹ ಮತ್ತು ತಿಮ್ಮ ಯಾವುದೋ ಲ್ಯಾಂಡ್ ಡೀಲಿನಲ್ಲಿ ಕಿತ್ತಾಡಿಕೊಂಡದ್ದು ಗೊತ್ತಾಗಿದ್ದೇ ತಿಮ್ಮನನ್ನು ಕರೆದು ಮುಂಚಾಮುಂತಿ ನೋಡದೆ ಚಚ್ಚಿಬಿಟ್ಟ. ಆನಂತರ ನೀರಾನೆ ತಮ್ಮ ಬಸವನನ್ನು ಹಿಡಿದು ಬಡಿದ. ಇದೆಲ್ಲಕ್ಕೂ ಮೊದಲೇ ನೀರಾನೆ ಹರೀಶ, ಬಿ.ಎಸ್. ರವಿ, ಕರಿ ನರಸಿಂಹ, ಕಬಡ್ಡಿ ನರಸಿಂಹ, ಮೊಬೈಲ್ ರವಿ ಮುಂತಾದ ಪಂಟರುಗಳೆಲ್ಲ ಗೋವಿಂದನ ಸಹವಾಸಕ್ಕೇ ಗುಡ್‌ಬೈ ಹೇಳಿದ್ದರು. ಮಾತೆತ್ತಿದರೆ ಗೋವಿಂದ ಜೊತೆಗಿದ್ದವರನ್ನೇ ಬಯ್ಯುತ್ತಿದ್ದ. ಕೆಲವೊಮ್ಮೆ ಹೊಡೆಯುತ್ತಿದ್ದ.

ಇದೆಲ್ಲದರ ಮುಂದುವರಿಕೆಯೇ ಗೋರಿಲ್ಲಾ ಶ್ರೀಧರನನ್ನು ಗೋವಿಂದ ಹಿಡಿದು ಬಡಿದದ್ದು. ಗೋರಿಲ್ಲಾ ಮೆಂಟ್ಲು ಪ್ರಕಾಶನ ಬಂಟನಾದರೂ ಆಗಾಗ ಗೋವಿಂದನ ಮನೆಗೆ ಬರುತ್ತಿದ್ದ. ಬಹುಶಃ ನೀರಾನೆ ತಮ್ಮ ಬಸವನನ್ನು ರಿಪೇರಿ ಮಾಡುವಂತೆ ಗೋರಿಲ್ಲಾನಿಗೆ ಆದೇಶಿಸಿದ್ದನೋ ಏನೊ. ಯಾವತ್ತು ಅದನ್ನು ಮಾಡಲಿಲ್ಲವೋ ಗೋವಿಂದ ಆತನಿಗೆ ಎರಡೇಟು ಬಿಟ್ಟ. ಆಗಲೇ ಗೋವಿಂದನ ವಿರುದ್ಧ ಆತನ ಬಂಟರೇ ತಿರುಗಿಬಿದ್ದಿದ್ದಾರೆಂದು ಸುದ್ದಿ ಹಬ್ಬಿತು. ಅದಕ್ಕೆ ಗೋವಿಂದ ಟೀವಿ ನೈನ್, ಉದಯ ಟೀವಿಯವರನ್ನು ಕರೆಸಿ ಗೋರಿಲ್ಲಾನ ಜೊತೆ ನಿಂತು ವಿಶೇಷ ಸಂದರ್ಶನ ಕೊಟ್ಟಿದ್ದ.



ಗೋರಿಲ್ಲಾ



ಗೋವಿಂದನ ಅಣ್ಣ

ಇದೆಲ್ಲವನ್ನೂ ಅತ್ಯಂತ ಶ್ರದ್ಧೆಯಿಂದ ಹೊಂಚುಹಾಕುತ್ತಲೇ ಇದ್ದವನು ಮಾರನೇಹಳ್ಳಿ ಜಗ್ಗ. ಜೊತೆಗೆ ಟೀಸಿ ರಾಜ, ಲೇಔಟ್ ಮಂಜನ ತಮ್ಮ ನವೀನ ಮತ್ತು ಕಾಟ್‌ರವಿ ತಮ್ಮನ ಗ್ಯಾಂಗ್ ಕೂಡ ಹೊಂಚು ಹಾಕುತ್ತಲೇ ಇತ್ತು. ಸಾಲದ್ದಕ್ಕೆ ತಮ್ಮಯ್ಯನ ಒಂದಾನೊಂದು ಕಾಲದ ಶಿಷ್ಯರೆಲ್ಲ ದಿನಕ್ರಮೇಣ ಗೋವಿಂದನ ಸುತ್ತ ಜಮೆಯಾಗುತ್ತಲೇ ಇದ್ದರು. ಈ ಪೈಕಿ ಮಚ್ಚನ ಶಿಷ್ಯ ಕಮಲಾನಗರದ ದಿನೇಶ ಜನವರಿ ಒಂದರ ಹೊಸ ವರ್ಷದ ಪ್ರಯುಕ್ತ ತಿಮ್ಮೇನಹಳ್ಳಿಗೆ ನುಗ್ಗಿ ಗೋವಿಂದನನ್ನು ಅಟ್ಯಾಕ್ ಮಾಡುತ್ತಾನೆಂಬ ಸುದ್ದಿ ಬೇರೆ ಹಬ್ಬಿತ್ತು.

ಇದನ್ನು ಲೆಕ್ಕ ಹಾಕಿಯೇ ಡಿಸೆಂಬರ್ 30ಕ್ಕೆ ಬೆಂಗಳೂರು ಬಿಟ್ಟ ಗೋವಿಂದ ಕರಾವಳಿ ಕುಂದಾಪುರದತ್ತ ಟೂರ್ ಮಾಡಿಕೊಂಡಿದ್ದ. ಎಲ್ಲಾ ಮುಗಿಸಿ ಜನವರಿ 3ಕ್ಕೆ ಮತ್ತೆ ತಿಮ್ಮೇನಹಳ್ಳಿಗೆ ವಾಪಸ್ಸಾಗಿದ್ದಾನೆ. ಗೋರಿಲ್ಲಾನ ಜೊತೆ ಒಟ್ಟೊಟ್ಟಿಗೇ ನಿಂತು ಟಿವಿಯಲ್ಲಿ ಸಂದರ್ಶನ ಕೊಟ್ಟಿದ್ದಕ್ಕೋ ಏನೋ ಆತನಲ್ಲಿ ಅವತ್ತು ಕೊಂಚ ಅತಿಯಾದ ಆತ್ಮವಿಶ್ವಾಸ ಇತ್ತು. ಜನವರಿ 5ರ ಶನಿವಾರ ದಂಡು ದಾವಣಗೆರೆಯ ಕೌನ್ಸಿಲರ್ ಕಿರಣ್ ಸಾಂಬ್ರಾಣಿ ಇದ್ದಕ್ಕಿದ್ದಂತೆ ಗೋವಿಂದನ ಭೇಟಿಗೆಂದು ಬಂದುಬಿಟ್ಟ.

ಕಿರಣ್ ಸಾಂಬ್ರಾಣಿ ಗೋವಿಂದನ ಹಳೇ ಸಹಚರ. ರೌಡಿ ಸೋಗಿನಲ್ಲಿದ್ದೇ ದಾವಣಗೆರೆಗೆ ಕೌನ್ಸಿಲರ್ ಆದ ಕಿರಣ್ ಸಾಂಬ್ರಾಣಿ ಜೊತೆ ಚೇತನ್ ಎಂಬ ಹುಡುಗನೂ ಇದ್ದ. ಶನಿವಾರ ರಾತ್ರಿ ಎರಡರವರೆಗೂ ಇಸ್ಪೀಟಾಡಿದ ಗೋವಿಂದ ಅದರ ಮರುದಿನದ ಭಾನುವಾರ ಮಾತ್ರ ಯಾಮಾರಿಬಿಟ್ಟ. ಜನವರಿ 6ರ ಭಾನುವಾರದ ಮಧ್ಯಾಹ್ನದ ತನಕ ಇಸ್ಪೀಟಾಡಿದ ಸಾಂಬ್ರಾಣಿ ಮತ್ತು ಗೋವಿಂದ ರಾತ್ರಿ ಎಂಟೂವರೆಯಾಗುತ್ತಿದ್ದಂತೆ ತನ್ನ ಮನೆ ಹಿಂದಿನ ಗೋವಿಂದರಾಜ ಸ್ವಾಮಿ ದೇವಸ್ಥಾನದ ಗಲ್ಲಿ ಹೊಕ್ಕಿದ್ದಾನೆ. ಆಗಾಗ ಆ ಗಲ್ಲಿಯ ಮೂಲೆಮನೆಯ ಕಟ್ಟೆಯಲ್ಲಿ ಕೂತು ಕುಡಿಯುವುದು ಗೋವಿಂದನ ವಾಡಿಕೆ. ಕಿರಣ್ ಸಾಂಬ್ರಾಣಿ, ಚೇತನ್, ಟೆಂಟ್ ಹೌಸ್ ಧನಂಜಯ ಮತ್ತು ಜೊತೆಗಿಬ್ಬರು ಹುಡುಗರು ಬ್ಯಾಟರಾಯನ ಪುರ ಟ್ರಾಫಿಕ್ ಇನ್ಸ್‌ಪೆಕ್ಟರ್‌ನ ಜೀಪಿನ ಡ್ರೈವರ್ ಸ್ವಾಮಿ ಎಂಬಾತ ಗೋವಿಂದನ ಅಣ್ಣ ವೆಂಕಟನ ಮೊಬೈಲಿಗೆ ಫೋನ್ ಮಾಡಿದ್ದಾನೆ. ಈ ಮಧ್ಯೆ ಗೋವಿಂದನೇ ಆತನ ಫೋನ್ ಕಿತ್ತುಕೊಂಡು ಮಾತಾಡಿದ್ದಾನೆ. ಇಬ್ಬರೂ ಅಮ್ಮನ್ ಅಕ್ಕನ್ ಎಂದುಕೊಂಡಿದ್ದಾರೆ.

ಅಷ್ಟಕ್ಕೇ ಸುಮ್ಮನಾಗದೆ ಗೋವಿಂದ ಪೇದೆ ಸ್ವಾಮಿಯನ್ನು ತಾನು ಕುಡಿಯುತ್ತ ಕೂತಿದ್ದಲ್ಲಿಗೇ ಬರ ಹೇಳಿ ಆತನನ್ನು ಬಿಯರ್ ಬಾಟಲಿಯಿಂದ ಹೊಡೆದಿದ್ದಾನೆ. ಇಬ್ಬರ ನಡುವೆ ಸಣ್ಣದೊಂದು ಜಗಳವಾಗಿದೆ. ಹಾಗೆ ಕಚ್ಚಾಡಿದ ಮೇಲೂ ಡ್ರೈವರ್ ಕಂ ಪೇದೆ ಸ್ವಾಮಿಯನ್ನು ಕೂಡ್ರಿಸಿಕೊಂಡು ಗೋವಿಂದ ಆತನಿಗೆ ಬಿಯರ್ ಕುಡಿಸಿದ್ದಾನೆ. ರಾತ್ರಿ ಒಂಭತ್ತೂ ಕಾಲಿಂದ ಹನ್ನೊಂದೂವರೆಯ ತನಕ ಪೇದೆ ಸ್ವಾಮಿ ಅಲ್ಲೇ ಇದ್ದ. ಆದರೆ ಆತನ ಜೊತೆ ಬಂದಿದ್ದವನೊಬ್ಬ ಶುರುವಿನಲ್ಲೇ ಎದ್ದು ಹೋಗಿದ್ದ!

ಬಹುಶಃ ಈತನೇ ದುಷ್ಮನ್‌ಗಳಿಗೆ ಸುದ್ದಿ ಮುಟ್ಟಿಸಿದ್ದಾನೆ. ಜೊತೆಗೆ ಪೇದೆ ಸ್ವಾಮಿಯೂ ಟಿಪ್ಸ್ ಕೊಟ್ಟಿದ್ದಾನೆ. ಅದೇ ಹೊತ್ತಿಗೆ ಕಿರಣ್ ಸಾಂಬ್ರಾಣಿ ರಾಜಾಜಿನಗರದ ಹುಡುಗಿಯೊಬ್ಬಳನ್ನು ಗೋವಿಂದನ ಅಡ್ಡೆಗೆ ಕರೆಸಿಕೊಂಡಿದ್ದ. ಹುಡುಗಿ ಇರುವಾಗ ಅಲ್ಲಿ ಅನಗತ್ಯವಾಗಿ ಹುಡುಗರು ಬೇಡವೆಂದು ತನ್ನ ಜೊತೆ ಇದ್ದವರನ್ನೆಲ್ಲ ಮನೆಯೆದುರಿನ ತನ್ನ ಇಸ್ಪೀಟ್ ಅಡ್ಡೆಯಲ್ಲಿರುವಂತೆ ಗೋವಿಂದ ಕಳಿಸಿಕೊಟ್ಟಿದ್ದಾನೆ.

ಇದ್ದದ್ದು ಸಾಂಬ್ರಾಣಿ, ಆತನ ಜೊತೆಗಿದ್ದ ಹುಡುಗಿ ಮತ್ತು ಆತನ ಸಹಚರ ಚೇತನ್ ಮತ್ತು ಟೆಂಟ್ ಹೌಸ್ ಧನಂಜಯ ಮಾತ್ರ. ಇನ್ನೇನು ಪೇದೆ ಸ್ವಾಮಿ ಎದ್ದು ಹೊರಡಬೇಕೆನ್ನುವಷ್ಟರಲ್ಲಿ ಮೂರು ದಿಕ್ಕಿನಿಂದ ಹುಡುಗರು ನುಗ್ಗಿದ್ದಾರೆ. ಎಲ್ಲರ ಕೈಯಲ್ಲೂ ಲಾಂಗ್‌ಗಳಿದ್ದವು. ಗೋವಿಂದನ ಜೊತೆಗಿದ್ದವರೆಲ್ಲ ದಿಕ್ಕಾಪಾಲಾಗಿದ್ದಾರೆ. ಕುಡಿದು ಚಿತ್ತಾಗಿದ್ದ ಗೋವಿಂದ ಮಚ್ಚೆತ್ತಿಕೊಂಡು ಯಾರಿಗೋ ಬೀಸಿದ್ದಾನಷ್ಟೇ; ಆ ಹೊತ್ತಿಗಾಗಲೇ ಹತ್ತಿಪ್ಪತ್ತು ಏಟುಗಳು ಬಿದ್ದಾಗಿತ್ತು. ತಲೆಯೇ ಛಿದ್ರಗೊಂಡಿತ್ತು. ಬದುಕಿರಲೇ ಬಾರದೆಂದು ಸೈಜುಗಲ್ಲೆತ್ತಿ ಹಾಕಿದ್ದರು.

ಯಾವುದನ್ನು ತನ್ನ ಭದ್ರಕೋಟೆ ಎಂದುಕೊಂಡಿದ್ದನೋ ಅದೇ ಗೋವಿಂದನ ಪಾಲಿಗೆ ಸಾವಿನ ಮನೆಯಾಗಿತ್ತು. ■



ಕರಿಯ, ಸೋಮ, ಸಲೀಂ, ರಮೇಶ್, ಸೀನು, ಹರೀಶ್, ರಾಜು ದೆಡ್ಡಿ ಮತ್ತು ರಾಜ

ಕರಿಯ ಚಂದ್ರುನಿಗೂ ಒಂದು ಸೇಡಿತ್ತು

[illegible] ಯಾರಿಗೂ ವಯಸ್ಸು ಇಪ್ಪತ್ತೆರಡನ್ನು ಮೀರಿಲ್ಲ. ವಿಜಯನಗರ ಪೊಲೀಸ್ ಇನ್ಸ್‌ಪೆಕ್ಟರ್ ವೇಣುಗೋಪಾಲ್ ಮುಂದೆ ನಿಂತು ಕೊಡುತ್ತಿದ್ದ ಪೋಜು ಮುಖಭಾವ ನೋಡಿಬಿಟ್ಟರೆ ಅವರ್‍ಯಾರಿಗೂ ಪೊಲೀಸರು ಮೈಮುಟ್ಟಿಲ್ಲ ಎಂಬುದು ಗ್ಯಾರಂಟಿಯಾಗಿತ್ತು. ಕರಿಯ ಅಲಿಯಾಸ್ ಚಂದ್ರ ಈ ತಂಡದ ನಾಯಕ. ಗೋವಿಂದನನ್ನು ಆತ ಕೊಂದ ಕತೆಯನ್ನು ಆತನ ಬಾಯಲ್ಲೇ ಕೇಳಬೇಕು–

..... ತಮ್ಮಯ್ಯನ ಅಣ್ಣನ ಋಣ ತೀರಿಸೋಕ್ಕೆ ಅಂತಲೇ ನಾಯೀನ್ನ ಮುಗಿಸ್ಬಿಟ್ವಿ.

ಗೋವಿಂದ ನನ್ನನ್ನ ಪದೇಪದೇ ಹೊಡೀತಿದ್ದ. ನನ್ನ ತಂದೆ ಹೆಸರು ಎಲ್. ನರಸೇಗೌಡ ಅಂತ ತಾಯಿ ಸಾಕಮ್ಮ. ಎಸ್ಸೆಲ್ಸಿ ಫೇಲಾಗಿ, ತಮ್ಮಯ್ಯನ ಕೇಬಲ್‌ನಲ್ಲಿ ಕೆಲಸ ಮಾಡಿಕೊಂಡಿದ್ದೆ. ಅವರನ್ನ ಸೂರಿ-ಗೋವಿಂದ ಸೇರ್ಕೊಂಡು ಮುಗಿಸಿಬಿಟ್ರು, ನೋಡಿ ಅವತ್ತೇ ನಾನು ಬೀದಿಗೆ ಬಿದ್ದೆ. ಒಂದಷ್ಟು ದಿನ ಬೇರೆಲ್ಲೋ ಕೆಲಸ ಮಾಡಿದ್ದೆ. ಯಾವತ್ತು ಗೋವಿಂದ ಮತ್ತೆ ಏರಿಯಾಕ್ಕೆ ಬಂದನೋ ಕಾಟ ಶುರುವಾಯಿತು. ಒಂದು ತಿಂಗಳ ಹಿಂದೆ ಸಿಗರೇಟು ಸೇದ್ಕೊಂಡು ನಿಂತಿದ್ದ ನನ್ನನ್ನ [illegible] ತಗೊಂಡು ಕಾಲಿಗೆ ಹೊಡೆದುಬಿಟ್ಟ. ಹಾಗೇ ಸೀನೂಗೂ ಹೊಡೆದಿದ್ದ. ನಂಜೊತೆ ಸೇರ್ತಾನೆ ಅಂತ ರಾಜ ಮತ್ತು ಸಲೀಂಗೂ ಪದೇಪದೇ ಹೊಡೀತಿದ್ದ.

ನಮಗೂ ಸಾಕಾಗಿಹೋಗಿತ್ತು. ಸಾಲದ್ದಕ್ಕೆ ಇಲ್ಲಿಗೆ ವಾರದ ಹಿಂದೆ ನಮ್ಮ ಮನೆಗೆ ನುಗ್ಗಿದ್ದ ನಮ್ಮಮ್ಮನ್ನ ಭಾರಿ ಕೆಟ್ಟದಾಗಿ ಬಯ್ದುಬಿಟ್ಟ. ನಿನ್ನ ಮಗನ್ನ ಮೂಟೆ ಕಟ್ಟಿಸ್ತೀನಿ ಎಂದಿದ್ದ. ನಾನೂ ಟೈಂ ಕಾಯ್ತಾನೇ ಇದ್ದೆ. ಭಾನುವಾರ ರಾತ್ರಿ ಕುಡಿದು ಟೈಟಾಗವ್ನೆ ಅಂತ ಸುದ್ದಿ ಬಂತು. ನಾನು, ಸೋಮ, ಸಲೀಂ, ರಮೇಶ, ಸೀನು (ಫಯಾಜ್), ಹರೀಶ, ರಾಜು, ರಾಜ, ಸ್ವಾಮಿ ಮತ್ತು ದೇವಿ ಎಲ್ಲಾ ಸೇರ್ಕೊಂಡ್ವಿ. ಲಾಂಗೆತ್ಕೊಂಡು ನುಗ್ಗಿದಾಗ ಗೋವಿಂದನ ಜೊತೇಲಿದ್ದವರೆಲ್ಲಾ [illegible]. ಹುಡುಗೀನೂ ಎಲ್ಲೋ ನಾಪತ್ತೆಯಾದ್ಲು. [illegible] ಮುಗಿಸಿ ವಾಪಸ್ಸಾಗಿಬಿಟ್ವಿ. ತಮ್ಮಯ್ಯ ನಮಗೆ ಬಾಸ್ ಆಗಿದ್ರು. ಅವರ ಮೇಲಿನ ನಿಯತ್ತಿಗೆ ನಾಯಿನ್ನ (ಗೋವಿಂದ) ಮುಗಿಸಿದ್ವಿ. ನಮಗೆ ಟೀಸಿ ರಾಜ, ಜಗ್ಗ ಗೊತ್ತಿಲ್ಲ. ತಮ್ಮಯ್ಯನ [illegible] ಇರಲಿಲ್ಲ.

ಇದು ಹಂತಕ ತಂಡದ ನಾಯಕ ಕರಿಯ ಅಲಿಯಾಸ್ ಚಂದ್ರು ಒಪ್ಪಿರುವ [illegible]. ಇವನ್ನೇ ನಂಬಿದ ಇನ್ಸ್‌ಪೆಕ್ಟರ್ ವೇಣುಗೋಪಾಲ್ ಹತ್ತೂ ಜನರ ಮೇಲೆ ಎಫ್‌ಐಆರ್ ಹಾಕಿ ಕಸ್ಟಡಿಗೆ ಪಡೆದಿದ್ದಾರೆ. ನಂಬಿದ್ರೆ ನಂಬಿ ಬಿಟ್ರೆ ಬಿಡಿ ಇದೇ ಸತ್ಯ ಎನ್ನುತ್ತಾರೆ ಖಡಕ್ ಇನ್ಸ್‌ಪೆಕ್ಟರ್ ವೇಣುಗೋಪಾಲ್! ■

ನೈರುತ್ಯ ರೇಲ್ವೆಯ ನೇಮಕಾತಿಗಳಲ್ಲಿ ಕನ್ನಡಿಗರಿಗೆ ಅನ್ಯಾಯವಾಗುತ್ತಿರುವುದನ್ನು ಪ್ರತಿಭಟಿಸಿ ಈಗ ರಾಜ್ಯದೆಲ್ಲೆಡೆ ಪ್ರತಿಭಟನೆ ಶುರುವಾಗಿದೆ. ಆದರೆ ರಾಜ್ಯದ ಪ್ರಗತಿಪರರು, ಬುದ್ಧಿಜೀವಿಗಳು, ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು, ನೈಜ ಕನ್ನಡಪರ ಸಂಘಟನೆಗಳು ಕನ್ನಡಿಗರಿಗಾಗುತ್ತಿರುವ ಅನ್ಯಾಯದ ವಿರುದ್ಧ ತೆಪ್ಪಗೆ ಕುಳಿತಿದ್ದಾರೆ. ಹಾಗಾಗಿ, ಪಕ್ಕಾ ಅವಕಾಶವಾದಿಯಾಗಿರುವ ನಾರಾಯಣಗೌಡನಂತಹವರು ಈ ಹೋರಾಟಕ್ಕೆ 'ಹಾಳೂರಿಗೆ ಉಳಿದೋನೇ ಗೌಡ' ಎಂಬಂತೆ ನಾಯಕರಾಗಿಬಿಟ್ಟಿದ್ದಾರೆ. ದುರಂತ ಎಂದರೆ, ಇಂಥವರು ಗಂಭೀರ ಹೋರಾಟವೊಂದಕ್ಕೆ ನಾಯಕರಾದರೆ ಆ ಚಳವಳಿ ಗಳಿಸಬೇಕಾದ ಕನಿಷ್ಠ ಯಶಸ್ಸನ್ನೂ ಗಳಿಸುವುದಿಲ್ಲ ಎಂಬುದಕ್ಕೆ ಈ ಹೋರಾಟ ಒಂದು ಜೀವಂತ ನಿದರ್ಶನ.

ಅದು ಹುಟ್ಟಿಕೊಂಡದ್ದು ಹೀಗೆ...


ಇದೇ ಜನವರಿ 3ರಿಂದ ನೈರುತ್ಯ ರೇಲ್ವೇ ವಲಯದ ಗ್ರೂಪ್ 'ಡಿ' ದರ್ಜೆಯ ಖಲಾಸಿ ಮತ್ತು ಗ್ಯಾಂಗ್‌ಮನ್‌ನ 4701 ಹುದ್ದೆಗಳಿಗೆ ಹುಬ್ಬಳ್ಳಿ, ಬೆಂಗಳೂರು ಮತ್ತು ಮೈಸೂರುಗಳಲ್ಲಿ ನೇಮಕಾತಿ ಪ್ರಕ್ರಿಯೆ ಶುರುವಾಗಿತ್ತು. ಆದರೆ, ನೇಮಕಾತಿಯಲ್ಲಿ ಬಹುತೇಕ ಹೊರರಾಜ್ಯಗಳಿಗೆ, ಅದರಲ್ಲೂ ಬಿಹಾರ್‌ಗೆ ಸೇರಿದ ಅಭ್ಯರ್ಥಿಗಳನ್ನೇ ತುಂಬುವ ಸಂಚೊಂದು ವ್ಯವಸ್ಥಿತವಾಗಿ ನಡೆದಿತ್ತು. ಮೊದಲಿನಿಂದಲೂ ಕರ್ನಾಟಕದ ಬಗ್ಗೆ ಮಲತಾಯಿ ಧೋರಣೆಯನ್ನೇ ಅನುಸರಿಸುತ್ತಾ ಬಂದಿರುವ ರೇಲ್ವೇಯ ಈ ಕ್ರಮ ವಾಸ್ತವದಲ್ಲಿ ಹೊಸದೇನೂ ಅಲ್ಲ. ಈ ಹಿಂದಿನ ನೇಮಕಾತಿಗಳಲ್ಲಿ ಕನ್ನಡೇತರರನ್ನು ತುಂಬಿಕೊಂಡದ್ದು



ರೇಲ್ವೇ ನೇಮಕಾತಿ: ಅವಕಾಶವಾದಿಗಳ ಕೈಗೆ ಕನ್ನಡ ಹೋರಾಟ

ರೇಲ್ವೆಯ ನಾಮಫಲಕಗಳಿಂದ ಕನ್ನಡವನ್ನು ಕಿತ್ತುಹಾಕಿದ್ದು, ರಾಜ್ಯದ ರೇಲ್ವೆ ಅಭಿವೃದ್ಧಿಗೆ ಕನಿಷ್ಠ ಗಮನ ಕೊಡುತ್ತಿರುವುದು - ಹೀಗೆ ರೇಲ್ವೆಯಿಂದ ಕರ್ನಾಟಕಕ್ಕಾಗುತ್ತಿರುವ ಅನ್ಯಾಯಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಈ ಭಾರಿಯದು ಒಂದು ಲೇಟೆಸ್ಟ್ ಸೇರ್ಪಡೆ ಮಾತ್ರ.

ಕನ್ನಡಿಗರ ಮತಗಳಿಂದಲೇ ಪಾರ್ಲಿಮೆಂಟ್ ಪ್ರವೇಶಿಸಿದ ಸಂಸದರಿಗೆ ಈ ಕುರಿತು ದನಿಯೆತ್ತಲು ಪುರುಸೊತ್ತಿಲ್ಲ, ಅವರವರ ಪಾರ್ಟಿ ಕೆಲಸದಲ್ಲಿ, ಕಮೀಶನ್ ನುಂಗುವುದರಲ್ಲಿ, ಅಧಿಕಾರ ಅನುಭವಿಸುವುದರಲ್ಲೇ ಬಿಸಿಯಾಗಿರುವ ಅವರಿಗೆ ಈ ಕುರಿತು ಯೋಚಿಸುವ ವ್ಯವಧಾನವಾದರೂ ಹೇಗೆ ಬರುತ್ತೆ? ಈ ಬಾರಿ ನೇಮಕಾತಿ ಆರಂಭವಾದಾಗಲೂ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರುಗಳಲ್ಲಿ ಕನ್ನಡಿಗರು ಪ್ರತಿಭಟಿಸುತ್ತಿದ್ದರೂ ಈ ಎಂಪಿಗಳು ಬಾಯ್ಮುಚ್ಚಿಕೊಂಡೇ ಕುಳಿತಿದ್ದರು. ಯಾವಾಗ ಪ್ರತಿಭಟನೆ ತೀವ್ರಗೊಳ್ಳಲಾರಂಭಿಸಿತೋ ಆಗ ರಾಜ್ಯದಿಂದ ಹೋದ ಒಟ್ಟು 29 ಸಂಸತ್ ಸದಸ್ಯರಲ್ಲಿ ಕೇವಲ 6 ಜನ ಮಾತ್ರವೇ 'ನಾವು ನಿಮ್ಮೊಂದಿಗಿದ್ದೇವೆ' ಎಂದು ಹೋರಾಟ ನಿರತ ಕನ್ನಡಿಗರಿಗೆ ಹೇಳಿ ತೆಪ್ಪಗಾಗಿದ್ದಾರೆ. ಉಳಿದವರಿನ್ನೂ ನಿದ್ದೆಯಿಂದೆದ್ದಿಲ್ಲ, ತನ್ನ ಬಾಯಿಹರುಕುತನಕ್ಕೆ ಸುಪ್ರಸಿದ್ಧವಾಗಿರುವ ಸಂಸದೆ ತೇಜಸ್ವಿನಿ ಇಲ್ಲದ ವಿರೋಧಿ ಹೇಳಿಕೆ ನೀಡಿ ನಗೆಪಾಟಲಿಗೀಡಾದದ್ದೂ ಆಯಿತು. ರಾಜ್ಯದ ಕೇಂದ್ರ ಮಂತ್ರಿಗಳಾದ ಮುನಿಯಪ್ಪ ಹಾಗೂ ರಾಜಶೇಖರನ್ ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಹೋರಾಡುತ್ತಿರುವ ಕನ್ನಡಿಗರೊಂದಿಗೆ ಕೈಜೋಡಿಸುವುದನ್ನು ಬಿಟ್ಟು 'ಲಾಲೂ ಮೇಲೆ ಒತ್ತಡ ತರುತ್ತೇವೆ' ಎಂದು ರೀಲು ಬಿಟ್ಟರು. ಇದನ್ನೆಲ್ಲಾ ಚೆನ್ನಾಗಿ ಬಳಸಿಕೊಂಡ ಕರ್ನಾಟಕ ರಕ್ಷಣಾ ವೇದಿಕೆಯ (ಕರವೇ) ನಾರಾಯಣಗೌಡನಂತವರು ಹಠಾತ್ತನೆ ಹುಟ್ಟಿದ ಈ ಹೋರಾಟಕ್ಕೆ ಅಧಿಕೃತ ನಾಯಕರಾಗಿಬಿಟ್ಟರು.



ಅದರಲ್ಲೂ ನಾರಾಯಣಗೌಡನಂತೂ ಜನರ ಭಾವನೆಗಳನ್ನು ಎನ್‌ಕ್ಯಾಶ್ ಮಾಡಿಕೊಂಡು ಇಡೀ ಹೋರಾಟದ ದಿಕ್ಕು ಬದಲಿಸಿಬಿಟ್ಟ. ಅಷ್ಟರಲ್ಲಿ ಕರ್ನಾಟಕ ಸರ್ಕಾರವೂ ರೇಲ್ವೇ ಇಲಾಖೆಗೆ ಪತ್ರಬರೆದು ತನ್ನಿಂದ ರೇಲ್ವೆಗೆ ರಕ್ಷಣೆ ಕೊಡಲು ಸಾಧ್ಯವಿಲ್ಲ, ನೇಮಕಾತಿ ಪರೀಕ್ಷೆಯನ್ನು ಮೂರು ತಿಂಗಳು ಮುಂದೂಡಬೇಕೆಂದು ಶಿಫಾರಸ್ಸು ಮಾಡಿಬಿಟ್ಟಿತು. ಅದೆಲ್ಲದರ ಫಲಶೃತಿಯೇ ಈಗ ನೇಮಕಾತಿ ಪರೀಕ್ಷೆ ಮೂರು ತಿಂಗಳು ಮುಂದೆ ಹೋಗಿದೆ.

ದುರಂತ ಎಂದರೆ ಬಂಡವಾಳಶಾಹಿ ರಾಜಕೀಯ ಪಕ್ಷಗಳ ಮೂರ್ಖತನ, ಕಮ್ಯೂನಿಸ್ಟ್ ಪಕ್ಷಗಳ ಸಮಯಸಾಧಕತನ, ಸಾಹಿತಿಗಳ, ಪ್ರಗತಿಪರರ ನಿರ್ಲಕ್ಷ್ಯತನ, ಕನ್ನಡಪರ ಸಂಘಟನೆಗಳ ಬೇಜವಾಬ್ದಾರಿತನ ಎಲ್ಲಾ ಸೇರಿಕೊಂಡು ನಾರಾಯಣಗೌಡನಂತಹ ಅವಕಾಶವಾದಿಯನ್ನು ಈ ಚಳವಳಿಯ ನಾಯಕನನ್ನಾಗಿ ಮಾಡಿಬಿಟ್ಟಿವೆ. ಆತ ಈ ಚಳವಳಿಯನ್ನು ತನ್ನ ವರ್ಚಸ್ಸನ್ನು ಹೆಚ್ಚಿಸಿಕೊಳ್ಳುವುದಕ್ಕೋಸ್ಕರ, ಅದರಿಂದ ರಾಜಕೀಯ ಲಾಭಗಳಿಸುವುದಕ್ಕೋಸ್ಕರ ಮಾಡಿಕೊಳ್ಳುತ್ತಾನೆಯೇ ವಿನಃ ಅದರಿಂದ ಕನ್ನಡಿಗರ, ಕರ್ನಾಟಕದ ಅಭಿವೃದ್ಧಿಯಂತೂ ಆಗುವುದಿಲ್ಲ, ಇದು ಕರ್ನಾಟಕದ ದುರಂತ. ಕನ್ನಡಪರ ಚಳವಳಿಗೆ ಬಂದಿರುವ ದುಸ್ಥಿತಿ.

ಜಿಎಮ್ ಏನಂತಾರೆ?

ವಾಸ್ತವದಲ್ಲಿ ಲಾಲೂನ ಪುಂಗಿಗೆ ತಕ್ಕಂತೆ ತಲೆಯಲ್ಲಾಡಿಸುವ ನೈರುತ್ಯ ರೇಲ್ವೇಯ ಜನರಲ್ ಮ್ಯಾನೇಜರ್ ಪ್ರವೀಣ್ ಕುಮಾರ್ ಒಟ್ಟಾರೆ ಚಳವಳಿಯ ದಿಕ್ಕು ತಪ್ಪಿಸಲು ರೇಲ್ವೆಯ ಸಾಧನೆಗಳ ಪಟ್ಟಿಯನ್ನು ಮುಂದಿಡುತ್ತಾನೆ. 'ರಾಜ್ಯದಲ್ಲಿ ರೇಲ್ವೆ ಅಭಿವೃದ್ಧಿ ಕಾರ್ಯಗಳು ಸ್ಥಗಿತಗೊಳ್ಳುತ್ತವೆ, ಹೊಸ ರೈಲುಗಳನ್ನು ಆರಂಭಿಸುವುದಕ್ಕೆ ಯೋಚನೆಯಿದ್ದರೂ ಗ್ಯಾಂಗ್‌ಮನ್‌ಗಳ ಕೊರತೆಯಿಂದ ಸಾಧ್ಯವಾಗುತ್ತಿಲ್ಲ, ಹಾಸನ-ಮಂಗಳೂರು ಗೇಜ್ ಪರಿವರ್ತನೆಗೆ, ಹುಬ್ಬಳ್ಳಿ-ಮಂಗಳೂರು ರೈಲು ಆರಂಭಕ್ಕೆ ಗ್ಯಾಂಗ್‌ಮನ್‌ಗಳೇ ಕೊರತೆ, ಈ ಹಿಂದೆ ನಡೆದ ರೇಲ್ವೇ ನೇಮಕಾತಿಯಲ್ಲಿ ಸ್ಥಳೀಯರಿಗೇ ಹೆಚ್ಚಿನ ಆದ್ಯತೆ ನೀಡಲಾಗಿತ್ತು' - ಹೀಗೆ ಬೆಳೆಯುತ್ತಾ ಹೋಗುತ್ತದೆ ಆತನ ಭಾಷಣ. ಈ ಹಿಂದೆ ನಡೆದ ನೇಮಕಾತಿ ಎಂದರೆ ಅವರರ್ಥದಲ್ಲಿ ದಕ್ಷಿಣ ಮಧ್ಯ ರೇಲ್ವೆಯ ಕಡೆಯಿಂದ ಸಿಕಂದರಾಬಾದ್‌ನಲ್ಲಿ ನಡೆಸಲಾದ ನೇಮಕಾತಿ. ಅಲ್ಲಿ ಆಂಧ್ರದವರಿಗೇ ಹೆಚ್ಚಿನ ಅವಕಾಶ ಸಿಕ್ಕಿತ್ತೇ ಹೊರತು ಕನ್ನಡಿಗರಿಗಲ್ಲ.

ರೇಲ್ವೆ ಇಲಾಖೆಯೇ ಸ್ಪಷ್ಟಪಡಿಸಿರುವಂತೆ ಈ ಬಾರಿಯ ಗ್ರೂಪ್ 'ಡಿ' ದರ್ಜೆಯ ನೌಕರರ ನೇಮಕಾತಿಗಾಗಿ ಒಟ್ಟು ನಾಲ್ಕು ಲಕ್ಷ ಅರ್ಜಿಗಳು ಬಂದಿವೆ. ಅದರಲ್ಲಿ 3.6 ಅರ್ಹ ಅಭ್ಯರ್ಥಿಗಳಿಗೆ ಪತ್ರಕಳಿಸಲಾಗಿದೆ. ಇವರಲ್ಲಿ 1,03,262 ಜನ ಕನ್ನಡಿಗರು (ಶೆ. 28?), ಬಿಹಾರಿಗಳು 61,309 (ಶೆ. 17?), ಎರಡು ಲಕ್ಷ ಮಂದಿ ಇತರೆ ರಾಜ್ಯಗಳಿಗೆ ಸೇರಿದವರು. ಜನವರಿ ಮೂರರಿಂದ ದೈಹಿಕ ಪರೀಕ್ಷೆ ಇತ್ತು. ಇದರಲ್ಲಿ ಹಾಜರಾದವರು ಕೇವಲ 9116 ಮಂದಿಯಾದರೆ, ಆಯ್ಕೆಯಾದವರು 1746 ಜನ ಮಾತ್ರ. ಇವರಲ್ಲಿ ಕರ್ನಾಟಕದವರು 623 ಜನ ಮಾತ್ರ (ಶೇ. 38?). ಅಂದರೆ, ಕರ್ನಾಟದಲ್ಲಿನ ಹುದ್ದೆಗಳಲ್ಲಿ ಕನ್ನಡಿಗರಿಗೆ ಅರ್ಧದಷ್ಟು ಉದ್ಯೋಗವೂ ಇಲ್ಲ ಎಂದಾಯಿತು.

ಪುರುಷರು 1500 ಮೀಟರ್ ಓಟವನ್ನು ಆರು ನಿಮಿಷಗಳಲ್ಲಿಯೂ, ಮಹಿಳೆಯರು ನಾನೂರು ಮೀಟರ್ ಓಟವನ್ನು ನಾಲ್ಕು ನಿಮಿಷಗಳಲ್ಲಿಯೂ ಓಡಬೇಕು. ಅದೂ ಅಲ್ಲದೇ ಪರೀಕ್ಷೆಯ ಅರ್ಜಿಯನ್ನು ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತ್ರವೇ ತುಂಬಬೇಕು. ಅಂದರೆ, ಇವೆಲ್ಲ ಸ್ಥಳೀಯರನ್ನು ರೇಲ್ವೇ ನೇಮಕಾತಿಯಿಂದ ಹೊರಗಿಡಲು ಮಾಡಿರುವ ತಂತ್ರಗಳಲ್ಲದೇ ಮತ್ತೇನಲ್ಲ.


ಕೇಂದ್ರ ಸರ್ಕಾರದ ಹುದ್ದೆಗಳಲ್ಲಿ ಯಾವುದೇ ಒಂದು ರಾಜ್ಯದ, ಒಂದು ಪ್ರದೇಶದ ಜನರೇ ತುಂಬಿಕೊಳ್ಳುವುದನ್ನು ತಪ್ಪಿಸುವುದಕ್ಕಾಗಿಯೇ ಸರೋಜಿನಿ ಮಹಿಷಿ ವರದಿಯು ಶಿಫಾರಸ್ಸೊಂದನ್ನು ಮಾಡಿದೆ. ಅದರ ಪ್ರಕಾರ ಕೇಂದ್ರ ಸರ್ಕಾರದ ಸ್ಥಳೀಯ ಹುದ್ದೆಗಳಲ್ಲಿ ಕನಿಷ್ಠ ಶೇ. 80ರಷ್ಟು ಹುದ್ದೆಗಳಿಗೆ ಸ್ಥಳೀಯರನ್ನೇ ನೇಮಿಸಬೇಕು. ಆದರೆ ಅದು ಕಾಗದದ ಮೇಲೆ ಮಾತ್ರ ಉಳಿದುಕೊಂಡಿದೆ.

ಮುಂದೇನು?

ನೇಮಕಾತಿ ಪರೀಕ್ಷೆಯಂತೂ ಮೂರು ತಿಂಗಳು ಮುಂದೆ ಹೋಗಿದೆ. ಆಗಲೂ ರೇಲ್ವೇ ಇಲಾಖೆ ಈಗ ಮಾಡಿದ ಕುತಂತ್ರ ವನ್ನು ಮಾಡುವುದಿಲ್ಲ'ಎಂದು ಖಡಾಖಂಡಿತವಾಗಿ ಹೇಳಲಾ ಗುವುದಿಲ್ಲ, ಅಲ್ಲದೇ ನಾರಾಯಣಗೌಡನಂತ ಅವಕಾಶವಾದಿಗಳು ಈಗ ಮಾಡುತ್ತಿರುವಷ್ಟೆ ಅರ್ಭಟವನ್ನು ಮುಂದುವರೆಸುತ್ತಾರೆಂದು ಹೇಳಲು ಬರುವುದಿಲ್ಲ, ಆದ್ದರಿಂದ ಎಲ್ಲ ರಾಜಕೀಯ ಪಕ್ಷಗಳ ಸಂಸದರು ಪಕ್ಷಭೇದ ಮರೆತು ದೆಹಲಿಯಲ್ಲಿ ಪ್ರತಿಭಟನೆ ಮಾಡಬೇಕು. ಇತ್ತ ರಾಜ್ಯದಲ್ಲಿ ಎಲ್ಲ ರಾಜಕೀಯ ಪಕ್ಷಗಳು, ಪ್ರಗತಿಪರ ಸಂಘಟನೆಗಳು, ಬುದ್ಧಿಜೀವಿಗಳು, ಸಾಹಿತಿಗಳು ಒಕ್ಕೊರಲಿನಿಂದ ಚಳವಳಿಗೆ ಧುಮುಕಬೇಕು. ಇದು ಕೇವಲ ರೇಲ್ವೆ ನೇಮಕಾತಿಯಲ್ಲಿ ಕನ್ನಡಿಗರಿಗಾಗುತ್ತಿರುವ ಅನ್ಯಾಯದ ವಿರುದ್ಧದ ಚಳವಳಿಯಲ್ಲ, ರೇಲ್ವೇ ಇಲಾಖೆಯಿಂದ ಮೊದಲಿನಿಂದಲೂ ಕನ್ನಡಿಗರಿಗೆ, ಕರ್ನಾಟಕಕ್ಕೆ ಆಗುತ್ತಿರುವ ತಾರತಮ್ಯ, ಅನ್ಯಾಯಗಳನ್ನು ಹೋಗಲಾಡಿಸು ವುದಕ್ಕಾಗಿ ನಡೆಯುವ ಚಳವಳಿಯಾಗಬೇಕು. ಆಗ ಮಾತ್ರ ಲಾಲು ಬಗ್ಗುತ್ತಾರೆ. ಮುಂದುವರಿದು, ಸ್ಥಳೀಯವಾಗಿ ಸೃಷ್ಟಿಯಾಗುವ ಕೇಂದ್ರ ಸರ್ಕಾರದ ಉದ್ಯೋಗಗಳಲ್ಲಿ ಸಂಪೂರ್ಣವಾಗಿ ಸ್ಥಳೀಯರನ್ನೇ ಭರ್ತಿ ಮಾಡಿಕೊಳ್ಳಬೇಕೆಂಬ ವಿಶಾಲ ಬೇಡಿಕೆಯನ್ನು ಮುಂದಿಟ್ಟು, ಅದಕ್ಕಾಗಿ ಹೊಸ ನೀತಿಯನ್ನೇ ರೂಪಿಸುವಂತೆ ಕೇಂದ್ರದ ಮೇಲೆ ಒತ್ತಡ ಹೇರಬೇಕು.

■ ವರದಿಗಾರ

ದರೋಡೆಗೆ ಇಳಿದ ಬಿಜೆಪಿಗಳು!


ಪ್ರಹ್ಲಾದ್ ಜೋಷಿ ಶಿವಾನಂದ ಭಟ್ ವೆಂಕಟೇಶ್ ಮೇಸ್ತ್ರಿ ಉಮೇಶ್

ತಮ್ಮ ಪಕ್ಷ ಅಧಿಕಾರದಿಂದ ಕೆಳಗಿಳಿದ ಮೇಲೆ ಬಿಜೆಪಿಗಳಿಗೆ ಬಿಟ್ಟಿ ಆಮದನಿ ಕಡಿಮೆಯಾದಂತೆ ಕಾಣುತ್ತಿದೆ. ಆದ್ದರಿಂದಲೇ ಒಬ್ಬೊಬ್ಬರು ಒಂದೊಂದು ಅಡ್ಡದಾರಿ ಹಿಡಿದಿದ್ದಾರೆ. ಅಂತೆಯೇ ಸಂಸದ ಪ್ರಹ್ಲಾದ ಜೋಶಿಯ ಭಟ್ಟಂಗಿಗಳು ಹಿಡಿದದ್ದು ಮಾತ್ರ ಪಕ್ಕಾ ವಂಚನೆಯ ದಾರಿ. ಅವರಿವರಿಗೆ ಟೋಪಿ ಹಾಕೋದು ಲಕ್ಷಾಂತರ ರೂಪಾಯಿ ಗುಳುಂ ಮಾಡೋದನ್ನೇ ತಮ್ಮ ಕಾಯಕ ಮಾಡಿಕೊಂಡಿದ್ದಾರೆ. ಮೊನ್ನೆ ಬೆಳ್ಳಿ-ಬಂಗಾರ ವ್ಯಾಪಾರಿಯೊಬ್ಬನಿಗೆ ಮುಂಡಾ ಮೋಚಲು ಹೋಗಿ ಸಿಕ್ಕಿಹಾಕಿಕೊಂಡು ಹುಬ್ಬಳ್ಳಿ-ಧಾರವಾಡಗಳ ಜನರಿಂದ ಛೀ...ಥೂ... ಅಂತ ಉಗಿಸಿಕೊಂಡಿದ್ದಾರೆ.

ವಂಚನೆಯ ದಂಧೆಗಿಳಿದ ಬಿಜೆಪಿಯ ತ್ರಿಮೂರ್ತಿಗಳೆಂದರೆ ಶಿವಾನ
ಭಟ್, ವೆಂಕಟೇಶ್ ಮೇಸ್ತ್ರಿ ಮತ್ತು ಪ್ರಹ್ಲಾದ್ ಜೋಶಿಯ ಆಪ್ತ ಕಾರ್ಯದ
ಉಮೇಶ್ ದೋಶಿ ಗೋಕುಲ ರೋಡಿನಲ್ಲಿ ಬೆಳ್ಳಿ-ಬಂಗಾರದ ಅಂ
ಇಟ್ಟುಕೊಂಡಿರುವ ಶಿವಾನಂದ್ ಭಟ್ ಎಂಬ ಹಲಾಲ್‌ಕೋರ ಪ್ರಹ್ಲಾ
ಜೋಶಿಯ ಬಂಟ. ಈತ ಮೊನ್ನೆ ನಡೆದ ಮಹಾನಗರ ಪಾಲಿಕೆ
ಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಸೋತು ಸಣ್ಣಗಾಗಿದ್ದಾನೆ. ಪ್ರಾಯ
ಚುನಾವಣೆಯಲ್ಲಿ ಕಳೆದುಕೊಂಡ ಹಣವನ್ನು ಮರಳಿ ಪಡೆಯುವುದಕ
ಈತ ಈ ದಂಧೆಗಿಳಿದಿದ್ದರೂ ಇರಬಹುದು. ಇನ್ನು ವೆಂಕಟೇಶ್ ಮೆ
ಹಾಲಿ ಪಾಲಿಕೆಯ ಬಿಜೆಪಿ ಸದಸ್ಯ. ದ್ವಿಚಕ್ರ ವಾಹನ ರಿಪೇರಿ ಮಾಡು
ಈತ ಕೋಮುಗಲಭೆಗಳನ್ನೆಬ್ಬಿಸಿ ಅದರಲ್ಲಿ ಚಳಿ ಕಾಯಿಸಿಕೊಳ್ಳುತ್ತಲೇ ಎರ
ಬಾರಿ ಕಾರ್ಪೊರೇಟರ್ ಆಗಿ ಸಾರ್ವಜನಿಕರ ಲಕ್ಷಾಂತರ ಹಣವನ್ನು ನು
ದುಂಡಗಾಗಿದ್ದಾನೆ. ಅದು ಪಾಪ ಸಾಕಾಗಿಲ್ಲ ಅಂತ ಕಾಣುತ್ತೆ, ಈಗ ಶಿವಾನ
ಭಟ್ಟನೊಂದಿಗೆ ಸೇರಿಕೊಂಡು ಟೋಪಿ ಹಾಕುವ ದಂಧೆಗಿಳಿದಿದ್ದಾನೆ.
ಇಬ್ಬರೊಂದಿಗೆ ಸೇರಿಕೊಂಡ ಮೂರನೇ ವ್ಯಕ್ತಿ ಸಂಸದ ಪ್ರಹ್ಲಾದ್ ಜೋಶಿ
ಆಪ್ತ ಕಾರ್ಯದರ್ಶಿ ಉಮೇಶ್ ದೋಶಿ.


ಈ ಮೂವರೂ ಸೇರಿಕೊಂಡು ಹುಬ್ಬಳ್ಳಿಯ ಸಿಬಿಟಿ ಹತ್ತಿ
ಮಳಿಗೆಯೊಂದರಲ್ಲಿ ಗುರುದತ್ತ ಸಿಲ್ವರ್ ರಿಫೈನರಿ ಎಂಬ ಬೆಳ್ಳಿ ಆಭ
ತೊಳೆದುಕೊಡುವ, ತಯಾರಿಸುವ ಅಂಗಡಿಯೊಂದನ್ನು ಇಟ್ಟುಕೊಂಡಿ
ಮಹಾರಾಷ್ಟ್ರ ಮೂಲದ ಸೋಮನಾಥ್ ನಿಕ್ಕಮ್ ಎಂಬಾತನಿಗೆ ಕಡಿ
ಬೆಲೆಗೆ ಬಂಗಾರ ಕೊಡಿಸುತ್ತೇವೆಂದು ನಂಬಿಸಿದ್ದಾರೆ. ಅದಕ್ಕಾಗಿ ಒಂದು
ದುಡ್ಡು ತಂದರೆ ದುಪ್ಪಟ್ಟು ಮೌಲ್ಯದ ಬಂಗಾರ ಕೊಡುತ್ತೇವೆಂದು ಹೇಳಿದ
ಅದನ್ನು ನಂಬಿದ ಸೋಮನಾಥ್ ನಿಕ್ಕಮ್ ಒಂದು ಲಕ್ಷದ ಐದು ಸಾ
ಹಣವನ್ನು ತೆಗೆದುಕೊಂಡು ಗೋಕುಲ ರೋಡಿನಲ್ಲಿರುವ ಶಿವಾನಂದ ಭ
ಬೆಳ್ಳಿ-ಬಂಗಾರದ ಅಂಗಡಿಗೆ ಕರೆದುಕೊಂಡು ಬಂದಿದ್ದಾನೆ. ಕುರಿಯ
ಹಳ್ಳಕ್ಕೆ ಕೆಡವಲು ಈ ತ್ರಿಮೂರ್ತಿ ವಂಚಕರು ಸೋಮನಾಥ್‌ಗೆ ನಾ
ಅಸಲಿ ಬಂಗಾರದ ಬಿಸ್ಕತ್ ತೋರಿಸಿ ಹಣ ಕೊಡುವಂತೆ ಒತ್ತಾಯಿಸಿದ
ಇವರ ವರ್ತನೆ ನೋಡಿ ಆದೇಕೋ ನಿಕ್ಕಮ್‌ಗೆ ಅನುಮಾನ ಬಂದು ತ
ಅಣ್ಣನನ್ನು ಒಂದು ಮಾತು ಕೇಳಿ ದುಡ್ಡು ಕೊಡುತ್ತೇನೆಂದು ಹೇಳಿದ
ಬಿಟ್ಟರೆ ಮತ್ತೆ ಸಿಗುವುದಿಲ್ಲ ಎಂದುಕೊಂಡು ಈ ಮೂವರು ತಮ್ಮ
ಕಾರಿನಲ್ಲಿ ನಿಕ್ಕಮ್‌ನನ್ನು ಕೂರಿಸಿಕೊಂಡು ನಿರ್ಜನ ಪ್ರದೇಶಕ್ಕೆ ಕರೆದೊಯ
ಬೆದರಿಸಿ ಒಂದು ಲಕ್ಷದ ಐದು ಸಾವಿರ ಹಣವನ್ನು ಬಲವಂತವ
ಕಿತ್ತುಕೊಂಡಿದ್ದಾರೆ!

ಇದನ್ನು ದರೋಡೆ ಎನ್ನಬೇಕೋ, ಕೇವಲ ವಂಚನೆ ಎನ್ನಬೇಕೋ
ಪ್ರಹ್ಲಾದ ಜೋಶಿಯೇ ಹೇಳಬೇಕು. ಇನ್ನೇನು ತನ್ನ ಮಾನ, ತನ್ನ ಪ
ಮರ್ಯಾದೆ ಬೀದಿಗೆ ಬಂದು ನಿಲ್ಲುತ್ತದೆ ಎಂದು ಗೊತ್ತಾಗಿ ತಕ್ಷಣ
ಸೀನಿಗೆ ಬಂದ ಪ್ರಹ್ಲಾದ್ ಜೋಶಿ ಅಷ್ಟೂ ಹಣವನ್ನು ಮರಳಿ ಕೊಡಿಸುವುದ
ಭರವಸೆ ಕೊಟ್ಟಿದ್ದಾನೆ. ಬಿಜೆಪಿಗಳು ಎಷ್ಟೇ ಮುಚ್ಚಿಟ್ಟರೂ ತಾವು ಮಾಡಿ
ದರೋಡೆ ಹುಬ್ಬಳ್ಳಿ-ಧಾರವಾಡಗಳ ಜನರ ಬಾಯಿಗೆ ಎಲೆಯಡಿಕೆಯ
ದದ್ದಂತೂ ಸತ್ಯ. ಅದೂ ಚುನಾವಣೆ ಹತ್ತಿರ ಬರುತ್ತಿರುವ ಈ ಸಂದರ್ಭದ


ಡ್ಯೂಟಿಯಲ್ಲೇ ರಾಜಕೀಯಕ್ಕಿಳಿದ ಪೊಲೀಸರು!

ಪೊಲೀಸ್ ಅಧಿಕಾರಿಗಳು ನಿವೃತ್ತಿ ಹೊಂದಿದ ಮೇಲೆ ಯಾವು
ದರೊಂದು ರಾಜಕೀಯ ಪಕ್ಷ ಸೇರಿಕೊಂಡು ರಾಜಕೀಯ ಮಾಡೋ
ಈಗ ಹಳೇ ಸುದ್ದಿ. ಈಗ ಡ್ಯೂಟಿಯಲ್ಲಿರುವಾಗಲೇ ರಾಜಕೀಯ ಮಾಡೋದ
ಹುಬ್ಬಳ್ಳಿ ಪೊಲೀಸರು ಶುರುಹಚ್ಚಿಕೊಂಡಿದ್ದಾರೆ.

ಮೊನ್ನೆ ಹುಬ್ಬಳ್ಳಿಯಲ್ಲಿ ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯ (ಆರ್‌ಪಿ
ಎಂಬ ರಾಜಕೀಯ ಪಕ್ಷ ಮತ್ತು ಸಮತಾ ಸೈನಿಕ ದಳ ಜಂಟಿಯಾ
'ಕರ್ನಾಟಕ ಉಳಿಸಿ ಜನಾಂದೋಲನ'ದ ರ್‍ಯಾಲಿಯನ್ನು ಹಮ್ಮಿಕೊಂಡಿದ್ದವು. ಶಹರ ಠಾಣೆಯ ಪೊಲೀಸ್ ಅಧಿಕಾರಿ ಎಂ.ಜಿ. ತಡಕೋಡ ಅದನ್ನು ಉದ್ಘಾಟಿಸಲು ಹೋಗೇ ಬಿಟ್ಟ. ತಾನೊಬ್ಬ ಸರ್ಕಾರಿ ಅಧಿಕಾರಿ, ಸೇವೆಯಲ್ಲಿರುವಾಗ ಯಾವುದೇ ರಾಜಕೀಯ ಪಕ್ಷದ ಚಟುವಟಿಕೆಗಳಲ್ಲಿ ಅಧಿಕೃತವಾಗಿ ಭಾಗವಹಿಸಬಾರದೆಂಬ ಕನಿಷ್ಠ ಪ್ರಜ್ಞೆಯೂ ಈತನಿಗಿಲ್ಲವೆ? ಇದನ್ನು ನೋಡಿಯೂ ಕಮೀಷನರ್ ನಾರಾಯಣ ನಡುಮನಿ ಒಂದಿಷ್ಟೂ ಕಿಮ್ಮನೆ ಸುಮ್ಮನಿದ್ದಾರೆಂದರೆ ಏನರ್ಥ?



ಯಾರೀ ಆತ್ಮಾನಂದಸ್ವಾಮಿ?



ಎಲ್ಲಿಂದಲೋ ಬಂದು ಕನ್ಯಾಡಿಯಲ್ಲಿ ನೆಲೆನಿಂತು ಆತ್ಮಾನಂದ ಸರಸ್ವತಿ ಎನಿಸಿ ಈಗ ಇದೀ ಈಡಿಗ-ಬಿಲ್ಲವರ ಕುಲಗುರು ಆಗಲು ಹಾತೊರೆಯುತ್ತಿರುವ ಕನ್ಯಾಡಿ ಸ್ವಾಮಿಯ ಪೂರ್ವಾಶ್ರಮದ ಬಗ್ಗೆ ಹತ್ತು ಹಲವು ಅನುಮಾನಗಳಿವೆ. ಒಂದು ಕಾಲದಲ್ಲಿ ಮುಂಬಯಿಯಲ್ಲಿ ನಿತ್ಯಾನಂದ ಸ್ವಾಮಿಯ ಭಕ್ತನಾಗಿ ಪ್ರಚಲಿತದಲ್ಲಿದ್ದ ಈತ ಗಣೇಶನ ಮೆರವಣಿಗೆಯಲ್ಲಿ ತೆಂಗಿನಕಾಯಿ ಒಡೆಯುವಲ್ಲಿ ಎಕ್ಸ್‌ಪರ್ಟ್ ಆಗಿದ್ದ. ನಂತರ ಮತ್ತಿನ್ನೆಲ್ಲಿಗೋ ಹೋಗಿ ನಿತ್ಯಾನಂದ ಸ್ವಾಮಿಯ ಶಿಕ್ಷಣ ಸಂಸ್ಥೆಯ ಉಸ್ತುವಾರಿ ನೋಡಿಕೊಂಡಿದ್ದ. ಕೊನೆಗೆ ಮುಂಬಯಿ ಸಹವಾಸ ಸಾಕಾಗಿ ಸೀದಾ ಧರ್ಮಸ್ಥಳಕ್ಕೆ ಬಸ್ಸು ಹತ್ತಿದ. ಆದರೆ ಅಲ್ಲಿಂದಲೂ ಕಾಲ್ತೆಗೆದು ನೆಲೆಕಂಡುಕೊಂಡದ್ದು ಮಾತ್ರ ಕನ್ಯಾಡಿಲ್ಲಿ. ಫಿಜಿರದ್ಮ ದೇವಸ್ಥಾನದಲ್ಲಿ ಭಜನೆ ಶುರು ಮಾಡಿ ಒಂದಿಷ್ಟು ಗಮನ ಸೆಳೆದಿದ್ದ ಈತನ ಬೆಂಬಲಕ್ಕೆ ಆಗ ಶಾಸಕ ಕೆ. ಗಂಗಾಧರ ಗೌಡ ನಿಂತಿದ್ದರು.

ಯಾವಾಗ ಒಂದಿಷ್ಟು ಲೋಕಲ್ ಜನರ ಬೆಂಬಲ ಗಿಟ್ಟಿಸಿಕೊಂಡನೋ ತಡಮಾಡದೇ ತನ್ನದೇ ಸ್ವಂತ ಆಶ್ರಮವೊಂದನ್ನು ಸ್ಥಾಪಿಸಿಬಿಟ್ಟ. ಭಜನೆ ಮಾಡುತ್ತಾ, ಅವಲಕ್ಕಿ ಶರಭತ್ ಹಂಚುತ್ತಾ ಒಂದಿಷ್ಟು ಭಕ್ತರನ್ನು ಸಂಪಾದಿಸಿದ್ದ ಈ ಆತ್ಮಾನಂದನನ್ನು ಜನ ಭಂಟರ ಸ್ವಾಮಿಯೆಂದೇ ನಂಬಿದ್ದರು. ಇದು ಆತನಿಗೆ ವರ್ಕ್‌ಔಟ್ ಆಗದೇ ಆತ ಬಿಲ್ಲವರ ಸ್ವಾಮಿ ಎಂದು ಬಿಂಬಿಸುವುದಕ್ಕೂ, ಧರ್ಮಸ್ಥಳ ಜನಜಾಗೃತಿ ಸಂಘದವರು ಬೆಳ್ತಂಗಡಿಯನ್ನು ಮದ್ಯಮುಕ್ತ ತಾಲ್ಲೂಕು ಮಾಡಲು ಹೊರಟದ್ದಕ್ಕೂ ಸರಿಯಾಗಿ ಹೋಗಿತ್ತು. ಜನಜಾಗೃತಿ ಸಂಘದವರ ಮದ್ಯನಿಷೇಧ ಹೋರಾಟದಿಂದ ಆಮದನಿ ಕಳೆದುಕೊಂಡ ಬಿಲ್ಲವ ಜನಾಂಗದ ಮದ್ಯದ ದೊರೆಗಳೆಲ್ಲಾ ಆತ್ಮಾನಂದನ ಬಳಿ ಒಗ್ಗಟ್ಟಾದರು.

ಧರ್ಮಸ್ಥಳದ ಪಟೇಲರಾಗಿದ್ದ ದೊಂಡೋಳೆ ಸೂರ್ಯನಾರಾಯಣ ರಾವ್ ಧರ್ಮಸ್ಥಳದ ದೊರೆಗಳ ವಿರೋಧದ ನಡುವೆಯೇ ಕನ್ಯಾಡಿಯ ಸ್ವಾಮಿಗೆ ಆಯಕಟ್ಟಿನ ಜಾಗದಲ್ಲಿ ಭೂಮಿಯನ್ನು ದಾನ ರೂಪವಾಗಿ ನೀಡಿ ಫಿಟ್ಟಿಂಗ್ ಇಟ್ಟಿದ್ದರು. ಅಷ್ಟರಲ್ಲಾಗಲೇ, ಧರ್ಮಸ್ಥಳಕ್ಕೆ ಬರುವ ಭಕ್ತಾದಿಗಳನ್ನು ಆಕರ್ಷಿಸಲೆಂದೇ ಅಲ್ಲೊಂದು ದೇವಳ ಕಟ್ಟುವ ಕನಸು ಸ್ವಾಮೀಜಿಯ ಮನಸ್ಸಿನಲ್ಲಿ ಚಿಗುರೊಡೆದು ಬಿಟ್ಟಿತ್ತು. ಮಂದಿರ ನಿರ್ಮಾಣ ಸಮಿತಿಗೆ ವಸಂತ ಬಂಗೇರಾನನ್ನೇ ಅಧ್ಯಕ್ಷನನ್ನಾಗಿ ಮಾಡಿದ್ದು, ಹೆಂಡದ ದೊರೆಗಳ ಹಣ ಹರಿದು ಬಂದದ್ದು ಸೇರಿ ಕೆಲವೇ ದಿನಗಳಲ್ಲಿ ಅಲ್ಲೊಂದು ಭವ್ಯ ಶ್ರೀರಾಮ ಮಂದಿರವೂ ಎದ್ದುಬಿಟ್ಟಿತು. ಜೆ.ಪಿ.ನಾರಾಯಣಸ್ವಾಮಿ, ಜಾಲಪ್ಪ, ತಿಮ್ಮೇಗೌಡರಂತಹ ರಾಜ್ಯದ ಘಟಾನುಘಟಿಗಳೆಲ್ಲ ಆತ್ಮಾನಂದನ ಬೆನ್ನಿಗೆ ನಿಂತಿದ್ದರಿಂದ ಆತ ದರ್ಶಕ್ಕೆಗೆ ಬಂದುಬಿಟ್ಟ.

ಈಗ ಅವನ ಪರಿಸ್ಥಿತಿ ಶೋಚನೀಯವಾಗಿಬಿಟ್ಟಿದೆ. ತನ್ನನ್ನು ಬೆಳೆಸಿದವರನ್ನೇ ಕಡೆಗಣಿಸಿದ ಪರಿಣಾಮ ಅವರೆಲ್ಲ ಈಗ ಇವನಿಂದ ದೂರಹೋಗಿದ್ದು ಮಾತ್ರವಲ್ಲ, ಇವನ ವಿರುದ್ಧವೇ ಕತ್ತಿ ಮಸೆಯುತ್ತಿದ್ದಾರೆ. ಅವರೆಲ್ಲರನ್ನೂ ಎದುರಿಸಿ ನಿಲ್ಲುವಷ್ಟು ತಾಕತ್ತು ಆತ್ಮಾನಂದನಿಗಂತೂ ಇಲ್ಲ. ಅವನನ್ನು ಅದ್ಯಾರು ಕಾಪಾಡುತ್ತಾರೋ ಕಾದು ನೋಡಬೇಕಷ್ಟೆ. ■

ಆರ್ಯ ಈಡಿಗ ಸಮುದಾಯಕ್ಕೆ ಕುಲಗುರು ಯಾರು?

ಈಡಿಗ ವ್ಯಕ್ತಿಯೊಬ್ಬ ಕನ್ಯಾಡಿ ಸ್ವಾಮೀಜಿಗೆ ಉತ್ತರಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಬಿಲ್ಲವರೂ ಸೇರಿದಂತೆ ಇತರ 24 ಪಂಗಡಗಳ ಅಭ್ಯಂತರವೇನೂ ಇರಲಿಲ್ಲ. ಈ ಬಗ್ಗೆ ಮೊದಮೊದಲು ಹತ್ತು ಹಲವು ಕಂಡೀಷನ್‌ಗಳ ನಡುವೆಯೂ ಒಲ್ಲದ ಮನಸ್ಸಿನಿಂದ 'ಆಯಿತು' ಎಂದು ಗೋಣಲ್ಲಾಡಿಸಿದ್ದ ಆತ್ಮಾನಂದ ಸ್ವಾಮಿಗೆ ಮಾತ್ರ ಅಂತರ್ಯದಲ್ಲಿ ಅಸಮಾಧಾನ ಮಡುಗಟ್ಟಿತ್ತು. ■

ಸಮುದ್ರೋಲ್ಲಂಘನೆ ಮಾಡಿದ ಪುತ್ತಿಗೆ ಶ್ರೀಗಳಿಗೆ ಉಡುಪಿ ಶ್ರೀಕೃಷ್ಣನ ಪೂಜಾ ನಿರಾಕರಣೆ ವಿವಾದವೀಗ ಕೋರ್ಟ್ ಮೆಟ್ಟಲೇರಿದ ಬೆನ್ನಲ್ಲೇ ಇನ್ನೋರ್ವ ಸ್ವಾಮೀಜಿ ಇದೀ ಈಡಿಗ ಸಮುದಾಯದ ಕುಲಗುರು ಆಗಲು ಹೋಗಿ ವಿವಾದದಲ್ಲಿ ಸಿಲುಕಿಕೊಂಡು ಒದ್ದಾಡುತ್ತಿದ್ದಾನೆ. ಈತನಿಗೆ ಕುಲಗುರು ಪಟ್ಟವಲ್ಲ, ಮೂರು ಕಣ್ಣಿನ ಚಿಪ್ಪೇ ಗತಿ ಎಂಬುದು ಮಾತ್ರ ನಿಚ್ಚಳವಾಗಿದೆ. ಅಂತೂ ಕರಾವಳಿಯಲ್ಲೀಗ ಕಾವಿ ಸ್ವಾಮಿಗಳದ್ದೇ ರಾಗಾ ರಂಪ!

ಇದು ಶ್ರೀಕ್ಷೇತ್ರ ಧರ್ಮಸ್ಥಳದ ಆನತಿ ದೂರದ ಕನ್ಯಾಡಿ ಶ್ರೀರಾಮಕ್ಷೇತ್ರದ ರೂವಾರಿ ಶ್ರೀ ಆತ್ಮಾನಂದ ಸರಸ್ವತಿ ಸ್ವಾಮೀಜಿ ಕುಲಗುರು ಆಗಲು ಹೋಗಿ ಕೊನೆಗೆ ಚಿಪ್ಪು ಹಿಡಿದುಕೊಂಡ ದುರಂತ ಕತೆ. ಈತನ ಇಷ್ಟದಂತೆ ಎಲ್ಲಾ ನಡೆದಿದ್ದೇ ಆದರೆ ಇದೇ ಬರುವ ಜನವರಿ 19ನೇ ತಾರೀಖು ಬಿಲ್ಲವರು, ದೀವರು ಸೇರಿದಂತೆ ಇದೀ ಈಡಿಗ ಸಮುದಾಯದ ಎಲ್ಲಾ 26 ಉಪಪಂಗಡಗಳ ಅಧಿಕೃತ ಸ್ವಾಮಿಯಾಗಿ ಈತ ಪಟ್ಟಾಭಿಷೇಕ ಮಾಡಿಕೊಳ್ಳಬೇಕಿತ್ತು. ಅದಕ್ಕಾಗಿಯೇ ಮಂಗಳೂರಿನ ನೆಹರೂ ಮೈದಾನದಲ್ಲಿ ನಾಲ್ಕು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ಈ ಪಂಗಡಗಳಿಗೆ ಸೇರಿದ ಜನಸ್ತೋಮವನ್ನು ಕರೆತಂದು ಈಡಿಗ ಸಮುದಾಯದ ಶಕ್ತಿಪ್ರದರ್ಶನಕ್ಕೆ ಏರ್ಪಾಡು ಮಾಡಲಾಗಿತ್ತು.

ಕರ್ನಾಟಕದ ದೊಡ್ಡ ಹೆಂಡದ ಕುಳಗಳಲ್ಲಿ ಒಬ್ಬನಾದ ಈಡಿಗ ಸಮುದಾಯದ ಜೆ.ಪಿ. ನಾರಾಯಣಸ್ವಾಮಿ ಸೇರಿದಂತೆ ಇನ್ನಿತರ ಒಂಭತ್ತು ಮಂದಿಗಳು ಈ ನಿಟ್ಟಿನಲ್ಲಿ ಹಲವು ಸುತ್ತುಗಳ ಉನ್ನತ ಮಟ್ಟದ ಚರ್ಚೆಯನ್ನೂ ನಡೆಸಿದ್ದರು. ರಾಜ್ಯದ ನಾಲ್ಕನೇ ಅತಿದೊಡ್ಡ ಶಕ್ತಿಯಾದ ಈಡಿಗ-ಬಿಲ್ಲವ ಸಮುದಾಯಕ್ಕೆ ಕುಲಗುರುವಿಲ್ಲದ ಕೊರತೆಯನ್ನು ನೀಗಿಸುತ್ತಾ ಸಮುದಾಯದ ಜತೆಜತೆಗೆ ತಾನೂ ಬೆಳೆಯುಬಹುದೆಂಬ ಆಸೆಯಿಂದ ಜೆ.ಪಿ. ನಾರಾಯಣಸ್ವಾಮಿಯೂ ಸಮಾರಂಭದ ಸಿದ್ಧತೆಯಲ್ಲಿ ಬಹು ಉತ್ಸಾಹದಿಂದ ತನ್ನನ್ನು ತೊಡಗಿಸಿಕೊಂಡಿದ್ದ. ನೆಹರೂ ಮೈದಾನದಲ್ಲಿ ಹಾಕಬೇಕೆಂದಿದ್ದ ಪೆಂಡಾಲ್‌ಗಳ ರೂಪುರೇಷೆಗಳನ್ನು ತಯಾರಿಸುವುದಕ್ಕೆಂದೇ ಬೆಂಗಳೂರಿನಿಂದ ಎರಡು ಬಾರಿ ತನ್ನ ಜನಗಳನ್ನು ವಿಮಾನದಲ್ಲಿ ಕರೆತಂದಿದ್ದ.

ಸಕಲ ಸಿದ್ಧತೆಗಳೂ ಅಂತಿಮ ಹಂತಕ್ಕೆ ಬಂದಿದ್ದರಿಂದ ಆತ್ಮಾನಂದ ಸ್ವಾಮಿಯಂತೂ ಇನ್ನೇನು ಇಷ್ಟೊಂದು ದೊಡ್ಡ ಸಮುದಾಯವೊಂದರ ಏಕೈಕ ಕುಲಗುರು ಆಗೇ ಬಿಟ್ಟೆ ಎಂದು ಹುಮ್ಮಸ್ಸಿನಿಂದ ಬೀಗಲಾರಂಭಿಸಿಬಿಟ್ಟಿದ್ದರು. 'ಸ್ವರ್ಗಕ್ಕೆ ಇನ್ನೇನು ಮೂರೇ ಗೇಣು' ಇರುವಾಗಲೇ ಅಲ್ಲಿಂದ ದೊಪ್ಪನೆ ಕೆಳಗೆ ಬಿದ್ದಿದ್ದಾರೆ. ಸಾಮೂಹಿಕ ಭೋಜನದ ಜೊತೆ, ಅದ್ದೂರಿ ಸಮಾರಂಭದಲ್ಲಿ, ನಾಲ್ಕು ಲಕ್ಷಕ್ಕೂ ಅಧಿಕ ಸಂಖ್ಯೆಯ ಜನಸ್ತೋಮದ ಸಮ್ಮುಖದಲ್ಲಿ ಆತ್ಮಾನಂದ ಸ್ವಾಮಿ ಪಟ್ಟವೇರುವ ಶುಭಕಾರ್ಯಕ್ಕೆ, ಕೊನೆಗೂ ಅಡ್ಡಿಯಾದದ್ದು ದುಡ್ಡಂತೂ ಅಲ್ಲ, ಬದಲಿಗೆ, ಎಲ್ಲಾ ಬಣ್ಣ ಮಸಿ ನುಂಗಿತು ಎಂಬಂತೆ ಕನ್ಯಾಡಿ ಸ್ವಾಮಿಗೆ ಉತ್ತರಾಧಿಕಾರಿ ಯಾರೆಂಬ ಪ್ರಶ್ನೆ! ಇನ್ನೂ ಕುಲಗುರುವಿನ ನೇಮಕವೇ ಆಗಲಿಲ್ಲ, ಆಗಲೇ ಕುಲಗುರುವಿಗೊಬ್ಬ ಉತ್ತರಾಧಿಕಾರಿಯ ನೇಮಿಸಲು ಹೊರಡುತ್ತಾರೆಂದರೆ ಏನರ್ಥ? ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವುದೆಂದರೆ ಇದೇ ತಾನೆ?

ಕೇವಲ ಐದು ಕಿ.ಮೀ. ದೂರದಲ್ಲಿರುವ ಧರ್ಮಸ್ಥಳದ ವೈಭೋಗವನ್ನು ಅಣಕಿಸುವಂತೆ ಕನ್ಯಾಡಿಯಲ್ಲಿ ಮಜಬೂತಾಗಿ ಎದ್ದುನಿಂತಿರುವ ಶ್ರೀರಾಮಮಂದಿರದ ನಿರ್ಮಾಣಕ್ಕೆ ಸುಮಾರು ಇಪ್ಪತ್ತು ಕೋಟಿಗಿಂತಲೂ ಹೆಚ್ಚಿನ ಮೊತ್ತದ ದುಡ್ಡನ್ನು ಸುರಿದಂತೆ ಚೆಲ್ಲಿದ ಹೆಂಡದ ಕುಳ ಜೆ.ಪಿ. ನಾರಾಯಣಸ್ವಾಮಿಗಿದ್ದ ಏಕೈಕ ಉದ್ದೇಶವೆಂದರೆ ಬಿಲ್ಲವರ ಆತ್ಮಾನಂದ ಸರಸ್ವತಿ ಸ್ವಾಮೀಜಿಯ ನಂತರದಲ್ಲಿ ಇದೀ 26 ಈಡಿಗ ಒಳಪಂಗಡಗಳ ಸ್ವಾಮಿಯಾಗಿ ಈಡಿಗನೊಬ್ಬನೇ ಬರಬೇಕು ಎಂಬುದಾಗಿತ್ತು. ಇದು ಈಡಿಗರ ಜಾಲಪ್ಪ, ದಾಸಪ್ಪ, ಬಂಗಾರಪ್ಪನಂತಹ ಇನ್ನೂ ಅನೇಕ ನಾಯಕರುಗಳ ಅಪೇಕ್ಷೆಯೂ ಆಗಿತ್ತು. ಕರಾವಳಿಯ ಉಡುಪಿ, ಮಂಗಳೂರು ಹೊರತುಪಡಿಸಿದರೆ ಕರ್ನಾಟಕದ ಬಯಲು ಸೀಮೆಯಾದ್ಯಂತ ಬಹುಸಂಖ್ಯೆಯಲ್ಲಿರುವ ಈಡಿಗರೇ ಕನ್ಯಾಡಿ ಶ್ರೀರಾಮಮಂದಿರವನ್ನು ಸಾಕಾರಗೊಳಿಸುವಲ್ಲಿ ಬಹು ಮುಖ್ಯ ಪಾತ್ರ ವಹಿಸಿದ್ದರು.


ಈಡಿಗ ವ್ಯಕ್ತಿಯೊಬ್ಬ ಕನ್ಯಾಡಿ ಸ್ವಾಮೀಜಿಗೆ ಉತ್ತರಾಧಿಕಾರಿಯಾಗಿ ನೇಮಕಗೊಳ್ಳುವುದಕ್ಕೆ ಬಿಲ್ಲವರೂ ಸೇರಿದಂತೆ ಇತರ 24 ಪಂಗಡಗಳ ಅಭ್ಯಂತರವೇನೂ ಇರಲಿಲ್ಲ. ಈ ಬಗ್ಗೆ ಮೊದಮೊದಲು ಹತ್ತು ಹಲವು ಕಂಡೀಷನ್‌ಗಳ ನಡುವೆಯೂ ಒಲ್ಲದ ಮನಸ್ಸಿನಿಂದ 'ಆಯಿತು' ಎಂದು ಗೋಣಲ್ಲಾಡಿಸಿದ್ದ ಆತ್ಮಾನಂದ ಸ್ವಾಮಿಗೆ ಮಾತ್ರ ಅಂತರ್ಯದಲ್ಲಿ ಅಸಮಾಧಾನ ಮಡುಗಟ್ಟಿತ್ತು. ತಾನೊಬ್ಬನೇ ನಿಂತು ಇಷ್ಟೆಲ್ಲಾ ಸಾಧಿಸಿದ ನಂತರ ಅದಕ್ಕೆ ಇನ್ನೊಬ್ಬ ಯಾರೋ ಬಂದು ತನ್ನ ಕಣ್ಣೆದುರೇ ಮಾಲಿಕನಾಗಿ ಮೆರೆಯುವ ದೃಶ್ಯವನ್ನು ಆತನಿಗೆ ಕಲ್ಪಿಸಿಕೊಳ್ಳಲೂ ಕಷ್ಟವಾಗುತ್ತಿತ್ತು. ಇದೀ ಶ್ರೀರಾಮ ಮಂದಿರವೇ ತನ್ನಿಂದ ಹೈಜಾಕಾಗಿ ಬಿಡುತ್ತದೆಂಬ ಭಯ ಆತನನ್ನು ಕಾಡುತ್ತಲೇ ಇತ್ತು.



ಜನಾರ್ದನ ಪೂಜಾರಿ

ಅಂತೂ ಭರದ ತಯಾರಿ ಮತ್ತು ಗೊಂದಲಗಳ ನಡುವೆಯೇ ಆತ್ಮಾನಂದ ಸ್ವಾಮಿ ಏಕಾಏಕಿ ದುಬೈಗೆ ಹಾರಿ ವಾಪಾಸ್ಸು ಬಂದವರೇ ಪ್ಲೇಟ್ ಚೇಂಜ್ ಮಾಡಿಬಿಟ್ಟರು. 'ನಾನೇ ಇನ್ನೂ ಗುರುದೀಕ್ಷೆ ಪಡೆದಿಲ್ಲ ಇನ್ನು ಶಿಷ್ಯ ದೀಕ್ಷೆ ದೂರದ ಮಾತು' ಎಂದು ಹೇಳಿದ್ದೇ ಎಲ್ಲ ಅವಘಡಗಳಿಗೆ ನಾಂದಿಯಾಗಿಬಿಟ್ಟಿತು. ಈ ಸ್ವಾಮಿಯನ್ನು ನಂಬಿ ಶಿವಮೊಗ್ಗದ ಈಡಿಗರ ಮಾರಯ್ಯ ಸ್ವಾಮೀಜಿಗೆ ಶಿಷ್ಯದೀಕ್ಷೆ ಕೊಡಿಸಲು ನಿರ್ಧರಿಸಿದ್ದ ಹಲವರನ್ನು, ಅದರಲ್ಲೂ ವಿಶೇಷವಾಗಿ ದುಡ್ಡಿನ ಹೊಳೆ ಹರಿಸಿದ್ದ ಜೆ.ಪಿ. ನಾರಾಯಣಸ್ವಾಮಿಯನ್ನು ಕೆರಳಿಸಿಬಿಟ್ಟಿತು. ಅಲ್ಲಿಯತನಕ 'ಒನ್ ಮ್ಯಾನ್ ಶೋ' ಅನ್ನು ಸಹಿಸುತ್ತಲೇ ಜಾತಿಗುರು ಅನ್ನೊ ಒಂದೇ ಕಾರಣಕ್ಕೆ ಭರಪೂರವಾಗಿ ಹಣಚೆಲ್ಲಿದ ಜೆ.ಪಿ. ಅಂಡ್ ಕಂಪೆನಿ ಆತ್ಮಾನಂದನ ವಿರುದ್ಧ ತಿರುಗಿಬಿತ್ತು, ಆತ್ಮಾನಂದನಿಗೆ ತಕ್ಕ ಪಾಠ ಕಲಿಸಬೇಕೆಂದು ಕೊಂಡು ಒಂದು ಪತ್ರಿಕಾಗೋಷ್ಠಿಯನ್ನು ನಡೆಸಿದ ಜೆಪಿ ಕಂಪೆನಿ 'ಆತ್ಮಾನಂದನಿಗೂ ಈಡಿಗ ಸಂಘಕ್ಕೂ ಯಾವುದೇ ಸಂಬಂಧವಿಲ್ಲ, ಸಮುದಾಯದ ಯಾವ ಹಿರಿಯರನ್ನೂ, ಯಾವ ಸಂಘವನ್ನೂ ಲೆಕ್ಕಕ್ಕೆ ತೆಗೆದುಕೊಳ್ಳದೇ ಏಕಪಕ್ಷೀಯವಾಗಿ ಆತ್ಮಾನಂದರು ಪಟ್ಟಾಭಿಷೇಕ ಮಾಡಿಕೊಳ್ಳಲು ಹೊರಟಿದ್ದಾರೆ. ನಾವು ಅವರನ್ನು ಬೆಂಬಲಿಸುವುದಿಲ್ಲ, ಅವರು ಪಟ್ಟಾಭಿಷೇಕ ಮಾಡಿಕೊಳ್ಳುತ್ತೇನೆಂದು ಹೇಳುವ ಇದೇ ಜನವರಿ 19ರಂದೇ ಈಡಿಗರ ಮಾರಯ್ಯ ಸ್ವಾಮಿಯವರನ್ನು ನಮ್ಮ ಸಮುದಾಯದ ಕುಲಗುರು ಮಾಡುತ್ತೇವೆ' ಎಂದು ಘೋಷಿಸಿಬಿಟ್ಟರು. ಜೆಪಿಯ ಜೊತೆ ಬಿಲ್ಲವ ಸಂಘದ ಅಧ್ಯಕ್ಷ ಎಂ. ವೇದಕುಮಾರ್ ಕೂಡ ಕೈಜೋಡಿಸಿದ್ದರಿಂದ ಸಮಸ್ಯೆ ಮತ್ತಷ್ಟು ಬಿಗಡಾಯಿಸಿದೆ. ಅಷ್ಟೇ ಏಕೆ, ಆತ್ಮಾನಂದರಿಗೆ ಬೆಂಬಲಿಸದಿದ್ದುದು ಮಾತ್ರವಲ್ಲ ಅವರ ವಿರುದ್ಧ ಕಾನೂನುಕ್ರಮ ಜರುಗಿಸುತ್ತೇವೆಂದೂ ಅವರು ಗುಡುಗಿದ್ದಾರೆ.

ಜನವರಿ 19ಕ್ಕೆ ಏನು ನಡೆಯುತ್ತದೆಂಬುದು ಇಂದಿಗೂ ಕುತೂಹಲ ಮೂಡಿಸಿದೆಯಾದರೂ ಆತ್ಮಾನಂದನಿಗೆ ಚಿಪ್ಪುಸಿಗುವ ಎಲ್ಲಾ ಲಕ್ಷಣಗಳು ಮಾತ್ರ ಕಾಣುತ್ತಿವೆ. ಇನ್ನೊಂದು ವಿಚಾರವೆಂದರೆ ಅಂದೇ ಮಂಗಳೂರಿನಲ್ಲಿ ಕಾಂಗ್ರೆಸ್ ಪಕ್ಷದ ಜನಾಂದೋಲನ ಜಾತ್ರೆಯೂ ನಡೆಯುವುದಿದೆ. ಇವೆಲ್ಲ ಒಂದಕ್ಕೊಂದು ಪ್ರತಿಸ್ಪರ್ಧಿಯಂತಿರುವುದರಿಂದ ಭಾರಿ ಕುತೂಹಲವಂತೂ ಕೆರಳಿದೆ.



ವಸಂತ್ ಬಂಗೇರಾ

ರಾಜಕೀಯ ಅಂತೆ, ಕಂತೆ!

ಗುರು ಮಾರಯ್ಯರನ್ನು ಕುಲಗುರು ಮಾಡಲು ಹೊರಟಿರುವ ಜೆಪಿ ನಾರಾಯಣಸ್ವಾಮಿ ಅಂಡ್ ಕಂಪನಿಗೆ ವಸಂತ ಬಂಗೇರಾ ಕೂಡ ಬೆನ್ನಿಗೆ ನಿಂತಿರುವುದು ಕನ್ಯಾಡಿ ಆತ್ಮಾನಂದ ಸ್ವಾಮಿಯ ನಿದ್ದೆಗೆಡಿಸಿದೆ. ಏಕೆಂದರೆ, ಈತ ಇಲ್ಲಿಯ ತನಕ ಆತ್ಮಾನಂದನ ಬೆನ್ನಿಗೆ ನಿಂತವರು. ಇದೀಗ ದಿಢೀರ್ ಎಂದು ಟ್ರಾಕ್ ಚೇಂಜ್ ಮಾಡಿದ್ದಾರೆ. ಅದಕ್ಕೆ ಕಾರಣ ಇಲ್ಲದಿಲ್ಲ, ಬೆಳ್ತಂಗಡಿಯ ತನ್ನ ಸಾಂಪ್ರದಾಯಿಕ ರಾಜಕೀಯ ಪ್ರತಿಸ್ಪರ್ಧಿ ಕೆ. ಗಂಗಾಧರ ಗೌಡರಿಗೆ ರಾಜಕೀಯದಲ್ಲಿ ಹಿನ್ನೆಡೆಯಾಗುತ್ತಿದ್ದಂತೆ ಘುಸ್ಸ ಎಜುಕೇಷನ್ ಟ್ರಸ್ಟ್ ಅಂತ ಒಂದು ಶಿಕ್ಷಣದ ಅಂಗಡಿ ತೆರೆದು ರಾಜಕೀಯವಾಗಿ ಸಿಕ್ಕ ವಿರಾಮವನ್ನು ಶಿಕ್ಷಣ ಕ್ಷೇತ್ರದಲ್ಲಿ ಮಿಂಚಲು, ದುಡಿಯಲು ಉಪಯೋಗಿಸಿಕೊಳ್ಳಲಾರಂಭಿಸಿಬಿಟ್ಟರು. ಅದಕ್ಕೆ ಪ್ರತಿಯಾಗಿ ವಸಂತ ಬಂಗೇರಾ ಕೂಡ ಗುರು ದೇವಾನಂದ ಹೆಸರಲ್ಲಿ ಅವಸರ ಅವಸರವಾಗಿ ಕಾಲೇಜು ಸ್ಥಾಪಿಸಿ ಪೈಪೋಟಿಗೆ ನಿಂತಿದ್ದರು. ಈ ಕಾಲೇಜು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ಅದಕ್ಕೆ ಸ್ವಂತ ಕಟ್ಟಡ ಕಟ್ಟಲು ಸಹಕರಿಸುವಂತೆ ಈತ ಸ್ವಾಮಿಜಿಗೆ ಬೇಡಿಕೊಂಡಿದ್ದ. ಅಲ್ಲಿಯತನಕ ವಸಂತ ಬಂಗೇರಾರನ್ನು ಆಗಾಗ ತನ್ನ ಸ್ವಂತ ವರ್ಚಸ್ಸಿಗಾಗಿ ಬಳಸಿಕೊಂಡು ಬಂದಿದ್ದ ಸ್ವಾಮಿ 'ಕೇವಲ ಕಾಲೇಜು ಕಟ್ಟಡ ಕಟ್ಟಿಸುವುದೇನು, ನಾನೇ ಕಾಲೇಜು ನಡೆಸುತ್ತೇನೆ, ಬಿಟ್ಟುಬಿಡಿ' ಎಂದು ಫಿಟಿಂಗ್ ಇಟ್ಟುಬಿಟ್ಟ. ಇದು ಬಂಗೇರಾನನ್ನು ಕೆರಳುವಂತೆ ಮಾಡಿತ್ತು. ಆತ್ಮಾನಂದ ಸ್ವಾಮಿಯ ಮೇಲೆ ಸೇಡು ತೀರಿಸಿಕೊಳ್ಳಲು ಬಂಗೇರಾ ಕೂಡ ಸಮಯ ಕಾಯುತ್ತಿದ್ದ. ಈಗ ಅದನ್ನು ಸಾಧಿಸಿದ್ದಾರೆ.

ಈ ಆತ್ಮಾನಂದನದು ಒಂದು ರೀತಿಯ ಹುಂಬು ಹಠಮಾರಿ ಸ್ವಭಾವ. ಕಳೆದ ವರ್ಷ ಮೂರು ತಿಂಗಳ ಕಾಲ ಸತತವಾಗಿ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಮತ್ತು ಮಹಾಬ್ರಹ್ಮ ರಥೋತ್ಸವ ಕಾರ್ಯಕ್ರಮ ಮಾಡಲು ಹೊರಟಾಗ ಎಲ್ಲರೂ ಬೇಡ ಎಂದು ಹೇಳಿದ್ದರು. ಏಕೆಂದರೆ, ಅಷ್ಟೊಂದು ದೀರ್ಘವಾಗಿ ಆಚರಣೆಗಳನ್ನು ನಡೆಸಲು ಹಣ ಇಲ್ಲ ಎಂಬ ಕಾರಣಕ್ಕೆ. ಯಾರು ಏನೇ ಹೇಳಿದರೂ ಮಾಡಿಯೇ ತೀರುತ್ತೇನೆಂದು ಹಠಕ್ಕೆ ಬಿದ್ದ ಸ್ವಾಮಿ ಕೊನೆಗೆ ಹಣಕಾಸಿನ ತೊಂದರೆಯಿಂದ ಪರದಾಡಲಾರಂಭಿಸಿದ್ದ. ಆಗ ಜನಾರ್ದನ ಪೂಜಾರಿಯೇ ಮುಂದೆ ಬಂದು ಇದೀ ಮಂದಿರದ ಬಣ್ಣ ಬಳಿಯುವ ಖರ್ಚನ್ನು ವಹಿಸಿಕೊಂಡು ಸ್ವಾಮಿಯ ಮಾನ ಉಳಿಸಿದ್ದರು. ಈಗ ಮತ್ತೆ ಬೇರೊಂದು ಸಂಕಟದಲ್ಲಿ ಸಿಲುಕಿರುವ ಸ್ವಾಮಿ ಜನಾರ್ದನ ಪೂಜಾರಿಯನ್ನು ಲೆಕ್ಕಿಸದೇ ಭಟ್ಕಳದ ಚೆಡ್ಡಿ ಶಾಸಕ ಶಿವಾನಂದ ನಾಯ್ಕರಿಗೆ ಮಣೆ ಹಾಕುತ್ತಿರುವುದು ಪೂಜಾರಿಯ ಸಿಟ್ಟನ್ನು ನೆತ್ತಿಗೇರಿಸಿದೆ.

ಈ ಎಲ್ಲಾ ಬೆಳವಣಿಗೆಗಳ ನಡುವೆ ಪೂಜಾರಿ-ಬಂಗೇರಾಗಳು ಸ್ವಾಮಿಯ ಸಹವಾಸ ಬಿಡುತ್ತಿದ್ದಂತೆಯೇ ಕನ್ಯಾಡಿ ಶ್ರೀರಾಮಮಂದಿರ ಎಂದರೆ ಹರಿಹಾಯುತ್ತಿದ್ದ ಚೆಡ್ಡಿ ಭಜರಂಗಿಗಳು ಸ್ವಾಮಿಗೆ ಹತ್ತಿರವಾಗತೊಡಗಿದ್ದಾರೆ. ಅಂದರೆ, ಈ ಹೊತ್ತಿನಲ್ಲಿ ಚೆಡ್ಡಿಗಳ ಸಹವಾಸವನ್ನಾದರೂ ಮಾಡಿ ತನ್ನ ಮಾನಮರ್ಯಾದೆ ಉಳಿಸಿಕೊಳ್ಳಬೇಕೆಂಬ ಹಠಕ್ಕೆ ಆತ್ಮಾನಂದ ಬಿದ್ದಿದ್ದಾನೆ. ಮಂಗಳೂರಿನಲ್ಲಿ ಜನಾರ್ದನ ಪೂಜಾರಿಗೆ ಸೆಡ್ಡು ಹೊಡೆದು ಅಖಿಲ ಭಾರತ ಬಿಲ್ಲವ ಯೂನಿಯನ್ ಕಟ್ಟಿದ ನವೀನ್ ಡಿ ಸುವರ್ಣ ಮೊದಮೊದಲು ಬಿಲ್ಲವರ ಕುಲಗುರುವಾಗುವಲ್ಲಿ ಕನ್ಯಾಡಿ ಸ್ವಾಮಿಗೆ ತಿರುಗಿ ನಿಂತಿದ್ದ. ಆದರೆ ಇದೀಗ ಗೋಸುಂಬೆಯಂತೆ ಬಣ್ಣ ಬದಲಾಯಿಸಿ ನಾಚಿಕೆಗೆಟ್ಟು ಕನ್ಯಾಡಿ ಸ್ವಾಮಿಯ ಬೆಂಬಲಕ್ಕೆ ನಿಂತಿದ್ದಾನೆ. ಆತ ಮಂಗಳೂರು ನೆಹರೂ ಮೈದಾನದಲ್ಲಿ ಅಭಿನಂದನಾ ಸಮಾರಂಭ ಏರ್ಪಡಿಸಲೂ ಮುಂದಾಗಿದ್ದಾನೆ.

ಒಟ್ಟಿನಲ್ಲಿ ಅತ್ತ ಉಡುಪಿಯ ಅಷ್ಟಮಠಗಳ ಪರ್ಯಾಯ ಕಿತ್ತಾಟ, ಇತ್ತ ಹಠಮಾರಿ ಆತ್ಮಾನಂದನ ಎಗರಾಟ- ಇವೆಲ್ಲವುಗಳ ರಾಜಕೀಯ ಲಾಭ ಪಡೆಯಲು ಪ್ರಯತ್ನಿಸುತ್ತಿರುವ ರಾಜಕಾರಣಿಗಳ ಅವಕಾಶವಾದಿತನ – ಇದನ್ನೆಲ್ಲಾ ನೋಡಿ ಕರಾವಳಿಯ ಜನಕ್ಕೆ ಜಿಗುಪ್ಸೆ ಬಂದಿದ್ದಂತೂ ಸತ್ಯ. ಇವರು ಸ್ವಾಮಿಗಳೋ, ರಾಜಕಾರಣಿಗಳೋ, ಬಿಸಿನೆಸ್ ಮ್ಯಾನ್‌ಗಳೋ ಎಂಬ ಅನುಮಾನ ಹುಟ್ಟಿ, ಸ್ವಾಮಿಗಳ ಬಗ್ಗೆ, ಮಠಮಾನ್ಯಗಳ ಬಗ್ಗೆ ಇದ್ದ ಕನಿಷ್ಠ ಗೌರವ, ನಂಬಿಕೆಗಳು ಜನರಲ್ಲಿ ಮರೆಯಾಗಿಬಿಟ್ಟಿವೆ.

■ ಪ್ರಕಾಶ್ ಪಿಂಟೋ

ಜುಲ್ಫಿಕರ್ ಭುಟ್ಟೊನನ್ನು ಗಲ್ಲಿಗೇರಿಸಿದ್ದ ಜಿಯಾ ಉಲ್ ಹಕ್‌ನಿಗೆ ಹೇಗಾದರು ಮಾಡಿ ಬೆನಜೀರ್‌ಳನ್ನು ತಿಗಣೆಯನ್ನು ಹೊಸಕುವಂತೆ ಹೊಸಕಬೇಕೆನ್ನಿಸಿತ್ತು. ಆದರೆ ಆಕೆ ಯಾವ ಅಪರಾಧವನ್ನೂ ಮಾಡಿರದಿದ್ದ ಕಾರಣ ಅದು ಅಸಾಧ್ಯವಾಗಿತ್ತು. ಆದರೆ ಜಿಯಾ ಸುಮ್ಮನಿರಬೇಕಲ್ಲ. ಆತ ಬೆನಜೀರ್‌ಳನ್ನು, ತಾಯಿ ನುಸ್ರತ್‌ಳನ್ನು ಮತ್ತು ಪಿಪಿಪಿ ಪಕ್ಷದ ಹದಿನೈದು ಸಾವಿರ ಜನರನ್ನು ಜೈಲಿಗಟ್ಟಿದ. ಅಷ್ಟೊತ್ತಿಗಾಗಲೇ ತುರ್ತುಪರಿಸ್ಥಿತಿಯನ್ನು ಹೇರಿದ್ದ ಆತನ ಸರ್ವಾಧಿಕಾರಿ ಸರ್ಕಾರ ಎಷ್ಟು ಬಲಿಷ್ಠವಾಗಿತ್ತೆಂದರೆ ಈ ಅಕ್ರಮ ಬಂಧನಗಳ ವಿರುದ್ಧ ಪ್ರತಿಭಟಿಸುವ ಧೈರ್ಯ ಯಾವ ಪಾಕಿಸ್ತಾನಿ ಪ್ರಜೆಗೂ ಇರಲಿಲ್ಲ.

ಪಿಪಿಪಿ ಪಕ್ಷದ ಇತರೆ ಸಾವಿರಾರು ಜನರನ್ನು ಬೇರೆಡೆ ಬಂಧಿಸಿದ್ದ ಜಿಯಾ, ಬೆನಜೀರ್‌ಳನ್ನು ದೊಡ್ಡ ಪಂಜರದಂತಿದ್ದ ಕೊಠಡಿಯಲ್ಲಿ ಬಂಧಿಸಿಟ್ಟಿದ್ದ. ಅಲ್ಲಿ ಒಂದು ಮಂಚದ ಹೊರತಾಗಿ ಟಾಯ್ಲೆಟ್ ಸೌಲಭ್ಯವೂ ಇರಲಿಲ್ಲ. ಪ್ಲಾಸ್ಟಿಕ್ ಬಕೆಟ್‌ನಲ್ಲಿ ಮೂತ್ರ ವಿಸರ್ಜನೆ ಮಾಡುತ್ತಿದ್ದ ಬೆನಜೀರ್ ಅನುಮತಿ ಸಿಕ್ಕಾಗ ಮಾತ್ರ ಮಹಿಳಾ ಜೈಲಾಧಿಕಾರಿಗಳ ಸಮ್ಮುಖದಲ್ಲಿ ಸ್ನಾನ ಮಾಡುತ್ತಿದ್ದಳು.

ಜೈಲಿನಲ್ಲಿದ್ದಾಗ ನುಸ್ರತ್‌ಳ ಆರೋಗ್ಯ ಹದಗೆಟ್ಟಿತು. ತಾಯಿ ಮತ್ತು ಮಗಳು ಪಾಕಿಸ್ತಾನದಿಂದ ತೊಲಗಿದರೆ ಸಾಕೆಂದು ಕಾಯುತ್ತಿದ್ದ ಜಿಯಾ ಚಿಕಿತ್ಸೆಗೆಂದು ಇಂಗ್ಲೆಂಡಿಗೆ ಹೋಗಲು ನುಸ್ರತ್‌ಳಿಗೆ ಅನುಮತಿ ನೀಡಿದ. ಆದರೆ ಬೆನಜೀರ್ ಅಷ್ಟು ಸುಲಭವಾಗಿ ತನ್ನ ಹೋರಾಟವನ್ನು ತ್ಯಜಿಸಲಿಲ್ಲ. ಆಕೆ ಜೈಲಿನಲ್ಲೇ ಮತ್ತಷ್ಟು ದಿನಗಳನ್ನು ಕಳೆದಳು.

ಆದರೆ ಕಾಲಕ್ರಮೇಣ ಈ ಹೋರಾಟದ ಫಲವೇನು ಎಂಬ ಅನುಮಾನ ಅವಳನ್ನು ಕಾಡಲಾರಂಭಿಸಿತು. ಜೈಲಿನಲ್ಲಿನ ಏಕಾಂಗಿತನ; ಹೊರಗೆ ತನ್ನ ಪರವಾಗಿ ಯಾರೂ ದನಿ ಎತ್ತದಂತಹ ಸಂದರ್ಭ; ಅಮೆರಿಕದಂತಹ ದೇಶವೂ ಪ್ರಜಾಪ್ರಭುತ್ವದ ಪರವಾಗಿ ತನ್ನ ಹೋರಾಟದೊಂದಿಗೆ ಸ್ಪಂದಿಸದಿರುವುದು; ಇವುಗಳಲ್ಲದೆ ಅನಾರೋಗ್ಯದಿಂದ ತತ್ತರಿಸುತ್ತಿರುವ ತಾಯಿ, ದಿಕ್ಕುದಿಸೆ ಇಲ್ಲದೆ ದೇಶ-ದೇಶಗಳನ್ನು ಅಲೆದಾಡುತ್ತಿರುವ ಸಹೋದರರು, ಯಾವ ರಾಜಕೀಯ ಪ್ರಜ್ಞೆಯೂ ಇಲ್ಲದೆ ಅನಾಥೆಯಾಗಿರುವ ಸೋನಮ್ ಎಂಬ ಸಹೋದರಿ; ನಾಯಕತ್ವವಿಲ್ಲದೆ ಸೊರಗುತ್ತಿರುವ ಪಿಪಿಪಿ ಪಕ್ಷ.... ಬೆನಜೀರ್ ಇಕ್ಕಟ್ಟಿನಲ್ಲಿ ಸಿಲುಕಿಕೊಂಡಳು.

ಅದು ಎಂತಹವರೂ ಧೃತಿಗೆಡುವಂತಹ ತಬ್ಬಲಿ ಸ್ಥಿತಿ.

"ನಾನು ಜೈಲಿನಲ್ಲಿದ್ದುಕೊಂಡು ನನ್ನ ದೇಶಕ್ಕಾಗಿ ಏನನ್ನೂ ಸಾಧಿಸಲಾಗುತ್ತಿಲ್ಲ. ಆದ್ದರಿಂದ ಜಿಯಾನ ಶರತ್ತುಗಳಿಗೆ ಒಪ್ಪಿಕೊಂಡು ಬೇರೆ ದೇಶಕ್ಕೆ ಹೋದರೆ ವಾಸಿ. ದೂರದಿಂದಲೇ ಈ ಹೋರಾಟವನ್ನು ಮುಂದುವರೆಸಬಹುದು" ಎಂದು ಆಕೆಗೆ ಅನ್ನಿಸಿತು.

ಅಲ್ಲಿಯತನಕ ಸರ್ವಾಧಿಕಾರದ ವಿರುದ್ಧ ದಿಟ್ಟೆದೆಯಿಂದ ಹೋರಾಡಿದ್ದ ಬೆನಜೀರ್ ತನ್ನ ರಾಜಕೀಯದ ಜೀವನದಲ್ಲಿ ಪ್ರಥಮ ಬಾರಿಗೆ ರಾಜಿ ಮಾಡಿಕೊಂಡಿದ್ದಳು. ಇಂತಹ ಅವಕಾಶಕ್ಕಾಗಿಯೇ ಕಾಯುತ್ತಿದ್ದ ಜಿಯಾ 1984 ರಲ್ಲಿ ಬೆನಜೀರ್‌ಳನ್ನು ಗಡಿಪಾರು ಮಾಡಿ ಇಂಗ್ಲೆಂಡಿಗೆ ಹಾರಿ ಹೋಗಲು ಅನುಮತಿ ನೀಡಿದ.

ಲಂಡನ್‌ನ ಒಂದು ಸಣ್ಣ ಫ್ಲಾಟ್‌ನಲ್ಲಿ ಪಿಪಿಪಿ ಪಕ್ಷದ ಕಚೇರಿಯನ್ನು ಸ್ಥಾಪಿಸಿದ ಬೆನಜೀರ್ ಅಲ್ಲಿಂದಲೇ ಪಾಕಿಸ್ತಾನದಲ್ಲಿ ಪ್ರಜಾಪ್ರಭುತ್ವವನ್ನು ಸ್ಥಾಪಿಸುವ ತನ್ನ ಹೋರಾಟವನ್ನು ಮುಂದುವರೆಸಿದಳು.

ಬೆನಜೀರ್ ಎಂಬ ತಲೆನೋವನ್ನು ಜಿಯಾ ಹೀಗೆ ನಿವಾರಿಸಿಕೊಂಡಿದ್ದ. ಆದರೆ ಆತನೇ ಅಮೆರಿಕಕ್ಕೆ ತಲೆನೋವಾಗಿ ಪರಿಣಮಿಸಿದ್ದ. ಏಕೆಂದರೆ ಅಲ್ಲಿಯತನಕ ಅಮೆರಿಕದ ಆದೇಶಗಳನ್ನು ಶಿರಸಾವಹಿಸಿ ಪಾಲಿಸುತ್ತಿದ್ದ ಜಿಯಾ ತನ್ನ ಅಧಿಕಾರವನ್ನು ಮತ್ತಷ್ಟು ಗಟ್ಟಿ ಮಾಡಿಕೊಂಡು ಅಮೆರಿಕದ ನಿಯಂತ್ರಣದಿಂದ ಹೊರನಡೆಯುವ ಸೂಚನೆಗಳನ್ನು ನೀಡಲಾರಂಭಿಸಿದ್ದ. ಆಗ ಆತನನ್ನು ನಿಗ್ರಹಿಸಲೆಂದೇ 1986 ರಲ್ಲಿ ತುರ್ತುಪರಿಸ್ಥಿತಿಯನ್ನು ರದ್ದು ಮಾಡುವಂತೆ ಅಮೆರಿಕ ಒತ್ತಾಯ ಹೇರಿತು. ಅದಕ್ಕೆ ಮಣಿದ ಜಿಯಾ ತುರ್ತುಪರಿಸ್ಥಿತಿಯನ್ನು ಹಿಂದೆ ಪಡೆದ. ಅಲ್ಲಿಯತನಕ ಉಸಿರುಗಟ್ಟಿದ ವಾತಾವರಣದಲ್ಲಿದ್ದ ಪಾಕಿಸ್ತಾನದ ಜನ ಆತನ ವಿರುದ್ಧ ಸಂಘಟಿತರಾಗಿ ಪ್ರತಿಭಟಿಸಲಾರಂಭಿಸಿದರು.

ಇದೆಲ್ಲವನ್ನು ಇಂಗ್ಲೆಂಡಿನಿಂದಲೇ ಗಮನಿಸುತ್ತಿದ್ದ ಬೆನಜೀರ್ ಇದೇ ಸೂಕ್ತ ಸಮಯವೆಂದು ನಿರ್ಧರಿಸಿ ಪಾಕಿಸ್ತಾನಕ್ಕೆ ಹಿಂದಿರುಗಿದಳು. ಭುಟ್ಟೊ ವಂಶದ ರಾಜಕುಮಾರಿ, ಮಧ್ಯಮ ವರ್ಗದ ಸಂಕೇತ, ಪ್ರಜಾಪ್ರಭುತ್ವದ ಆಶಾಕಿರಣ, ಯುವ ಜನಾಂಗದ ಆದರ್ಶದಂತಿದ್ದ ಬೆನಜೀರ್‌ಳನ್ನು ಸ್ವಾಗತಿಸಲು ಅವತ್ತು ಕನಿಷ್ಠ ಇಪ್ಪತ್ತು ಲಕ್ಷ ಜನ ಸೇರಿದ್ದರು!

ಸಿಂಹದ ಬಾಯಲ್ಲಿ ತಲೆ ಇಟ್ಟ ಕ್ಷಣ

ಮಹಿಳೆಯೊಬ್ಬಳು ಮುಸಲ್ಮಾನ ದೇಶವೊಂದರ ಪ್ರಧಾನಿಯಾಗಲಿದ್ದಾಳೆ ಎಂಬುದು ಖಚಿತವಾದಾಗ ಹಲವು ಮುಲ್ಲಾಗಳು ಪ್ರತಿಭಟಿಸಲಾರಂಭಿಸಿದರು. "ಯಾವುದೇ ಕಾರಣಕ್ಕೂ ಬೆನಜೀರ್ ಪ್ರಧಾನಿ ಆಗಬಾರದು" ಎಂದು ಫತ್ವಾ ಹೊರಡಿಸಿದರು. "ಈ ಸಾಧ್ಯತೆಯನ್ನು ಕಂಡು ಮೊಹಮದ್ ಪೈಗಂಬರರು ರಕ್ತದ ಕಣ್ಣೀರು ಹರಿಸುತ್ತಿದ್ದಾರೆ" ಎಂಬ ಕರಪತ್ರಗಳನ್ನು ವಿತರಿಸಿದರು. ಆದರೆ ಬೆನಜೀರ್ ಪ್ರಧಾನಮಂತ್ರಿ ಸ್ಥಾನಕ್ಕೆ ಏರುವುದನ್ನು ಇವರ್‍ಯಾರಿಂದಲೂ ತಡೆಯಲಾಗಲಿಲ್ಲ.



ಅಂದಿನಿಂದ ಜಿಯಾ ಸರ್ಕಾರದ ವಿರುದ್ಧ ಜನಾಂದೋಲನವನ್ನು ಮತ್ತು ಅಸಹಕಾರ ಚಳವಳಿಯನ್ನು ಸಂಘಟಿಸುವುದರಲ್ಲಿ ತೊಡಗಿದ ಬೆನಜೀರ್‌ಗೆ ಒಂದು ಸಮಸ್ಯೆ ಎದುರಾಯಿತು. ಅದು ಆಕೆಗೆ 34 ವರ್ಷಗಳಾಗಿದ್ದರೂ ವಿವಾಹವಾಗದೇ ಇದ್ದದ್ದು. ಸಂಪ್ರದಾಯಸ್ಥ ದೇಶವಾದ ಪಾಕಿಸ್ತಾನದಲ್ಲಿ ಒಬ್ಬಂಟಿಯಾದ ಮಹಿಳೆಯನ್ನು ಜನ ಸಂಪೂರ್ಣವಾಗಿ ಒಪ್ಪಿಕೊಳ್ಳುವುದಿಲ್ಲವೆಂದು ಆಕೆಗೆ ಗೊತ್ತಿತ್ತು. ಆದರೆ ಆಕೆಯಷ್ಟೇ ಓದಿದ್ದ, ಭುಟ್ಟೊ ವಂಶದಷ್ಟಲ್ಲದಿದ್ದರೂ ಸಾಕಷ್ಟು ಪ್ರಭಾವಶಾಲಿ ವಂಶದವನಾಗಿದ್ದ, ವಯಸ್ಸಿನಲ್ಲೂ ಸರಿಹೊಂದುವಂತಹ ಸೂಕ್ತ ವರನೊಬ್ಬ ಪಾಕಿಸ್ತಾನದಲ್ಲಿ ಸಿಗುವುದೇ ಕಷ್ಟ ಎಂಬಂತಿತ್ತು.



ಆಗ ಜರ್ದಾರಿ ಎಂಬ ಕುಟುಂಬದಿಂದ ಒಂದು ಪ್ರಸ್ತಾವನೆ ಬಂತು. ಸಾಕಷ್ಟು ಆಸ್ತಿ ಹೊಂದಿದ್ದ ಜರ್ದಾರಿ ವಂಶದಲ್ಲಿ ಅಸಿಫ್ ಆಲಿ ಎಂಬ ಯುವಕ ಇದ್ದಾನೆಂದು, ಆತ ಬೆನಜೀರ್‌ಗಿಂತ ಕೇವಲ ಮೂರು ವರ್ಷ ಚಿಕ್ಕವನೆಂದು, ಮತ್ತು ನೋಡಲು ಚೆನ್ನಾಗಿ ಇದ್ದಾನೆಂದು ಗೊತ್ತಾಯಿತು.

ಆದರೆ ಆತ ಆಗಲೇ ಪಾಕಿಸ್ತಾನಿ ಹೈ ಸೊಸೈಟಿಯಲ್ಲಿ ಸಾಕಷ್ಟು ಕುಖ್ಯಾತಿ ಗಳಿಸಿದ್ದ. ಕರಾಚಿಯಲ್ಲೇ, ತನ್ನ ವಿದ್ಯಾಭ್ಯಾಸ ಮಾಡಿದ್ದ ಅಸಿಫ್ ಆಲಿ ದಿನವಿಡೀ ಪೋಲೋ ಆಡುತ್ತಾ, ರಾತ್ರಿಗಳನ್ನು ಡಿಸ್ಕೋಗಳಲ್ಲಿ ಕುಣಿಯುತ್ತಾ ಐಶಾರಾಮಿ ಜೀವನವನ್ನು ನಡೆಸುತ್ತಿದ್ದ. ಅವನಿಗೆ ಡಿಸ್ಕೋಗಳೆಂದರೆ ಎಷ್ಟು ಹುಚ್ಚಿತ್ತೆಂದರೆ ತನ್ನ ಕರಾಚಿ ಮನೆಯಲ್ಲೇ ಒಂದು ಡಿಸ್ಕೋ ರೂಮನ್ನೇ ಕಟ್ಟಿಸಿದ್ದ. ಇಂತಹ ಮೋಜಿನ ವ್ಯಕ್ತಿ ಮತ್ತು ಬೆನಜೀರ್‌ಳಂತಹ ರಾಜಕೀಯ ಮಹಿಳೆ ನಡುವೆ ದಾಂಪತ್ಯ ಜೀವನ ಸಾಧ್ಯವೇ ಎಂಬ ಪ್ರಶ್ನೆ ಎಲ್ಲರನ್ನು ಕಾಡಿತ್ತು. ಅಷ್ಟೇ ಅಲ್ಲ, ಪಾಶ್ಚಾತ್ಯ ದೇಶಗಳಲ್ಲಿ ಓದಿದ್ದ, ಆ ಸಂಸ್ಕೃತಿಯಲ್ಲೇ ಬೆಳೆದಿದ್ದ ಬೆನಜೀರ್ ಇಂತಹ 'ಸಂಪ್ರದಾಯಸ್ಥ' ಮದುವೆಗೆ ಒಪ್ಪುತ್ತಾಳೆಯೇ, ಇದಕ್ಕಿಂತಲೂ ಪ್ರೇಮ ವಿವಾಹವೇ ಸೂಕ್ತವಲ್ಲವೇ, ಹೀಗೆ ಹಿರಿಯರು ಆಯ್ಕೆ ಮಾಡಿರುವ ವರನನ್ನು ಮದುವೆಯಾದರೆ ಆತ ಆಕೆಯ ರಾಜಕೀಯ ಭವಿಷ್ಯಕ್ಕೆ ಅಡ್ಡಿಬರುವುದಿಲ್ಲವೇ ಎಂದೆಲ್ಲಾ ಚರ್ಚೆಗಳು ಪಾಕಿಸ್ತಾನದಲ್ಲೂ, ಬೇರೆ ಕಡೆಗಳಲ್ಲೂ ನಡೆದವು. ಆ ಪ್ರಶ್ನೆಗಳು ಬೆನಜೀರ್‌ಳನ್ನೂ ಕಾಡಿದ್ದು ಸಹಜವೇ.

ಆದರೆ ತಾಯಿಯ ಒತ್ತಡದಿಂದಾಗಿ ಆತನನ್ನು ಭೇಟಿಯಾಗಲು ಒಪ್ಪಿದ ಬೆನಜೀರ್‌ಗೆ ಆತನ ಹಾಸ್ಯಪ್ರಜ್ಞೆ ಇಷ್ಟವಾಯಿತಲ್ಲದೆ ಆಕೆಯನ್ನು ಒಲಿಸಿಕೊಳ್ಳಲು ಆತ ಮಾಡಿದ ಪ್ರಯತ್ನಗಳೂ ಸಂತೋಷವನ್ನುಂಟುಮಾಡಿದವು. ಯಾಕೆಂದರೆ ಪುರುಷನೊಬ್ಬನನ್ನು ತನ್ನ ಸಂಗಾತಿಯೆಂದು ಪ್ರಥಮ ಬಾರಿಗೆ ಆಕೆ ಭೇಟಿಯಾಗುತ್ತಿದ್ದದ್ದು ಅದೇ ಮೊದಲನೆ ಬಾರಿ. ಆಕೆಯ ಜೀವನದಲ್ಲಿ ರೋಮ್ಯಾನ್ಸ್ ಎಂಬುದೊಂದು ನಡೆದದ್ದು ಈ ಜರ್ದಾರಿಯನ್ನು ಭೇಟಿಯಾದಾಗಲೇ!



ಗೌರಿ ಲಂಕೇಶ್

ಗಿಡುಗಗಳಿಗೆ ಬಲಿಯಾದ ಗಿಳಿ

ಬೆನಜೀರ್

3

ಅಷ್ಟೇ ಅಲ್ಲ, ಶಾಕುಂತಲೆ ಮತ್ತು ದುಶ್ಯಂ... ಭೇಟಿಯಲ್ಲಿ ಹೇಗೆ ಒಂದು ದುಂಬಿ ಪ್ರಮು... ಪಾತ್ರ ವಹಿಸಿತೋ ಹಾಗೆಯೇ ಬೆನಜೀರ್ ಜೀವನದ... ಒಂದು ದುಂಬಿ ಪಾತ್ರ ವಹಿಸಿತು. ಬೆನಜೀರ್ ಮ... ಜರ್ದಾರಿಯ ಮದುವೆ ಕುರಿತಂತೆ ಇನ್ನೂ ಮಾತು... ಗಳು ನಡೆಯುತ್ತಿದ್ದಾಗಲೇ ಒಂದು ದುಂಬಿ ಬೆನಜೀರ್‌ಳ... ಕಚ್ಚಿತು. ತಕ್ಷಣವೇ ಆಕೆಯನ್ನು ಆಸ್ಪತ್ರೆಗೆ ಕರೆದುಕೊಂ... ಹೋದ ಜರ್ದಾರಿ ಆಕೆಗೆ ಸೂಕ್ತ ಚಿಕಿತ್ಸೆ ದೊರಕುವ... ನೋಡಿಕೊಂಡ.

ಆತನ ಕಾಳಜಿ ಕಂಡ ಬೆನಜೀರ್ ಬಹಳಷ್ಟು ಪೌ... ಸಂಸ್ಕೃತಿಯ ಮಹಿಳೆಯರಂತೆ ಆತನಲ್ಲಿ ... 'ಜವಾಬ್ದಾರಿ'ಯುತ ಪುರುಷನನ್ನೂ, ತನ್ನನ್ನು ಚೆನ್ನಾ... ನೋಡಿಕೊಳ್ಳಬಲ್ಲ ಗಂಡಸನ್ನೂ ಕಂಡಳು. ಮಾತ್ರವ... ಈತ ತನ್ನ ರಾಜಕೀಯ ಆಕಾಂಕ್ಷೆಗಳಿಗೆ ಅಡ್ಡಬಾರಲಾ... ಪತ್ನಿಯಾಗಿ ತಾನು ಆತನಿಗಿಂತಲೂ ದೊಡ್ಡ ಹುದ್ದೆಯ... ಅಲಂಕರಿಸಿದರೂ ಆತ ಹೊಟ್ಟೆಕಿಚ್ಚುಪಟ್ಟುಕೊಳ್ಳಲಾ... ಎಂದು ಮನದಟ್ಟು ಮಾಡಿಕೊಂಡ ನಂತರವೇ ಬೆನಜೀ... ಈ ಮದುವೆಗೆ ಒಪ್ಪಿಕೊಂಡಳು.

ಇದು ಬಹಿರಂಗವಾಗುತ್ತಿದ್ದಂತೆ ಹಲವರು ಬೆನಜೀ... ಳನ್ನು ಟೀಕಿಸಲಾರಂಭಿಸಿದರು. ಸಾಮಾಜಿಕ ಸ್ಥಾ... ಮಾನದಲ್ಲೂ, ವಯಸ್ಸಿನಲ್ಲೂ ಅವರಿಬ್ಬರ ನಡುವೆ ಇ... ವ್ಯತ್ಯಾಸಗಳನ್ನು ಕೆಲವರು ಲೇವಡಿ ಮಾಡಿದರೆ, ಇನ್... ಕೆಲವರು ಬೆನಜೀರ್‌ಳಂತಹ ಮಹಿಳೆ ಒಂದು ನಿ... ವಿವಾಹಕ್ಕೆ ಒಪ್ಪಿಕೊಂಡಿದ್ದನ್ನು ಕಂಡು ನಕ್ಕರು.

ಆದರೆ ಪ್ರಾಕ್ಟಿಕಲ್ ಸ್ವಭಾವದ ಬೆನಜೀರ್ "ಅಂ... ಲವ್ ಮ್ಯಾರೇಜ್ ಅಥವಾ ನಿಶ್ಚಿತ ವಿವಾಹ ಎ... ಆಯ್ಕೆಗಳು ನನ್ನ ಮುಂದಿರಲಿಲ್ಲ. ಬದಲಾಗಿ ಜರ್ದಾ... ಯೊಂದಿಗಿನ ಮದುವೆಗೆ ಒಪ್ಪಿಕೊಳ್ಳಬೇಕೋ ಅಥ... ಒಪ್ಪಿಕೊಳ್ಳದೆ ಶಾಶ್ವತವಾಗಿ ಅವಿವಾಹಿತೆಯಾಗಿ ಉಳಿ... ಕೊಳ್ಳಬೇಕೋ ಎಂಬ ಆಯ್ಕೆಗಳು ಮಾತ್ರ ನ... ಮುಂದಿದ್ದವು" ಎಂದು ಆಕೆಯೇ ಆನಂತರ ಹೇಳಿದ್ದ...

ಜರ್ದಾರಿ ಕೂಡ ಬೆನಜೀರ್‌ಳನ್ನು ಮೆಚ್ಚಿಸಲು ತ... ಮನೆಯಲ್ಲಿದ್ದ ಡಿಸ್ಕೋ ರೂಮನ್ನು ಒಡಿಸುವ ಮೂ... ತಾನು ಮದುವೆಯ ನಂತರ ಸಭ್ಯ ಗೃಹಸ್ಥನ... ಇರುತ್ತೇನೆಂಬ ಮಾತುಕೊಟ್ಟ.

ಅವರಿಬ್ಬರ ಮದುವೆ 1987 ರ ಡಿಸೆಂಬರ್ 1... ರಂದು ಕರಾಚಿಯಲ್ಲಿ ನಡೆದಾಗ ಪಾಕಿಸ್ತಾನದ ಲಕ್ಷಾಂತ... ಜನರು ತಮ್ಮ ಮನೆಯ ಮಗಳ ಮದು... ನಡೆಯುತ್ತಿದೆಯೇನೋ ಎಂಬಂತೆ ಸಂಭ್ರಮಿಸಿದ್ದರ... ಆಮಂತ್ರಣ ಇಲ್ಲದವರೂ ಅಸಂಖ್ಯಾತ ಸಂಖ್ಯೆಯ... ಹಾಜರಾಗಿದ್ದರಿಂದ ಆ ಮದುವೆ ಸದ್ದು, ಗದ್ದಲ... ನಡುವೆಯೇ ನಡೆದು ಕರಾಚಿಯ ರಸ್ತೆಗಳಲ್ಲಿ ಒಂದ... ಲಕ್ಷ ಜನ ಸಂತೋಷದಿಂದ ಕುಣಿದಾಡಿದ್ದರು.

ಇದೇ ಹೊತ್ತಿಗೆ ಸರಿಯಾಗಿ ಅಫಘಾನಿಸ್ತಾನದಿ... ರಷ್ಯನ್ನರು ಹಿಂದೆ ಸರಿದಿದ್ದರಿಂದ ಅಲ್ಲಿನ ಮುಜಾಹಿದ್ದೀ... ಗಳನ್ನು ಪ್ರೋತ್ಸಾಹಿಸುವ ಜರೂರತ್ತು ಅಮೆರಿಕ... ಇಲ್ಲದಂತಾಯಿತು. ಅಷ್ಟೇಅಲ್ಲದೆ ಅಷ್ಟೊತ್ತಿಗಾಗಲ... ಜಿಯಾ ಕೂಡ ಅಮೆರಿಕದ ಪಾಲಿಗೆ ಸವೆದುಹೋಗಿ... ಹಳೇ ಚಪ್ಪಲಿಯಂತಾಗಿದ್ದ. ಇತ್ತ ಪಾಕಿಸ್ತಾನಿ ಜನ... ಪ್ರತಿಭಟನೆ, ಅತ್ತ ಅಮೆರಿಕದಿಂದ ನಿಂತ ಬೆಂಬ... ಇವೆರಡರ ನಡುವೆ ಸಿಲುಕಿಕೊಂಡಿದ್ದ ಜಿಯ... ಅಸಹಾಯಕನಾದ. ಆಗ ವಿಧಿಯಿಲ್ಲದೆ 1988 ರ... ಮುಕ್ತ ಚುನಾವಣೆಗಳನ್ನು ನಡೆಸುವುದಾಗಿ ಘೋಷಿಸಿ...

ಆದರೆ ಅದರ ಹಿಂದೆಯೂ ಒಂದು ಕುತಂತ್ರವಿತ್ತ... ಪಾಕಿಸ್ತಾನದ ಸೈನ್ಯಾಧಿಕಾರಿಗಳಿಗಾಗಲಿ, ಗುಪ್ತ ದಳವಾ... ISI ಗಾಗಲಿ, ಬೆನಜೀರ್‌ಳಂತಹ ಮಹಿಳೆ ದೇಶ... ಪ್ರಧಾನಮಂತ್ರಿ ಆಗುವುದು ಬೇಕಿರಲಿಲ್ಲ. ಆದ್ದರಿಂ... ಚುನಾವಣಾ ಸಂದರ್ಭದಲ್ಲಿ ಸಾಕಷ್ಟು ಹೇರಾಫೇರಿಗಳ... ನಡೆಸುವ ಸಂಚನ್ನು ಜಿಯಾ, ಸೈನ್ಯಾಧಿಕಾರಿಗಳು ಮತ್ತು ISI ರೂಪಿಸಿದ್ದರು. ಅದಕ್ಕೂ ಮುನ್ನ, ಪಾಕಿಸ್ತಾನದ... ಅತಿ ಹೆಚ್ಚು ಜನಸಂಖ್ಯೆಯನ್ನು ಹೊಂದಿರುವ ಮತ್ತು ಆ ಮೂಲಕ ರಾಜಕೀಯವಾಗಿ ಬಲಿಷ್ಠವಾಗಿ... ಪಂಜಾಬ್ ಪ್ರಾಂತ್ಯದಲ್ಲಿ ಆಕೆಗೆ ಓರ್ವ ರಾಜಕೀಯ... ವಿರೋಧಿಯನ್ನೂ ಸ್ಥಾಪಿಸಿದ್ದರು. ಅವನೇ ನವಾಜ್ ಶರೀಫ್.

ಕೆಲ ವರ್ಷಗಳ ಹಿಂದಿನತನಕ ಈ ನವಾಜ್ ಶರೀ... ಓರ್ವ ಅನಾಮಿಕ ಉದ್ಯಮಿಯಾಗಿದ್ದ. ಆದರೆ ಭ್ರಷ್ಟ ತಂತ್ರಗಳಿಂದಾಗಿ ಅಪಾರ ಆಸ್ತಿಗಳಿಸಿದ್ದನಲ್ಲದ... ಸೈನ್ಯಾಧಿಕಾರಿಗಳಿಗೂ ಹತ್ತಿರದವನಾಗಿದ್ದ. ಇಂತ... ಶರೀಫ್‌ನನ್ನು ರಾಜಕೀಯಕ್ಕೆ ಎಳೆತಂದ ಜಿಯಾ ಆತನ... ಪಂಜಾಬಿನ ಮುಖ್ಯಮಂತ್ರಿಯನ್ನಾಗಿಸಿದ್ದ ಮತ್ತು ಆತ... ಮುಸ್ಲಿಮ್ ಲೀಗ್‌ಗೆ ಗುಪ್ತವಾಗಿ ಬೆಂಬಲ ನೀಡುತ್ತಿ... ಇದೆಲ್ಲದರ ಹಿಂದಿದ್ದ ಲೆಕ್ಕ: ಯಾವುದೇ ಕಾರಣಕ್ಕೂ ಬೆನಜೀರ್‌ಳ ಪಿಪಿಪಿ ಪಕ್ಷ ಬಹುಮತ ಗಳಿಸದ... ಇರುವುದು.

ಆದರೆ ವಿಧಿ ಜಿಯಾ ಉಲ್‌ಹಕ್‌ನ ನಿಯಂತ್ರಣ ದಲ್ಲಿರಲಿಲ್ಲ. ಅದು ಬೇರೆಯದೇ ಆಟವನ್ನು ನಿಗದಿಪಡಿಸಿಕೊಂಡಿತ್ತು. ಆಗಸ್ಟ್ 17, 1988 ರಂದು ಜಿಯಾ ಹೇರಿದಂತೆ ಪಾಕಿಸ್ತಾನಿ ಸೈನ್ಯದ ಹಲವು ಹಿರಿಯ ಅಧಿಕಾರಿಗಳು ಪ್ರಯಾಣಿಸುತ್ತಿದ್ದ ವಿಮಾನ ಆಕಾಶದಲ್ಲೇ ಸ್ಫೋಟಗೊಂಡು ಜಿಯಾ ಸಾವನ್ನಪ್ಪಿದ. ಅಂದು ಜಿಯಾನೊಂದಿಗೆ ಆ ವಿಮಾನದಲ್ಲಿ ಅಮೆರಿಕದ ರಾಯಭಾರಿ ಆರ್ನಾಲ್ಡ್ ರಾಫೆಲ್ ಕೂಡ ಸಾವನ್ನಪ್ಪಿದ್ದ. ಆ ವಿಮಾನ ಸ್ಫೋಟಗೊಂಡಿದ್ದು ಹೇಗೆ ಎಂಬ ತನಿಖೆಯನ್ನು ಅಮೆರಿಕದ FBI ಕೈಗೆತ್ತಿಕೊಂಡಿತು. ಆದರೆ ಆ ತನಿಖೆಯಿಂದಾಗಿ ಜಿಯಾನನ್ನು ಕೊಂದದ್ದು ಯಾರು ಎಂಬುದು ಗೊತ್ತಾಗಲೇ ಇಲ್ಲ. ಇಂದಿಗೂ ಜಿಯಾ ಕೊಲೆ ಪ್ರಕರಣ ನಿಗೂಢವಾಗಿಯೇ ಉಳಿದಿದ್ದು, ಅಷ್ಟೊತ್ತಿಗಾಗಲೇ ಅಮೆರಿಕಕ್ಕೆ ಬೇಡವಾಗಿದ್ದ ಆತನನ್ನು ಅಮೆರಿಕನ್ನರೆ ಕೊಂದಿರಬಹುದೇ ಎಂಬ ಗುಮಾನಿ ಇವತ್ತಿಗೂ ಚಾಲ್ತಿಯಲ್ಲಿದೆ.

ಸಂಪೂರ್ಣವಾಗಿ ಭಸ್ಮಗೊಂಡಿದ್ದ ಆ ವಿಮಾನದ ಅವಶೇಷಗಳಲ್ಲಿ ಜಿಯಾನ ಶವವಿರಲಿ, ಬೆಂದ ಮಾಂಸದ ಮುದ್ದೆಗಳಲ್ಲಿ ಆತನದ್ದು ಯಾವುದು ಎಂಬುದನ್ನೂ ಗುರುತಿಸಲಾಗದಂತಿತ್ತು. ಬೆನಜೀರ್‌ಳ ತಂದೆಯನ್ನು ಗಲ್ಲಿಗೇರಿಸಿದ್ದ, ಆಕೆಯನ್ನು ಇನ್ನಿಲ್ಲದಂತೆ ಪೀಡಿಸಿದ್ದ ಜಿಯಾ ಅಂತ್ಯಗೊಂಡಿದ್ದು ಹೀಗೆ....

ಬೆನಜೀರ್ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾಗಲೇ ಆಕೆಯ ಮೊದಲ ಮಗು ಬಿಲಾವಲ್ ಜನ್ಮವೆತ್ತಿದ. ಆಗಲೂ ಹಸಿ ಬಾಣಂತಿ ಬೆನಜೀರ್ ಸುಮ್ಮನೆ ಕೂರದೆ ಪ್ರಚಾರಾಂದೋಲನದಲ್ಲಿ ತೊಡಗಿದಳು. ಪರಿಣಾಮವಾಗಿ ನವೆಂಬರ್ 16, 1988 ರಲ್ಲಿ ನಡೆದ ಚುನಾವಣೆಯಲ್ಲಿ ಆಕೆಯ ನೇತೃತ್ವದ ಪಿಪಿಪಿ ಪಕ್ಷ ಬಹುಮತ ಗಳಿಸಿತು. ಮಹಿಳೆಯೊಬ್ಬಳು ಮುಸಲ್ಮಾನ ದೇಶವೊಂದರ ಪ್ರಧಾನಿಯಾಗಲಿದ್ದಾಳೆ ಎಂಬುದು ಖಚಿತವಾದಾಗ ಹಲವು ಮುಲ್ಲಾಗಳು ಪ್ರತಿಭಟಿಸಲಾರಂಭಿಸಿದರು. "ಯಾವುದೇ ಕಾರಣಕ್ಕೂ ಬೆನಜೀರ್ ಪ್ರಧಾನಿ ಆಗಬಾರದು" ಎಂದು ಫತ್ವಾ ಹೊರಡಿಸಿದರು. "ಈ ಸಾಧ್ಯತೆಯನ್ನು ಕಂಡು ಮೊಹಮದ್ ಪೈಗಂಬರರು ರಕ್ತದ ಕಣ್ಣೀರು ಹರಿಸುತ್ತಿದ್ದಾರೆ" ಎಂಬ ಕರಪತ್ರಗಳನ್ನು ವಿತರಿಸಿದರು. ಬೆನಜೀರ್ ಪ್ಯಾರಿಸ್ ಕ್ಲಬ್‌ವೊಂದರಲ್ಲಿ ಕುಣಿಯುತ್ತಿರುವಂತೆ, ನುಸ್ರತ್ ಪಾಶ್ಚಿಮಾತ್ಯ ಉಡುಗೆಯನ್ನು ತೊಟ್ಟು ಅಮೆರಿಕದ ಮಾಜಿ ಅಧ್ಯಕ್ಷ ಜೆರಾಲ್ಡ್ ಫೋರ್ಡ್‌ನೊಂದಿಗೆ ಶ್ವೇತಭವನದಲ್ಲಿ ಡ್ಯಾನ್ಸ್ ಮಾಡುತ್ತಿರುವಂತೆ ತಿರುಚಲಾಗಿದ್ದ ಚಿತ್ರಗಳನ್ನೂ ಎಲ್ಲೆಡೆ ಹಂಚಿದರು.



ಆದರೆ ಬೆನಜೀರ್ ಪ್ರಧಾನಮಂತ್ರಿ ಸ್ಥಾನಕ್ಕೆ ಏರುವುದನ್ನು ಇವರ್ಯಾರಿಂದಲೂ ತಡೆಯಲಾಗಲಿಲ್ಲ.

ಅಂದು ತಣ್ಣನೆ ಗಾಳಿ ಬೀಸುತ್ತಿದ್ದ ಡಿಸೆಂಬರ್ 1,1988 ರ ದಿನ. ಇಸ್ಲಾಮಾಬಾದ್‌ನಲ್ಲಿನ ಅಲಂಕಾರ ಭೂಯಿಷ್ಠ ರಾಷ್ಟ್ರಪತಿ ಅರಮನೆಯಲ್ಲಿ ನಡೆಯಲಿದ್ದ ಸಮಾರಂಭಕ್ಕೆ ಜನ ಹಾಜರಾಗಲಾರಂಭಿಸಿದ್ದರು. ದುಬಾರಿ ಸೂಟ್‌ಗಳನ್ನು ಧರಿಸಿ ಆಕ್ಸ್‌ಫರ್ಡ್ ಇಂಗ್ಲಿಷಿನಲ್ಲಿ ಮಾತನಾಡುತ್ತಿದ್ದ ಯುವಕರು; ರೇಷ್ಮೆ ಮತ್ತು ಜರಿಯಿಂದ ಅಲಂಕೃತಗೊಂಡಿದ್ದ ಸಲ್ವಾರ್-ದುಪ್ಪಟ ತೊಟ್ಟಿದ್ದ ಯುವತಿಯರು; ಹುರಿಮಾಡಿದ್ದ ಮೀಸೆಗಳನ್ನು, ಸೈನ್ಯದ ಸಮವಸ್ತ್ರವನ್ನು ಧರಿಸಿದ್ದ ಸೈನ್ಯಾಧಿಕಾರಿಗಳು; ಸಂಪ್ರದಾಯಸ್ಥ ಸಲ್ವಾರ್ ಕಮೀಜ್‌ಗಳನ್ನು ತೊಟ್ಟಿದ್ದ ಅಧಿಕಾರಿಗಳು; ಉದ್ದನೆ ಗಡ್ಡಗಳನ್ನೂ, ಇನ್ನೂ ಉದ್ದದ ನಿಲುವಂಗಿಗಳನ್ನು ಧರಿಸಿದ್ದ ಮುಲ್ಲಾಗಳು... ಎಲ್ಲರೂ ಅಂದು ಅಲ್ಲಿ ಸೇರಿದ್ದರು.

ಅಲ್ಲಿಯತನಕ ಯಾವ ಹುದ್ದೆಯನ್ನೂ ಅಲಂಕರಿಸದಿದ್ದ, ಸಂಬಳ ನೀಡುವ ಯಾವ ಕೆಲಸವನ್ನೂ ಮಾಡಿರದಿದ್ದ, ಬದಲಾಗಿ ಒಂಭತ್ತು ವರ್ಷಗಳ ಕಾಲ ನಿರಂತರ ಹೋರಾಟವನ್ನೇ ನಡೆಸಿಕೊಂಡು ಬಂದಿದ್ದ ಬೆನಜೀರ್ ಅಂದು ಪ್ರಧಾನಮಂತ್ರಿಯಾಗಿ ಪ್ರಮಾಣ ವಚನ ಸ್ವೀಕಾರ ಮಾಡಲಿದ್ದ ಸಮಾರಂಭವದು. ಒಂದು ಮುಸಲ್ಮಾನ ದೇಶದ ಪ್ರಥಮ ಮಹಿಳಾ ಪ್ರಧಾನ ಮಂತ್ರಿಯ ಜವಾಬ್ದಾರಿಯನ್ನು ಆಕೆ ಹೊತ್ತಾಗ ಆಕೆಗಿನ್ನೂ ಕೇವಲ 35 ವರ್ಷ ವಯಸ್ಸು.

ಸರಿಯಾಗಿ ಮೂರು ಗಂಟೆಗೆ ಚಿನ್ನದಲ್ಲಿ ಚಿತ್ತಾರ ಬಿಡಿಸಿದ್ದ ಬಾಗಿಲುಗಳು ತೆರೆದುಕೊಂಡವು. ಪಾಕಿಸ್ತಾನದ ಬಣ್ಣಗಳಾದ ಹಸಿರು ಸಲ್ವಾರ್ ಕಮೀಜ್ ಮತ್ತು ಬಿಳಿಯ ದುಪ್ಪಟ ತೊಟ್ಟಿದ್ದ ಬೆನಜೀರ್ ಕೆಂಪು ರತ್ನಗಂಬಳಿಯ ಮೇಲೆ ನಡೆದು ಬಂದಳು. ಆದರೆ ಆಕೆ ಆ ಕ್ಷಣವನ್ನು ಸವಿಯಲಾಗಲಿಲ್ಲ, ಯಾಕೆಂದರೆ ಅಲ್ಲಿದ್ದವರನ್ನೆಲ್ಲ ಕಂಡು ತಾನು ತನ್ನ ತಲೆಯನ್ನು ಸಿಂಹದ ಬಾಯಲ್ಲಿಡುತ್ತಿರುವೆ ಎಂಬ ಭಯ ಆಕೆಯನ್ನು ಆವರಿಸಿತ್ತು.

ಉದಾಹರಣೆಗೆ ಅಂದು ಆಕೆಯ ಪಕ್ಕ ನಡೆಯುತ್ತಿದ್ದ ಪಾಕಿಸ್ತಾನದ ಅಧ್ಯಕ್ಷ ಗುಲಾಂ ಇಷ್ತಿಯಾಕ್ ಖಾನ್‌ನನ್ನೇ ತೆಗೆದುಕೊಳ್ಳಿ. ಹಿಂದೊಮ್ಮೆ ಸರ್ಕಾರಿ ಅಧಿಕಾರಿಯಾಗಿದ್ದ ಇಷ್ತಿಯಾಕ್ ಖಾನ್ ಬೆನಜೀರ್‌ಳ ತಂದೆ ಜುಲ್ಫಿಕರ್ ಸರ್ಕಾರದಲ್ಲಿ ರಕ್ಷಣಾ ಇಲಾಖೆಯ ಕಾರ್ಯದರ್ಶಿಯಾಗಿದ್ದ. ಅಷ್ಟೇ ಅಲ್ಲ, ಜುಲ್ಫಿಕರ್ ಸದ್ಯದಲ್ಲೇ ಜಿಯಾನನ್ನು ಸೈನ್ಯಾಧಿಕಾರಿಯ ಸ್ಥಾನದಿಂದ ಕಿತ್ತೊಗೆಯಲಿದ್ದಾನೆ ಎಂಬ ಸೂಚನೆಯನ್ನು ಜಿಯಾಗೆ ನೀಡಿದ್ದವನೇ ಇಷ್ತಿಯಾಕ್ ಖಾನ್! ಈ ಎಚ್ಚರಿಕೆಯನ್ನಾಧರಿಸಿ ಜಿಯಾ ಕ್ಷಿಪ್ರಕ್ರಾಂತಿ ನಡೆಸಿ ಜುಲ್ಫಿಕರ್‌ರನ್ನು ಉರುಳಿಸಿದ್ದನಲ್ಲದೆ ಆತನನ್ನು ಕೊನೆಗೆ ಗಲ್ಲಿಗೂ ಏರಿಸಿದ್ದ. ಆಕೆಯ ತಂದೆಯ ಸಾವಿಗೆ ಇಷ್ತಿಯಾಕ್ ಖಾನ್ ಕೂಡ ಕಾರಣನಾಗಿದ್ದ.

ಆಕೆ ನಡೆದುಬಂದಂತೆ ಜನರಲ್ ಹಮೀದ್ ಗುಲ್‌ನನ್ನು ದಾಟಿದಳು. ಈತ ಜಿಯಾಗೆ ಹತ್ತಿರವಾಗಿದ್ದ ಅಧಿಕಾರಿ ಮತ್ತು ಗುಪ್ತದಳ ISI ಮೇಲೆ ಸಂಪೂರ್ಣ ನಿಯಂತ್ರಣ ಹೊಂದಿದ್ದ ವ್ಯಕ್ತಿ. ಪಾಕಿಸ್ತಾನದ ಇಸ್ಲಾಮೀಕರಣಕ್ಕೆ ಬದ್ಧನಾಗಿದ್ದ ಗುಲ್ ಅಮೆರಿಕದ CIAನೊಂದಿಗೆ ಆಪ್ತನಾಗಿದ್ದನಲ್ಲದೆ, ಆಗ ತಾನೆ ಮುಗಿದಿದ್ದ ಚುನಾವಣೆಯಲ್ಲಿ ಪಿಪಿಪಿಯನ್ನು ವಿರೋಧಿಸಲೆಂದೇ ಮುಸ್ಲಿಮ್ ಲೀಗ್‌ನ ನವಾಜ್ ಷರೀಫ್‌ನನ್ನು ಎತ್ತಿಕಟ್ಟಿದ್ದ.

ಗುಲ್ ಪಕ್ಕದಲ್ಲೇ ನವಾಜ್ ಷರೀಫ್ ನಿಂತಿದ್ದ. ಈತನಿಗೆ ಅಪಾರವಾದ ರಾಜಕೀಯ ಆಕಾಂಕ್ಷೆಗಳಿದ್ದವಲ್ಲದೆ, ಆತ ಮುಖ್ಯಮಂತ್ರಿಯಾಗಿದ್ದ ಪಂಜಾಬ್ ಪ್ರಾಂತ್ಯದ ನೆರವಿಲ್ಲದೆ ತಾನು ಅಧಿಕಾರವನ್ನು ಸುಗಮವಾಗಿ ನಡೆಸಲು ಸಾಧ್ಯವಿಲ್ಲ ಎಂಬ ಅರಿವು ಬೆನಜೀರ್‌ಗಿತ್ತು.

ಅದೇ ಸಭೆಯಲ್ಲಿ ಅಮೆರಿಕದ ರಾಯಭಾರಿ ರಾಬರ್ಟ್ ಓಕ್ಲೇ ಕೂಡ ಇದ್ದ. ಚುನಾವಣೆಯಲ್ಲಿ ಪಿಪಿಪಿ ಪಕ್ಷಕ್ಕೆ ಬಹುಮತ ಬಂದಿದ್ದರೂ ಅಧ್ಯಕ್ಷ ಇಷ್ತಿಯಾಕ್ ಖಾನ್ ಬೆನಜೀರ್‌ಗೆ ಅಧಿಕಾರ ನೀಡಬೇಕೆ ಬೇಡವೇ ಎಂಬುದರ ಬಗ್ಗೆ ಎರಡು ವಾರಗಳ ಕಾಲ ಮೀನಾಮೇಷ ಎಣಿಸುತ್ತಿದ್ದಾಗ ಬೆನಜೀರ್‌ಗೆ ಅಧಿಕಾರ ಕೊಡುವಂತೆ ಓಕ್ಲೇ ಒತ್ತಡ ತಂದಿದ್ದ.

ಆದರೆ ಬೆನಜೀರ್‌ಗೆ ಗೊತ್ತಿತ್ತು. ತಾನು ಚುನಾವಣೆಯಲ್ಲಿ ಗೆದ್ದಿದ್ದರೂ ತನ್ನನ್ನು ಯಾವ ಕ್ಷಣದಲ್ಲಾದರೂ ವಜಾಗೊಳಿಸಬಲ್ಲ ಹುದ್ದೆಯಲ್ಲಿ ಇಷ್ತಿಯಾಕ್ ಖಾನ್ ಮುಂದುವರೆಯುವಂತೆ ಕೂಡ ಅಮೆರಿಕ ಎಚ್ಚರ ವಹಿಸಿತ್ತು. ಅಷ್ಟೇ ಅಲ್ಲ ತನ್ನ ತಂದೆಯ ಸಾವು ಮತ್ತು ಜಿಯಾನ ಅಟ್ಟಹಾಸದಿಂದ ಆಕೆ ಇನ್ನೊಂದು ಪಾಠವನ್ನು ಕಲಿತಿದ್ದಳು. ಅದೇನೆಂದರೆ ಪಾಕಿಸ್ತಾನ ಎಂಬ ಅಮೆರಿಕದ ಅಡಿಯಾಳು ದೇಶದಲ್ಲಿ ಅಧಿಕಾರದಲ್ಲಿರಬೇಕೆಂದರೆ ಅಮೆರಿಕದ ಕೃಪಾಶೀರ್ವಾದ ತನಗೆ ಬೇಕೇ ಬೇಕು ಎಂಬುದು.

ಹೀಗೆ ಒಂದೆಡೆ ಅಮೆರಿಕಕ್ಕೆ ಬಾಗಿದ್ದ, ಇನ್ನೊಂದೆಡೆ ಸೈನ್ಯದ ಬೆಂಬಲವನ್ನು ಪಡೆಯಲು ಸೈನ್ಯಾಧಿಕಾರಿಗಳಿಗೆ ಸಂಪೂರ್ಣ ಸ್ವಾತಂತ್ರ್ಯ ನೀಡುವುದಾಗಿ ಮಾತು ಕೊಟ್ಟಿದ್ದ ಬೆನಜೀರ್ ಎಂಬ ದಿಟ್ಟೆದೆಯ ಹೋರಾಟಗಾರ್ತಿ ಅವರೆಲ್ಲರ ಕೃಪೆಯಿಂದಲೇ ಪ್ರಧಾನಮಂತ್ರಿ ಹುದ್ದೆಗೆ ಏರಿದಳು. ಅದನ್ನು ಇನ್ನೊಂದು ರೀತಿ ಹೇಳಬೇಕೆಂದರೆ ಈ ಪಟ್ಟಭದ್ರರೆಲ್ಲಾ ಸೇರಿಕೊಂಡು ಬೆನಜೀರಳನ್ನು ತಮ್ಮ ಇಚ್ಛೆಗೆ ತಕ್ಕಂತೆ ಪಳಗಿಸಿದ್ದರು.

(ಮುಂದುವರೆಯುವುದು)

"ರಾಧಕ್ಕನಿಗೆ ಗಂಡು ಮಗುವಾಯ್ತಂತೆ ಸಾ"

"ಇದ್ದಕ್ಕಿದ್ದಂತೆ ಜೆಡಿಎಸ್‌ನ ಮುಂಚೂಣಿ ಜಾಗದಿಂದ ಹಿಂದೆ ಸರಿದು, ದೇವೇಗೌಡರನ್ನ ಮುಂದೆಬಿಟ್ಟು ಮನೆಯಲ್ಲಿ ಮಲಗಿರುವ ಕುಮಾರಸ್ವಾಮಿಗಳನ್ನು ಈ ದುರ್ದಿನದಲ್ಲಿ ಮಾತನಾಡಿಸಿದರೆ ಹೇಗೆ ಅನ್ನಿಸಿತಲ್ಲಾ, ಕೂಡಲೇ ಫೋನ್ ಮಾಡಿದರೆ ಸಿಕ್ಕೇಬಿಟ್ಟರು ರಿಂಗ್ ಟೋನ್: "ಕೆಂಚಾಲೋ ಮಚ್ಚಾಲೊ ಯಂಗವ್ಯಾ ನಿನ್ ಕನಸ್‌ಗಳು? ಕೆಂಚಾಲೋ ಮಚ್ಚಾಲೊ ಯಂಗವ್ಯಾ ನಿನ್ ಕನುಸ್‌ಗಳು?"

"ಹಲೊ?"

"ಹಲೋ ಸಾರ್, ನಾನು ಯಾಹೂ ಸಾರ್. ಪತ್ರಕರ್ತ."

"ಏನ್ ಯಾಹೂ ಅವ್ರುರೆ, ಚೆನ್ನಾಗಿದ್ದೀರ?"

"ನಂದಿರ್ಲಿ ಸಾರ್, ನೀವ್ಯಾಗಿದ್ದಿರಿ ಹೇಳಿ ಸಾರ್?"

"ನಾನು ಚೆನ್ನಾಗಿದೀನಿ. ಡಾಕ್ಟರು ಸ್ವಲ್ಪ ರೆಸ್ಟ್ ತಗೊಳಿ ಅಂದವ್ರುರೆ, ಅದ್ಕೆ ಮಲಗಿದ್ದಿನಿ."

"ಉಷಾರು ಸಾರ್. ಬೈಪಾಸಾದ ಮೇಲೆ ತುಂಬ ಎಚ್ಚರಿಕೆಯಾಗಿರಬೇಕಂತೆ."

"ಯಾರ್ರಿ ಹೇಳಿದ್ದು? ಬೈಪಾಸಾದ ಮೇಲೆ ಆರಾಮಾಗಿರಬವುದು, ಇಲ್ಲ ಅಂದ್ರೆ ಬೈಪಾಸ್ ಅಂತ ಯಾಕೇಳತಿದ್ರು?"

"ಹೌದಲ್ಲ ಸಾರ್? ಹಾಗಿದ್ರೆ ಯಾವಾಗೆದ್ದು ಬತ್ತಿರಿ ಸಾರ್?"

"ಬರ್ತಿನಿ. ಮೊದ್ಲು ನಮ್ಮ ತಂದೆಯವರು ಒಂದು ರವುಂಡ್ ಹೋಗಿ ಬರ್ತರೆ. ಆನಂತರ ನಾನು ಹೋಗ್ತಿನಿ. ಕಾರ್ಯಕರ್ತರ ಬಟಾವಡೆನ ತಂದೆಯವರು ಮಾಡಕ್ಯಾಗಲ್ಲ, ಅದ್ಕೆ ನಾನು ಹೋಗ್ಲೆಬೇಕಾಗಿದೆ."

"ಜಿಲ್ಲಾ ಕಾರ್ಯಕರ್ತರಿಗೆ ಒಂದೊಂದು ಟಾಟಾ ಸುಮೊ ಕೊಡ್ತಿರಂತೆ?"

"ಹೌದು. ಪಾಪ ಅವರು ಹಳ್ಳಳ್ಳಿ ತಿರುಗಬೇಕು, ಕಾರ್ಯಕರ್ತರನ ಎತ್ತಾಯ್ಕಂಡು ಬರಬೇಕು, ಅವ್ರುರೇನು ಕೇಳ್ತರೆ ಅದನ್ನ ಕೊಡಬೇಕು. ಇದಕೆಲ್ಲ ನಮ್ಮದೇ ಆದಂತ ವೆಯಿಕಲ್ಲಿದ್ರೆ ಅನುಕೂಲ ಎಂಬತಕ್ಕಂತ ತೀರ್ಮಾನನ ನಮ್ಮ ತಂದೆಯವರು ನಾವು ಸೇರಿ ತಗೊಂಡಿದ್ದಿವಿ."

"ಏನೇ ಆಗ್ಲಿ ಜೆಡಿಎಸ್ ನೀವಿದ್ದಂಗಾಗಲ್ಲ ಸಾರ್. ಪಾಪ ದೇವೇಗೌಡ್ರು ಬಂದ್ರೆ ಕಾರ್ಯಕರ್ತರಿಗೆ ಒಂಥರ ಬೇಜಾರು. ಗೌಡ್ರು ತಲಿಮಾರಿನ ರಾಜಕಾರಣಿಗಳೆಲ್ಲಾ ಸತ್ತೋಗಿದಾರೆ. ರೇವಣ್ಣನ ತಲಿಮಾರು ಸುಸ್ತಾಗಿದಾರೆ. ನೀವಿದ್ರೆ ಚೆಂದ ಸಾರ್."

"ನಿಮ್ಮ ಮಾತನ್ನ ನಾನು ಒಪ್ಗೊತಿನಿ. ಕಳೆದ ಚುನಾವಣೆಲಿ ನಾನು ಓಡಾಡದೇ ಇದ್ರೆ ಜನತಾದಳಕ್ಕೆ ಐವತ್ತೆಂಟು ಸೀಟು ಬರಕ್ಕೆ ಸಾಧ್ಯವೇಯಿರಲಿಲ್ಲ. ಅದು ನಮ್ಮ ಕಾರ್ಯಕರ್ತರಿಗೂ ಗೊತ್ತು. ಅದಕ್ಕಾಗಿ ನನ್ನನ್ನ ಕಾಯ್ತಾಯಿದಾರೆ. ನಾವು ಪುನಃ ಅಷ್ಟೇ ಸೀಟನ್ನ ತಗೋತೀವಿ."

"ಅಂದ್ರೆ ಸಿದ್ರಾಮಯ್ಯನ ಬಣ, ಎಂ.ಪಿ. ಪ್ರಕಾಶ್ ಬಣಾನೂ ಗೆದ್ದು ಬರುತ್ತ ಸಾರ್?"

"ಅವ್ರೆಲ್ಲಿ ನಮ್ಮ ಪಾರ್ಟಿಲಿದಾರೆ? ಅವರನ್ನ ಸೋಲ್ಸಿ ನಮ್ಮ ಪಾರ್ಟಿ ಕ್ಯಾಂಡಿಡೇಟ್‌ಗಳು ಗೆದ್ದು ಬರಂಗೆ ಮಾಡಬೇಕಾಗಿದೆ, ಅದನ್ನ ಮಾಡ್ತಿವಿ."

"ನಿಮ್ಮ ಹೃದಯದ ಸಮಸ್ಯೆ ಕೇಳಿ ಇಡೀ ಕರ್ನಾಟಕದ ಹೃದಯನೇ ಹೃಡಡೋದಂಗೆ ಡಲ್ಲಾಗಿತ್ತು ಸಾರ್!"

"ಅದು ನನಗೂ ಗೊತ್ತು, ಅದ್ರು ಏನು ಮಾಡಕ್ಯಾಗುತ್ತೆ ಹೇಳಿ?"

"ಕೆಲವರು ಎಡ್ಯೂರಪ್ಪನ ಕಡಿಯೋರು ಮಾಟ ಮಾಡಿಸಿದಾರಂತಲ್ಲಾ ಸಾರ್?"

"ಮಾಡಿಸಿದ್ರು. ಅದಕ್ಕೆ ಪ್ರತಿಯಾಗಿ ನಮ್ಮ ತಂದೆನೂ ಮಾಡ್ಸಿ ತಡೆಯೊಡ್ಡಿ ನನ್ನನ್ನ ಉಳಿಸಿಕೊಂಡ್ರು."

"ಹೌದಾ ಸಾರ್? ಏನಾದ್ರು ಹೆಚ್ಚುಕಮ್ಮಿಯಾಗಿದ್ರೆ ಆ ರೇವಣ್ಣ ಮೆರೆಯೋನಲ್ಲ ಸಾರ್."

"ಅವ್ನುನ ಕೈಲೆಲ್ಲಿ ಮೆರೆಯೋಕಾಯ್ತದೆ ರೀ? ಅವ್ನುನ ಕೈಲಿ ಅವೆಲ್ಲಾ ಸಾಧ್ಯ ಇಲ್ಲ ಅಂತಾನೆ ತಂದೆಯವರು ನನ್ನನ್ನು ಮುಂದೆ ತಂದಿದ್ದು!"

"ಸಾರ್ ಇನ್ನೊಂದು ವಿಷಯ, ಹೇಳಲೊ ಬೇಡವೊ ಅಂತ ಹಿಂಜರಿಕೆ...."

"ಹೇಳಿ, ಹಿಂಜರಿಕೆ ಯಾಕೆ?"

"ರಾಧಕ್ಕನಿಗೆ ಗಂಡು ಮಗುವಾಯ್ತಂತೆ ಸಾರ್?"

"ಯಾವ ರಾಧಕ್ಕ?"

"ಅದೆ ಸಿನಿಮಾನಟಿ ರಾಧಿಕಾ ಇದ್ಲಲ್ಲ ಸಾರ್, ಅವ್ಳುಳಿಗೆ ಗಂಡು ಮಗುವಂತೆ?"

"ಹೌದು, ನಾನು ಆ ತರ ಸುದ್ದಿನ ನಿಮ್ಮ ಪತ್ರಿಕೆಲಿ ನೋಡಿದೆ."

"ತಾಯಿ ಮಗು ಚೆನ್ನಾಗಿದಾರಂತೆ ಸಾರ್."

"ಇರ್ಲಿ ಬಿಡಿ."

"ಮಗು ಹುಟ್ಟಿದ ಗಳಿಗೆ ಅಷ್ಟು ಚೆನ್ನಾಗಿಲ್ಲವಂತೆ ಸಾರ್. ಅದರಪ್ಪನಿಗೆ ಹೃದಯ ಸಂಬಂಧ ತೊಂದರೆಯಿಂದಾಗಿ ತುಂಬ ಕಷ್ಟಗಳು ಬರ್ತದಂತೆ. ತಾಯಿಗೆ ಮಾತ್ರ ತುಂಬಾ ಒಳ್ಳೆದಾಗುತ್ತಂತೆ."

"ಯಾರ್ರಿ ಅಂಗಂದದ್ದು?"

"ಅದೇ ಸಾರ್, ಎಡ್ಯೂರಪ್ಪ ಮುಖ್ಯಮಂತ್ರಿಯಾಗದಿಲ್ಲ ಅಂತ ಹೇಳಿದ್ನಲ್ಲಾ, ಆ ಜೋತಿಷಿ ಹೇಳಿದ್ದನಂತೆ."

"ರೀ, ಅವ್ನುನು ಹುಟ್ಟು ಸುಳ್ಳ ಕಂಡ್ರಿ. ಅಂಗಂತ ಹೇಳು ಅಂತ ನಾನು ಚಲುವರಾಯಸ್ವಾಮಿ ಹೋಗಿ ಹೇಳಿದ್ಕೆ ಅಂಗೇಳಿದ. ನೀವು ಹೋಗಿ ಹೋಗಿ ಆ ಜೋಯಿಸನ ಮಾತ್ನ ನಂಬತಿರಲ್ರೀ!"

"ಆದ್ರು ಏಳು ದಿನದ ಮಟ್ಟಿಗಾದ್ರು ಮುಖ್ಯಮಂತ್ರಿಯಾದರಲ್ಲಾ ಸಾರ್?"

"ನೀವು ಏನ್ಹೇಳಕ್ಕೆ ವಂಟಿದ್ದಿರಿ ಅದನ್ನ ನೇರವಾಗಿ ಹೇಳ್ರಿ."

"ಏನಿಲ್ಲಾ, ನಿಮ್ಮ ಹೃದಯಕ್ಕೂ ರಾಧಕ್ಕನ ಮಗುವಿನ ಜನ್ಮಕುಂಡಲಿಗೂ ಯಾವ ಸಂಬಂಧನೂ ಇಲ್ಲ ಅಂತ ಕೇಳಕ್ಕೆ ಸಾರ್."

"ಇಂತ ಮೂರ್ಖ ಪ್ರಶ್ನೆ ಕೇಳದಾದ್ರೆ ನೀವು ಫೋನ್ ಮಾಡಲೇ ಬೇಡಿ. ಇಂತ ಸುದ್ದಿಯನ್ನು ಈ ಟೈಮಲ್ಲಿ ವಿರೋಧ ಪಕ್ಷದವರು ಕೆಟ್ಟದಾಗಿ ಬಳಸಿಕೊಳ್ತರೆ. ಅಷ್ಟೂ ನಿಮಗೆ ಗೊತ್ತಿಲ್ವೇನ್ರೀ? ಇಡ್ರಿ ಫೋನ್!"

ಥೂ ಥೂ ಥುತ್ತೇರಿ!!!

ಥೂತ್ತೇರಿ

ಯಾಹೂ

ಪೇಜಾವರ ವಿರುದ್ಧ ಹೆಗ್ಗಡೆ ಪಿತೂರಿ

ಈ ಸಲದ ಪರ್ಯಾಯದ ಹಿಂದೆ ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಅವರ ಸ್ಪಷ್ಟವಾದ ನೆರಳಿದೆ. ಹೆಗ್ಗಡೆ ಕೊಟ್ಟ ಧೈರ್ಯವೇ ಪುತ್ತಿಗೆ ಸ್ವಾಮೀಜಿಗೆ ಸ್ಫೂರ್ತಿಯಾಗಿದೆ. ಪೇಜಾವರ ಪಟಾಲಂಗೆ ಸೆಡ್ಡು ಹೊಡೆಯಲು ಧೈರ್ಯ ನೀಡಿದೆ.

ಕರಾವಳಿ ಕರ್ನಾಟಕದಲ್ಲಿ ಎರಡು ದೊಡ್ಡ ಹೆಸರು ಎಂದರೆ ಇವರದ್ದೇ. ಇವರೊಳಗೆ ಸರಿಯಾಗಿ ಒಂದು ವರ್ಷದ ಹಿಂದೆ ರಹಸ್ಯವಾಗಿ ಶೀತಲ ಸಮರವೊಂದು ಆರಂಭವಾಗಿತ್ತು. ಇದಕ್ಕೆ ಕಾರಣರಾದವರು ಪರೀಕ ನಾರಾಯಣ ಉಪಾಧ್ಯಾಯರೆಂಬ ನಿವೃತ್ತ ಹೋಟೆಲ್ ಉದ್ಯಮಿ.

ಪೇಜಾವರ ಸ್ವಾಮಿಯ ಜಾತಿಗೆ ಸೇರಿದ ಪರೀಕ ಉಪಾಧ್ಯಾಯರು ತನ್ನ ಕೋಟ್ಯಂತರ ಬೆಲೆಬಾಳುವ ಉಡುಪಿಯ ಸಮೀಪವೇ ಇರುವ ಅರಮನೆ ಸಹಿತವಾದ ಭೂಮಿಯನ್ನು ಮತ್ತು ಬ್ಯಾಂಕ್‌ನಲ್ಲಿದ್ದ ಕೋಟ್ಯಂತರ ರೂ.ಗಳನ್ನು ಡಾ. ಹೆಗ್ಗಡೆಗೆ ದಾನವಾಗಿ ನೀಡಿದರು. ಈ ಸ್ಥಳದಲ್ಲೀಗ ಹೆಗ್ಗಡೆಯವರ ಹೈಟೆಕ್ ಪ್ರಕೃತಿ ಚಿಕಿತ್ಸಾ ಆಸ್ಪತ್ರೆ ತಲೆ ಎತ್ತಿದೆ. ಕಾರ್ಯಾಚರಣೆಯನ್ನೂ ಆರಂಭಿಸಿದೆ. ಪರೀಕ ಉಪಾಧ್ಯಾಯರು ತಮ್ಮ ಜಾತಿಗೆ ಸೇರಿದವರಾಗಿ, ಉಡುಪಿಯಲ್ಲಿದ್ದುಕೊಂಡು, ಜೈನರಾದ ಧರ್ಮಸ್ಥಳದ ಹೆಗ್ಗಡೆಗೆ ಭೂಮಿ-ಹಣ ದಾನ ಮಾಡುವುದನ್ನು ಪೇಜಾವರ ಸಹಿಸಲಿಲ್ಲ. ಉಡುಪಿಯಲ್ಲಿ ಜೈನರಾದ ಹೆಗ್ಗಡೆ ಗಟ್ಟಿ ನೆಲೆ ಸ್ಥಾಪಿಸುವುದು ಪೇಜಾವರರಿಗೆ ಬೇಕಾಗಿರಲಿಲ್ಲ. ರಹಸ್ಯ ಸಭೆ ನಡೆಸಿ ಉಪಾಧ್ಯಾಯರ ನಿರ್ಧಾರ ಬದಲಾಯಿಸಲು ಪೇಜಾವರ ಪ್ರಯತ್ನವನ್ನೂ ನಡೆಸಿದ್ದರು. ಆದರೆ ಪೇಜಾವರ ಪ್ರಯತ್ನ ಫಲ ಕೊಡಲಿಲ್ಲ.

ಅಲ್ಲಿಂದ ಇವರೊಳಗೆ ಹಣಾಹಣಿ ಪ್ರಾರಂಭಗೊಂಡಿತು. ಇದೀಗ ಪರ್ಯಾಯ ವಿವಾದದ ಮೂಲಕ ಮತ್ತೆ ಸ್ಪಷ್ಟವಾಗಿದೆ.

ವೀರೇಂದ್ರ ಹೆಗ್ಗಡೆಯವರ ಪರೋಕ್ಷ ಸಹಾಯ, ಸಹಕಾರ, ಬೆಂಬಲ, ಪ್ರೋತ್ಸಾಹ ಪುತ್ತಿಗೆ ಸ್ವಾಮೀಜಿಗೆ ಧೈರ್ಯ ಮತ್ತು ಶಕ್ತಿ ನೀಡಿದೆ. ಇದೇ ಶಕ್ತಿ ಪೇಜಾವರ ಎಂಬ ದೈತ್ಯ ಶಕ್ತಿಗೆ ಸೆಡ್ಡು ಹೊಡೆಯಲು ಸ್ಫೂರ್ತಿ ಕೊಟ್ಟಿದೆ.

ವಾರದ ಹಿಂದೆ ರಥ ಬೀದಿಯಲ್ಲಿರುವ ಪೇಜಾವರ ಮಠದ ಸರಿ ಎದುರು ಪುತ್ತಿಗೆ ಸ್ವಾಮೀಜಿಗೆ ನಡೆದ ಸಾರ್ವಜನಿಕ ಪೌರ ಸನ್ಮಾನ ಸಮಾರಂಭದ ಅಧ್ಯಕ್ಷತೆ ವಹಿಸಿದವರು ಕೂಡಾ ಹೆಗ್ಗಡೆಯವರೇ.

ಪೇಜಾವರ ಅಭಿಪ್ರಾಯಕ್ಕೆ ವಿರುದ್ಧ ರಥಬೀದಿಯಲ್ಲಿ ನಿಂತು ಹೆಗ್ಗಡೆ ಪುತ್ತಿಗೆ ಸ್ವಾಮಿಗೆ ಸನ್ಮಾನ ಮಾಡಿದ್ದು ಹಿಡನ್ ಅಜೆಂಡಾದ ಹಿನ್ನೆಲೆಯಿಂದಲೇ.



ಪರ್ಯಾಯ ವಿವಾದ: ಮುಂಡೆ ಬಿಸಿ ಯಾಕ್ರಯ್ಯ

ಉಡುಪಿ ಶ್ರೀಕೃಷ್ಣ ದೇವಾಲಯದ ಪೂಜಾ ಹಕ್ಕಿನ ವಿವಾದ ಅಂತಿಮ ಘಟ್ಟ ತಲುಪಿದೆ. 'ಪರ್ಯಾಯ' ಎಂದು ಕರೆಯಲಾಗುವ ಈ ಅಧಿಕಾರ ಹಸ್ತಾಂತರ ಪ್ರಕ್ರಿಯೆ, ಉಡುಪಿಯ ರಥಬೀದಿಯಲ್ಲಿ ಉದ್ವಿಗ್ನತೆಗೂ, ಸಾರ್ವಜನಿಕರ ನಡುವೆ ಶಾಂತಿಭಂಗಕ್ಕೂ ಕಾರಣವಾಗಿದೆ. ಎಲ್ಲಕ್ಕೂ ಮೂಲ ಕಾರಣರಾಗಿರುವ ಅಷ್ಟಮಠಾಧೀಶರು, ಭೂಗತ ಲೋಕದ ದೊರೆಗಳಿಗಿಂತಲೂ ಕೆಳಮಟ್ಟದಲ್ಲಿ ಶತ್ರುಗಳನ್ನು ಮಣಿಸಲು ಸಂಚು-ಪ್ರತಿ ಸಂಚುಗಳನ್ನು ಹೆಣೆಯುತ್ತಿದ್ದಾರೆ. 'ವಿಧ್ವಂಸಕರ ಜತೆ' ಗುಪ್ತ ಸಮಾಲೋಚನೆಗಳನ್ನು ನಿರಂತರವಾಗಿ ನಡೆಸುತ್ತಿದ್ದಾರೆ.

ಪರ್ಯಾಯ

ಉಡುಪಿಯ ಶ್ರೀಕೃಷ್ಣ ದೇವಾಲಯದ ಒಳಗೆ ಗರ್ಭಗುಡಿಯಲ್ಲಿರುವ ವಿಗ್ರಹವನ್ನು ಮುಟ್ಟಿ ಪೂಜೆ ಮಾಡುವುದು ಮಾತ್ರ ಅಷ್ಟ ಮಠಾಧೀಶರ ಉದ್ಯೋಗ. ಇಷ್ಟಕ್ಕೇ ಸೀಮಿತಗೊಂಡಿರುವ ಮಠಾಧೀಶರು ಈ ಮೂಲಕ ಗಳಿಸುವುದು ಕೋಟ್ಯಂತರ ರೂಪಾಯಿ ಎನ್ನುವುದು ಬೇರೆ ವಿಷಯ. ಎರಡು ವರ್ಷ ಒಬ್ಬರು ಸ್ವಾಮೀಜಿಗಳಂತೆ ಎಂಟು ಸ್ವಾಮೀಜಿಗಳು ಸರದಿ ಪೂಜೆ ಮಾಡುತ್ತಾರೆ. ಯಾವ ಸ್ವಾಮೀಜಿ ಇಲ್ಲಿನ ದೇಗುಲದಲ್ಲಿ ಪೂಜೆ ಮಾಡ್ತಾರೋ ಆ ಸ್ವಾಮೀಜಿ ಪರ್ಯಾಯ ಪೀಠಾಧಿಪತಿ. ಮಾಧ್ವ ಮತ ಸ್ಥಾಪಕ ಮಧ್ವಾಚಾರ್ಯ ಯಾನೆ ವಾಸುದೇವ ಆಕಸ್ಮಿಕವಾಗಿ ಸ್ಥಾಪಿಸಿದ ದೇವಾಲಯದಲ್ಲಿ ಶ್ರೀಕೃಷ್ಣ ವಿಗ್ರಹವನ್ನು ಪ್ರತಿಷ್ಠಾಪಿಸಿ, ವಿಗ್ರಹಾರಾಧನೆ ನೆರವೇರಿಸಲು ಎಂಟು ಮಂದಿ ಶಿಷ್ಯರನ್ನು ಸ್ವೀಕರಿಸಿ, ಮಠಗಳನ್ನು ನಿರ್ಮಿಸಿಕೊಟ್ಟರು. ಪೇಜಾವರ, ಫಲಿಮಾರು, ಅದಮಾರು, ಸೋದೆ, ಕೃಷ್ಣಾಪುರ, ಕಾಣಿಯೂರು, ಪುತ್ತಿಗೆ ಮತ್ತು ಶಿರೂರು ಎಂಬ ಎಂಟು ಊರುಗಳಲ್ಲಿ ಮೂಲ ಮಠಗಳನ್ನೂ ಜತೆಗೆ ರಥಬೀದಿಯಲ್ಲೂ ಮಠಗಳನ್ನು ಹೊಂದಿರುವ ಮಠಾಧೀಶರು ಈ ಹಿಂದೆ ಎರಡು ತಿಂಗಳ ಸರದಿ ಪೂಜೆಯ ಅವಕಾಶ ಹೊಂದಿದ್ದರು. ಮಧ್ವಾಚಾರ್ಯರ ಶಿಷ್ಯರಾಗಿ ಬಂದು ಮಾಟ-ಮಂತ್ರ-ತಂತ್ರಗಳ ಮೂಲಕ ಪ್ರಸಿದ್ಧಿ ಪಡೆದ ವಾದಿರಾಜರು ಎರಡು ತಿಂಗಳ ಪೂಜಾ ಸರದಿಯನ್ನು ಎರಡು ವರ್ಷಗಳಿಗೆ ವಿಸ್ತರಿಸಿದರು.

ಈಗ ಕೃಷ್ಣಾಪುರ ಮಠದ ವಿದ್ಯಾಸಾಗರ ಎಂಬುವರು ಪರ್ಯಾಯ ಸ್ವಾಮೀಜಿ. ನಾಡಿದ್ದು 18 ರ ಬಳಿಕ ಪುತ್ತಿಗೆ ಮಠದ ಸುಗುಣೇಂದ್ರರು ಪರ್ಯಾಯ ಪೀಠವೇರಬೇಕು. ವಿವಾದ ಉದ್ಭವಿಸಿರುವುದು ಇಲ್ಲಿಯೇ.

ಸಮುದ್ರೋಲ್ಲಂಘನ ವಿವಾದ

ವಿದೇಶದ ಜನರು ಪಾಪಿಷ್ಠರು. ವೈದಿಕ ಪದ್ಧತಿಯನ್ನು ಆಚರಿಸದ ಸಂಸ್ಕೃತಿಹೀನರು. ಸಮುದ್ರ ದಾಟಿ ಪಾಪಿಗಳ ಊರಿಗೆ ಹೋದವರು ಮಧ್ವಾಚಾರ್ಯರು ಹಿಂದೆ ಕುಳಿತುಕೊಳ್ಳುತ್ತಿದ್ದ ಸರ್ವಜ್ಞ ಪೀಠ ಏರಲು ಮತ್ತು ಶ್ರೀಕೃಷ್ಣ ಪೂಜೆ ಮಾಡಲು ಅನರ್ಹರಾಗುತ್ತಾರೆ ಎನ್ನುವುದು ಒಂದು ವಾದ.



ವಿವಾದದ ಬಗ್ಗೆ ಚರ್ಚಿಸುತ್ತಿರುವ ಮಠಾಧೀಶರುಗಳು

> ಎಲ್ಲಕ್ಕೂ ಮೂಲ ಕಾರಣರಾಗಿರುವ ಅಷ್ಟಮಠಾಧೀಶರು, ಭೂಗತಲೋಕದ ದೊರೆಗಳಿಗಿಂತಲೂ ಕೆಳಮಟ್ಟದಲ್ಲಿ ಶತ್ರುಗಳನ್ನು ಮಣಿಸಲು ಸಂಚು-ಪ್ರತಿ ಸಂಚುಗಳನ್ನು ಹೆಣೆಯುತ್ತಿದ್ದಾರೆ. 'ವಿಧ್ವಂಸಕರ ಜತೆ' ಗುಪ್ತ ಸಮಾಲೋಚನೆಗಳನ್ನು ನಿರಂತರವಾಗಿ ನಡೆಸುತ್ತಿದ್ದಾರೆ. ಯಾವ ರಾಜಕಾರಣಿಗೂ ಕಡಿಮೆಯಿಲ್ಲದ ಪೇಜಾವರರ ರಾಜಕೀಯ ದಾಳ ಯಾವ ಅನಾಹುತ ಸೃಷ್ಟಿಸಲಿದೆ ಎನ್ನುವುದನ್ನು ಈಗಲೇ ಹೇಳಲಾಗದಾದರೂ ಕೃಷ್ಣನ ಪೂಜೆ ಯಾರೇ ಮಾಡಿದರೂ, ಮಾಡದೇ ಹೋದರೂ ಇದರಿಂದ ಸಮಾಜ ಕಳೆದುಕೊಳ್ಳುವಂತದ್ದು ಮಾತ್ರ ಏನೂ ಇಲ್ಲ!

ಪೇಜಾವರ ಮಠದ ಹಿಂದಿನ ಕಿರಿಯ ಯತಿ, ವಿಶ್ವೇಶ್ವ ತೀರ್ಥರ ಶಿಷ್ಯ ವಿಶ್ವ ವಿಜಯ ಎಂಬುವರು ಅಮೆರಿಕಾ ಪ್ರವಾಸ ಮಾಡಿದ ಏಕೈಕ ಕಾರಣಕ್ಕೆ ಪೀಠತ್ಯಾಗ ಮಾಡಬೇಕಾಗಿ ಬಂದಿತ್ತು. ಅದಮಾರು ಮಠದ ಕ್ಯಾಪಿಟೇಷನ್ ಸ್ವಾಮೀಜಿಯಾಗಿರುವ ವಿಭುದೇಶರು ಅಮೆರಿಕ ಪ್ರಯಾಣ ಮಾಡಿದ ಕಾರಣಕ್ಕೆ ಶ್ರೀಕೃಷ್ಣ ಪೂಜೆ ಮಾಡುವ ಹಕ್ಕಿನಿಂದ ವಂಚಿತರಾಗಿದ್ದರು. ನಾಡಿದ್ದು ಜನವರಿ 18 ಕ್ಕೆ ಪರ್ಯಾಯ ಪೀಠವೇರಬೇಕಾಗಿರುವ ಪುತ್ತಿಗೆ ಮಠದ ಸುಗುಣೇಂದ್ರರು ಹತ್ತು ವರ್ಷದ ಹಿಂದೆ ಅಮೆರಿಕಕ್ಕೆ ಹೋದವರು. ಮೊನ್ನೆ ಮೊನ್ನೆಯವರೆಗೂ ಹೋಗಿ ಬಂದು ಮಾಡ್ತಾ ಇದ್ದವರು. ಅಮೆರಿಕದಲ್ಲಿ ದೇವಾಲಯವನ್ನೂ ಸ್ಥಾಪಿಸಿದವರು. "ನಾನು ಪರ್ಯಾಯ ಪೀಠ ಏರಿಯೇ ಸಿದ್ಧ. ಶ್ರೀಕೃಷ್ಣ ಪೂಜೆ ನನ್ನ ಹಕ್ಕು" ಎಂದು ಹಠ ಹಿಡಿದು ಕುಳಿತಿರುವ ಸುಗುಣೇಂದ್ರರ ವಿರುದ್ಧ ಪೇಜಾವರ ನೇತೃತ್ವದಲ್ಲಿ ಸಂಪ್ರದಾಯಸ್ಥ ಮಠಾಧೀಶರು ಸಮರಕ್ಕೆ ಬದ್ಧ ಎಂಬಂತೆ ನಿಂತು ಬಿಟ್ಟಿದ್ದಾರೆ.

ಪುತ್ತಿಗೆ ದ್ವಂದ್ವ

ಇದೀಗ ಶ್ರೀಕೃಷ್ಣ ಪೂಜೆ ಮಾಡಿಯೇ ಸಿದ್ಧ ಎನ್ನುತ್ತಿರುವ ಸುಗುಣೇಂದ್ರರು ಹಿಂದೆ ವಿಶ್ವ ವಿಜಯರ ಪೀಠ ತ್ಯಾಗಕ್ಕೆ ಕಾರಣರಾದವರು. ವಿಶ್ವವಿಜಯರು ಅಮೆರಿಕಕ್ಕೆ ಹೋದ ಕಾರಣ ಕೃಷ್ಣ ಪೂಜೆ ಮಾಡಲು ಅರ್ಹತೆ ಕಳೆದುಕೊಂಡಿದ್ದಾರೆ ಎಂದು ಬೀದಿರಂಪ ಮಾಡಿದವರು ಇದೇ ಸುಗುಣೇಂದ್ರರು. ಅಂದು ವಿರೋಧ ಮಾಡಿದವರೇ ಇಂದು ಪೂಜೆ ಮಾಡಲು ಹಕ್ಕು ಸ್ಥಾಪಿಸುತ್ತಿರುವುದು ಇವರ ದ್ವಂದ್ವಕ್ಕೆ ಸಾಕ್ಷಿಯಾಗಿದೆ. ಅವಕಾಶವಾದ ಮತ್ತು ಸ್ವಾರ್ಥ ಎಂದರೆ ಇದುವೇ ಎನ್ನುತ್ತಾರೆ ಪುತ್ತಿಗೆ ಸ್ವಾಮೀಜಿಗಳ ವಿರೋಧಿಗಳು.

ಆದರೂ ಪುತ್ತಿಗೆ ಸ್ವಾಮೀಜಿ ಸ್ಥಳೀಯವಾಗಿ ಕ್ರಾಂತಿಕಾರಿಯಾಗಿ ಗುರುತಿಸಲ್ಪಟ್ಟಿದ್ದಾರೆ. ಶ್ರೀಕೃಷ್ಣ ದೇವಾಲಯದ ಸಂಪ್ರದಾಯವನ್ನು ಮುರಿಯಲು ಹೊರಟಿರುವ ಸುಧಾರಣಾವಾದಿಯಾಗಿಯೂ ಸಾ[...] ಜನಿಕರ ಕಣ್ಣಿಗೆ ಕಾಣುತ್ತಿದ್ದಾರೆ. ಇತರ ಮಠಾಧೀ[...] ವಿರೋಧ ಬರುವ ಅರಿವಿದ್ದರೂ, ವರ್ಷದ ಹಿಂ[...] ಪೂರ್ವಭಾವಿ ಕಾರ್ಯಕ್ರಮಗಳನ್ನು ಒಂದೊಂದಾಗಿಯ[...] ನಡೆಸಿಕೊಂಡು ಬಂದು ಧೈರ್ಯ ಪ್ರದರ್ಶಿಸಿದ್ದಾರೆ.

ಪರ್ಯಾಯ ಮಹೋತ್ಸವದ ಪೂರ್ವಭಾವಿ ಕಾರ್ಯಕ್ರಮಗಳು ಒಂದು ವರ್ಷದ ಹಿಂದೆ ಆರಂ[...] ಗೊಳ್ಳುತ್ತದೆ. ಕಟ್ಟಿಗೆ ಮುಹೂರ್ತ, ಅಕ್ಕಿ ಮುಹೂರ್ತ, [...] ವಾಳೆ ಮುಹೂರ್ತ ಇತ್ಯಾದಿ ಹೆಸರುಗಳಲ್ಲಿ ಇದ[...] ನಡೆಯುತ್ತದೆ. ಇದನ್ನು ಒಂದೊಂದಾಗಿಯೇ ನಡೆಸು[...] ಬಂದ ಪುತ್ತಿಗೆ ಮಠದ ಸುಗುಣೇಂದ್ರರು ವಿರುಪು[...] ಪ್ರವೇಶವನ್ನೂ ಅದ್ದೂರಿಯಾಗಿಯೇ ಮಾಡಿ, ಇದೀ[...] ಪಾದಪೂಜೆ ಮತ್ತು ಸನ್ಮಾನ ಸ್ವೀಕರಿಸುತ್ತಾ ದಾಂಗು[...] ಇಡುತ್ತಿದ್ದಾರೆ.

ಪೇಜಾವರ ಪೇಚಾಟ


ಅಷ್ಟಮಠಗಳಲ್ಲಿ ಯಾವತ್ತೂ 'ದೊಡ್ಡಣ್ಣ'ನ[...] ವರ್ತಿಸುತ್ತಾ ಪ್ರತಿಯೊಂದು ಆಗುಹೋಗುಗಳ[...] ಮೂಗು ತೂರಿಸುತ್ತಾ ಇರುವ ಪೇಜಾವರರು [...] ಬಾರಿಯೂ ದೊಡ್ಡಣ್ಣ ಆಗಲು ಹೊರಟು ಸಣ್ಣವರಾ[...] ದ್ದಾರೆ. ಇವರ ಈಗಿನ ಪೇಚಾಟ, ಪೀಕಲಾಟ ನೋಡಿದ[...]



ಅಸಹ್ಯವೂ, ಅನುಕಂಪವೂ ಒಟ್ಟಿಗೆ ಹುಟ್ಟುತ್ತದೆ. ಪರ್ಯಾಯ ವಿವಾದ ಮಠದೊಳಗಿನ ಖಾಸಗಿ ವಿಷಯ. ಹೊರಗಿನವರು ಮಧ್ಯ ಪ್ರವೇಶ ಮಾಡುವುದು ಬೇಡ. ಎಲ್ಲವನ್ನು ನಾವು ಸೌಹಾರ್ದಯುತವಾಗಿ ಬಗೆಹರಿಸಿಕೊಳ್ಳುವ ಎನ್ನುತ್ತಿದ್ದವರು ಇದೇ ಪೇಜಾವರರು. ಹೀಗೆ ಹೇಳುತ್ತ ಮುಕ್ಕಿಯುವರ ಪತ ಮಾತನಾಡಿ ವಿವಾದ ದೊಡ್ಡದು ಮಾಡಿದವರೂ ಇವರೇ. ಪ್ರಚಾರಪ್ರಿಯರಾದ ಪೇಜಾವರ ಪತ್ರಿಕಾಗೋಷ್ಠಿ ಕರೆದು, ಟಿವಿ ಸಂದರ್ಶನ ಕೊಟ್ಟು ವಿವಾದವನ್ನು ಸಾರ್ವಜನಿಕ ಚರ್ಚೆಗೆ ಗುರಿಪಡಿಸಿದರು. ಪುತ್ತಿಗೆ ವಿರುದ್ಧ ಜನಾಭಿಪ್ರಾಯವನ್ನು ರೂಪಿಸಲು ಬೆಂಗಳೂರಿನಲ್ಲಿ ಬೇನಾಮಿ ಪ್ರತಿಷ್ಠಾನವೊಂದಕ್ಕೆ ಜನ್ಮ ಕೊಟ್ಟರು. ಭವಿಷ್ಯದ ಪ್ರಜ್ಞೆಯೇ ಇಲ್ಲದ ಪ್ರಜ್ಞಾ ಪ್ರತಿಷ್ಠಾನ ಎಂಬ ಸಂಸ್ಥೆ ಪೇಜಾವರರ ಮುಖವಾಣಿಯಾಗಿ ಕೆಲಸ ಮಾಡಿತು. ಇದೇ ಮುಖವಾಡದಲ್ಲಿ ಪೇಜಾವರರು ಅತೀ ಕೆಳಮಟ್ಟಕ್ಕೂ ಇಳಿದು ಪುತ್ತಿಗೆ ವಿರುದ್ಧ ಸಮರ ನಡೆಸಿದರು.

[illegible]

ಪರ್ಯಾಯ ವಿವಾದದಲ್ಲಿ ಪೇಜಾವರ ಈಗಾಗಲೇ ಬಿದ್ದಿದ್ದಾರೆ. ಆದರೂ ಮೀಸೆ ಮಣ್ಣಾಗಲಿಲ್ಲ ಎಂಬಂತೆ ವರ್ತಿಸುತ್ತಿದ್ದಾರೆ. ಶಿರೂರು ಮಠದ ಕ್ರಿಮಿನಲ್ ಸ್ವಾಮೀಜಿ ಲಕ್ಷ್ಮೀವರ ಹಾಗೂ ಅದಮಾರು ಮಠದ ವಿಭುದೇಶರನ್ನು ಹೊರತುಪಡಿಸಿ ಉಡುಪಿಯ ಆರು ಮಂದಿ ಮಠಾಧೀಶರನ್ನು ಪುತ್ತಿಗೆ ವಿರೋಧಿ ಗುಂಪಿಗೆ ತರುವಲ್ಲಿ ಪೇಜಾವರ ಯಶಸ್ವಿಯಾಗಿದ್ದಾರೆ, ನಿಜ.



ಸುಗುಣೇಂದ್ರರಿಗೆ ಬೆಂಬಲ ವ್ಯಕ್ತಪಡಿಸುತ್ತಿರುವ ಲಕ್ಷ್ಮೀವರ

ಆದರೆ ಮಠದೊಳಗೆ ಗುಂಪು ಕಟ್ಟುವಲ್ಲಿ ಯಶಸ್ವಿಯಾಗಿರುವ ವಿಶ್ವೇಶ ಸ್ವಾಮೀಜಿ ಮಠದ ಹೊರಗಡೆ ಜನಬೆಂಬಲ ಗಳಿಸುವಲ್ಲಿ ಸಂಪೂರ್ಣ ವಿಫಲರಾಗಿ ಇಂಗು ತಿಂದ ಮಂಗನಂತಾಡುತ್ತಿದ್ದಾರೆ.

[illegible]

ಉಡುಪಿಯ ಸಾರ್ವಜನಿಕರ ನಡುವೆ ಪ್ರಸ್ತುತ ಪೇಜಾವರ ಮಾನ್ಯತೆ, ಗೌರವ, ಪ್ರತಿಷ್ಠೆ ಎಲ್ಲವನ್ನೂ ಕಳೆದುಕೊಂಡಿದ್ದಾರೆ. ಪುತ್ತಿಗೆ ಮಠಾಧೀಶರು ಪರ್ಯಾಯದ ಪೂರ್ವಭಾವಿ ಪುರಪ್ರವೇಶ ಮೆರವಣಿಗೆಯಲ್ಲಿ ನಾಗರಿಕರು ಅಂದು ಹೆಚ್ಚಿನ ಸಂಖ್ಯೆಯಲ್ಲಿ ನೆರೆದು ಬೆಂಬಲ ವ್ಯಕ್ತಪಡಿಸಿದ್ದಾರೆ. ಎರಡು ವರ್ಷಗಳಿಗೊಮ್ಮೆ ನಡೆಯುವ ಪುರಪ್ರವೇಶ ಮೆರವಣಿಗೆಯ ಇತಿಹಾಸದಲ್ಲಿ ಈ ಬಾರಿ ಸೇರಿದಷ್ಟು ಜನರು ಇದುವರೆಗೆ ಸೇರಿರಲಿಲ್ಲ. ಸಾರ್ವಜನಿಕರು ಪೇಜಾವರರಿಗೆ ನೇರವಾಗಿಯೇ ಕೊಟ್ಟ ಉತ್ತರವಿದು.

[illegible]

ರಾಜ್ಯದ ವಿವಿಧ ಜಿಲ್ಲೆಗಳಿಂದ ಆಗಮಿಸಿದ ಮಾಧ್ವ ವಿದ್ವಾಂಸರು ಜ. 11 ಮತ್ತು 12 ರಂದು ಶಾಸ್ತ್ರ ಗ್ರಂಥಗಳಲ್ಲಿ ಸಮುದ್ರೋಲ್ಲಂಘನ ಇತ್ಯಾದಿ ವಿಚಾರಗಳ ಬಗ್ಗೆ ಏನಿದೆ ಎಂದು ವಿಚಾರ ವಿನಿಮಯ ನಡೆಸಿದ್ದಾರೆ. ಸಮುದ್ರೋಲ್ಲಂಘನಗೈದವರು ಶ್ರೀಕೃಷ್ಣ ಪೂಜೆ ಮಾಡಲು, ಸರ್ವಜ್ಞ ಪೀಠಾರೋಹಣವನ್ನು ಸಹ ಸುಗುಣೇಂದ್ರರು ಮಾಡಬಾರದೆಂದು ಫತ್ವಾ ಹೊರಡಿಸಿದ್ದಾರೆ.

ಪೇಜಾವರರು ಈ ಹಿಂದೆ "ಸುಗುಣೇಂದ್ರರು ಬೇಕಾದರೆ ಸರ್ವಜ್ಞ ಪೀಠಾರೋಹಣ ಮಾಡಲಿ. ಆದರೆ ಕೃಷ್ಣ ಪೂಜೆ ಮಾಡುವುದು ಬೇಡ" ಎಂದಿದ್ದರು. [illegible] ಎರಡು ವರ್ಷ ಪುತ್ತಿಗೆ ಶ್ರೀಗಳು ಕೃಷ್ಣ ಮಠದ ಅಧಿಕಾರ ಸೂತ್ರ ಹಿಡಿಯಲು ತಕ್ಕ [illegible] ಎಂದಿದ್ದವರು ಈಗ [illegible] ವಿದ್ವಾಂಸರ [illegible] ಬದಲಾಯಿಸಿದ್ದಾರೆ. ಸುಗುಣೇಂದ್ರ ಸರ್ವಜ್ಞ ಪೀಠಾರೋಹಣವನ್ನೂ [illegible]

ಧಿಸಿದ್ದಾರೆ. ಹೇಗಾದರೂ ಮಾಡಿ ಪುತ್ತಿಗೆ ಸ್ವಾಮಿಯನ್ನು ಮಣಿಸಬೇಕೆಂದಿರುವ ಪೇಜಾವರ ಕಳೆದೊಂದು ವಾರದಿಂದ ನಡೆಸಿರುವ ರಹಸ್ಯ ಸಭೆಗಳಿಗೆ ಲೆಕ್ಕವಿಟ್ಟವರಿಲ್ಲ. ರಾಜಕಾರಣಿಯಂತೆ ಸಂಚು ಹೂಡುತ್ತಿರುವ ಪೇಜಾವರ ಜ. 15 ರಿಂದ ಉಪವಾಸ ಸತ್ಯಾಗ್ರಹ ಆಚರಿಸಲು ಹುನ್ನಾರ ನಡೆಸಿದ್ದಾರೆ. ಪುತ್ತಿಗೆ ಮಠದ ಸುಗುಣೇಂದ್ರರು ಅಭೂತಪೂರ್ವ ಜನಬೆಂಬಲದೊಂದಿಗೆ ಸರ್ವಜ್ಞ ಪೀಠವೇರಲು ಸರ್ವಸಿದ್ಧತೆಗಳನ್ನು ನಡೆಸಿದ್ದಾರೆ. ಕೃಷ್ಣ ಪೂಜೆಯ ಹಕ್ಕನ್ನು ಬಿಟ್ಟು ಕೊಡಲಾರೆ ಎಂದು ಪುನರಪಿ ಘೋಷಿಸಿದ್ದಾರೆ. ನಿಶ್ಚಿಂತೆಯಿಂದ ಊರೆಲ್ಲಾ ಸನ್ಮಾನ ಸ್ವೀಕರಿಸುತ್ತಾ ಹೀರೋ ಆಗಿ ಮಿಂಚುತ್ತಿದ್ದಾರೆ. ಪೇಜಾವರ ಹಾಗೂ ಇತರರು ಜನಬೆಂಬಲ ಕಳೆದುಕೊಳ್ಳುತ್ತಾ ಮತ್ತೆ ಮತ್ತೆ ಜನರ ಮೇಲೆ ಮನುವಾದ ಹೇರುತ್ತಾ, ವರ್ಣಾಶ್ರಮದ ಪಾಠ ಮಾಡುತ್ತಾ ಸಣ್ಣವರಾಗುತ್ತಿದ್ದಾರೆ.

ಹೊಯ್ಕೈ

ಜ. 18 ರಂದು ಪರ್ಯಾಯ ಮಹೋತ್ಸವದಂದು ದೇಗುಲದೊಳಗೆ ಪುತ್ತಿಗೆ ಹಾಗೂ ಪೇಜಾವರ ಬೆಂಬಲಿಗರ ನಡುವೆ ಹೊಯ್ಕೈ ನಡೆದರೂ ಆಶ್ಚರ್ಯವಿಲ್ಲ, ಯಾಕೆಂದರೆ ಈ ಬ್ರಾಹ್ಮಣ ವಟುಗಳು ಎಲ್ಲಕ್ಕೂ ಸಿದ್ಧರಾಗಿದ್ದಾರೆ. ಹೀಗೊಂದು ವರದಿ ಉಡುಪಿ ಪೊಲೀಸರ ಮೇಜಿನ ಮೇಲಿಂದ ಹೊರಟು ನಗರದಾದ್ಯಂತ ಇಂಟೆಲಿಜೆಂಟ್ಸ್ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ. ದೇಗುಲದೊಳಗೆ ನಡೆಯುವ ಘರ್ಷಣೆ ತಪ್ಪಿಸಲು ಪೊಲೀಸರು ಕಾರ್ಯ ಯೋಜನೆಯನ್ನು ಹಮ್ಮಿಕೊಳ್ಳುತ್ತಿದ್ದಾರೆ. ಇದೀಗ ಪೊಲೀಸರ ತಲೆ ಕೆಡಿಸುತ್ತಿರುವುದು ಈ ಯತಿಗಳ ಪುಂಡಾಟಿಕೆಗೆ ಮಾತ್ರ.

ಇಲ್ಲಿ ಪುತ್ತಿಗೆ ಮಠದ ಸುಗುಣೇಂದ್ರರು ಸೋಲ್ತಾರೋ ಎನ್ನುವುದಕ್ಕಿಂತಲೂ ಪೇಜಾವರ ಮಠದ ದೊಡ್ಡಣ್ಣ ವಿಶ್ವೇಶತೀರ್ಥರು ಗೆಲ್ತಾರೋ, ಧರ್ಮಸ್ಥಳದ ಡಾ. ವೀರೇಂದ್ರ ಹೆಗ್ಗಡೆ ಗೆಲ್ತಾರೋ ಎನ್ನುವುದೇ ಕುತೂಹಲಕಾರಿಯಾದ ಪ್ರಶ್ನೆಯಾಗಿದೆ.

[illegible]

ಮಾಧ್ವ ಮಠಾಧಿಪತಿಗಳ ವಾದ-ವಿವಾದ ನ್ಯಾಯಾಲಯದ ಮೆಟ್ಟಲು ಹತ್ತಿದ್ದು, ಮಧ್ಯಂತರ ತೀರ್ಪು ಪರ್ಯಾಯದ ಮೊದಲು ಹೊರಬೀಳಲಿದೆ. ಹಾಲಿ



ಪರ್ಯಾಯ ಪೀಠದ ಕೃಷ್ಣಾಪುರ ಮಠದ ವಿದ್ಯಾಸಾಗರರ ತೆರೆಮರೆಯ ಪ್ರಯತ್ನದ ಫಲವಾಗಿ ಉಡುಪಿಯ ಹರೀಶ್ ಭಟ್ ಹಾಗೂ ನಾಗರಾಜ ರಾವ್ ಎಂಬುವರು ಸಿವಿಲ್ ನ್ಯಾಯಾಲಯದ ಮೆಟ್ಟಲು ಹತ್ತಿದ್ದಾರೆ. ಜಿಲ್ಲಾ ಮಟ್ಟದಲ್ಲಿದ್ದ ಈ ವಿವಾದದಲ್ಲಿ ವಾದ-ಪ್ರತಿವಾದ ನಡೆಸಲು ಉಡುಪಿಗೆ ಆಗಮಿಸಿದವರು ಅಂತಿಂತಹವರಲ್ಲ, ರಾಜ್ಯ ಸರ್ಕಾರದ ಅಡ್ವೋಕೇಟ್ ಜನರಲ್ ಬಿ.ವಿ. ಆಚಾರ್ಯ ಹಾಗೂ ಮಾಜಿ ಪಬ್ಲಿಕ್ ಪ್ರಾಸಿಕ್ಯೂಟರ್ ದೊರೈರಾಜು. ಆಚಾರ್ಯರು ಪುತ್ತಿಗೆ ಪರವಾಗಿಯೂ, ದೊರೈರಾಜು ಪುತ್ತಿಗೆ ವಿರುದ್ಧವಾಗಿಯೂ, ನ್ಯಾಯಾಲಯದಲ್ಲಿ ವಾದ ಮಂಡಿಸಿದರು.

ದೇಶ, ಜನರು ನಂಬಿಕೆ ಮೇಲೆ ನಿಂತಿದ್ದಾರೆ. ಸಮುದ್ರೋಲ್ಲಂಘನೆ ಮಾಡಿದವರು ಕೃಷ್ಣ ಪೂಜೆ ಮಾಡಬಾರದೆನ್ನುವುದು ಸಂಪ್ರದಾಯ ಮತ್ತು ನಂಬಿಕೆ. ಈ ನಂಬಿಕೆಯನ್ನು ಗೌರವಿಸುವಂತೆ ತೀರ್ಪು ನೀಡಬೇಕೆನ್ನುವುದು ದೊರೈರಾಜು ವಾದವಾಗಿತ್ತು.

ಈ ಮಧ್ಯೆ ಆದಿತ್ಯವಾರ ನಡೆದ ಮಠಾಧೀಶರ ಸಭೆಯಲ್ಲಿ ಪೇಜಾವರರು ಬರುವ 15ರ ಮಧ್ಯಾಹ್ನದಿಂದ 18ರ ಮಧ್ಯಾಹ್ನದ ತನಕ ಉಪವಾಸ ಕೂತುಕೊಳ್ಳುವುದಾಗಿ ಘೋಷಿಸಿದ್ದಾರೆ. ಇವರೊಂದಿಗೆ ಕೋಲಾರದ ಪ್ರಸನ್ನ ಶೂರ ಮಾಧವ ತೀರ್ಥ ಎಂಬ ಸ್ವಾಮಿಯೂ ಉಪವಾಸ ಮಾಡಲಿದ್ದಾರಂತೆ.

ಯಾವ ರಾಜಕಾರಣಿಗೂ ಕಡಿಮೆಯಿಲ್ಲದ ಪೇಜಾವರರ ರಾಜಕೀಯ ದಾಳ ಯಾವ ಅನಾಹುತ ಸೃಷ್ಟಿಸಲಿದೆ ಎನ್ನುವುದನ್ನು ಈಗಲೇ ಹೇಳಲಾಗದು. ಕೃಷ್ಣನ ಪೂಜೆ ಯಾರೇ ಮಾಡಿದರೂ, ಮಾಡದೇ ಹೋದರೂ ಇದರಿಂದ ಸಮಾಜ ಕಳೆದುಕೊಳ್ಳುವಂತದ್ದು ಮಾತ್ರ ಏನೂ ಇಲ್ಲ!

-ಶ್ರೀರಾಮ ದಿವಾಣ

ಕೃಷ್ಣ ದೇಗುಲ ಜನರಿಗೆ ಸೇರಿದ್ದು

ಪುತ್ತಿಗೆ ಸ್ವಾಮೀಜಿ ಅರ್ಹರೋ, ಅನರ್ಹರೋ ಎಂಬ [illegible] ಇವರಲ್ಲದೆ ಬೇರೆ ಯಾರಾದರೂ ಯಾಕೆ ಪೂಜೆ ಮಾಡಬಾರದು ಎಂಬುದು ಈಗಿನ ಪ್ರಶ್ನೆ. ಮೋಸ, ವಂಚನೆ, ಸುಳ್ಳು, ರಾಜಕಾರಣ, ಅತ್ಯಾಚಾರ, ಹಗರಣ ಇತ್ಯಾದಿಗಳಿಂದಾಗಿ ಈಗಲೇ ನೈತಿಕತೆ ಕಳೆದುಕೊಂಡಿರುವ ಅಷ್ಟ ಮಠಾಧೀಶರ ಬದಲು ಇತರೆ ಯಾರಾದ್ದಾದರೂ ಪೂಜೆಗೆ ನೇಮಕ ಮಾಡಿಕೊಳ್ಳಬಹುದಲ್ಲ?

ಈ ಬಗ್ಗೆ ಸರ್ಕಾರ ಯಾಕೆ ಮೌನ ವಹಿಸಿದೆ ಎನ್ನುವುದು ನಿಗೂಢವಾಗಿದೆ. ಈಗಾಗಲೇ ಅನೇಕ ಮಂದಿ ಗಣ್ಯರ ಸಹಿತ ಸಾರ್ವಜನಿಕರು, ಕೃಷ್ಣ ದೇವಾಲಯದ ಪ್ರಧಾನ ಹಕ್ಕುದಾರರಾದ ಕುರುಬ ಸಮುದಾಯದ ಜನ ದೇವಾಲಯವನ್ನು ಮುಜರಾಯಿ ಇಲಾಖೆಗೆ ಒಳಪಡಿಸುವಂತೆ ಒತ್ತಾಯಿಸಿದ್ದಾರೆ. ಪರ್ಯಾಯ ವಿವಾದ ತಾರಕಕ್ಕೇರಿದ್ದು, ಸಾರ್ವಜನಿಕ ಶಾಂತಿಭಂಗಕ್ಕೆ ಕಾರಣವಾಗಿರುವ ಹಿನ್ನೆಲೆಯಲ್ಲಿ ಸರ್ಕಾರದ ಮಧ್ಯಪ್ರವೇಶಕ್ಕೆ ಇದು ಸೂಕ್ತ ಕಾಲವೂ ಆಗಿದೆ.

ಎಲ್ಲಕ್ಕಿಂತ ಮುಖ್ಯ ವಿಷಯ ಯಾವುದೆಂದರೆ ಇದು ಕೃಷ್ಣ ದೇಗುಲವಾಗಿದ್ದು ಸಾರ್ವಜನಿಕರಿಗೆ ಸೇರಿದೆಯೇ ಹೊರತು ಇದು ಅಷ್ಟಮಠಗಳ ಭಾಗವಲ್ಲ ಎಂಬ ನ್ಯಾಯಾಲಯದ ತೀರ್ಪು ಇದೆ. ಆದರೆ ಈ ಯತಿಗಳು ಜನರ ಈ ದೇವಸ್ಥಾನ ತಮ್ಮ ಆಸ್ತಿ ಎಂಬಂತೆ ವರ್ತಿಸುತ್ತಿರುವುದು ವಿಚಿತ್ರವಾಗಿದೆ.

[illegible]

ಅಷ್ಟಕ್ಕೂ ಗರ್ಭಗುಡಿಯಲ್ಲಿರುವ ವಿಗ್ರಹ ಗಂಡೋ, ಹೆಣ್ಣೋ ಎಂಬ ವಿವಾದವೂ ಪರಿಹಾರ ಕಾಣದೇ ಹಾಗೆಯೇ ಉಳಿದಿದೆ. ಒಳಗಿರುವುದು ಗಂಡು ವಿಗ್ರಹವಲ್ಲ, ಅದೊಂದು ಹೆಣ್ಣು ವಿಗ್ರಹ ಎಂಬ ವಾದವೂ ಇದೆ. ಇದಕ್ಕೆ ಪೂರಕವೋ ಎಂಬಂತೆ ಪ್ರತಿ ನವರಾತ್ರಿ ಕೃಷ್ಣ ವಿಗ್ರಹಕ್ಕೆ ನವದುರ್ಗೆಯರ ಅಲಂಕಾರ ಮಾಡಿ ಪೂಜೆ ಮಾಡಲಾಗುತ್ತದೆ. ಕೃಷ್ಣ ವಿಗ್ರಹಕ್ಕೆ ಸೀರೆ ತೊಡಿಸುವ ಬೇರೆಲ್ಲೂ ಇರದ ಈ ಸಂಪ್ರದಾಯ ನೋಡಿದರೆ ವಿಗ್ರಹ ಹೆಣ್ಣಿನದೋ ಎಂಬ ಸಂಶಯ ಮೂಡಲೂ ಕಾರಣವಾಗಿದೆ.

ಈ ನಿಗೂಢ ರಹಸ್ಯ ಹೊರಬರಬಾರದೆಂಬ ಉದ್ದೇಶದಿಂದಲೇ ಇಲ್ಲಿನ ಪೂಜಾ ಹಕ್ಕು ತಮಗೆ ಮಾತ್ರ ಸೇರಿದ್ದೆಂಬ ಯತಿಗಳ ಹಠಕ್ಕೆ ಕಾರಣವೆನ್ನಲಾಗಿದೆ.

[illegible]

ಹಿಂದೆ ಅಮೆರಿಕಾ ಪ್ರವಾಸಗೈದು ಕೃಷ್ಣ ಪೂಜೆಯ ಹಕ್ಕಿನಿಂದ ವಂಚಿತರಾಗಿದ್ದ ಅದಮಾರು ಮಠದ ಹಿರಿಯ ಯತಿ ವಿಭುದೇಶರು ಪುತ್ತಿಗೆಗೆ ಬೆಂಬಲವಾಗಿ ನಿಂತರೆ, ಇವರ ಶಿಷ್ಯ ಕಿರಿಯ ಪಟ್ಟದ ವಿಶ್ವಪ್ರಿಯರು ಪುತ್ತಿಗೆ ಸ್ವಾಮಿಯ ವಿರುದ್ಧ ನಿಂತುಬಿಟ್ಟಿದ್ದಾರೆ. ಹಿಂದೂಗಳನ್ನು ಒಂದು ಮಾಡುವವರು, ಸಮಾಜವನ್ನು ಒಂದು ಮಾಡುವವರು ಇವರು. ಆದರೆ ಈ ಒಂದು ಮಠದಲ್ಲೇ ಎರಡು ವಿರುದ್ಧ ಧ್ರುವಗಳಿವೆ!

[illegible]

ಪುತ್ತಿಗೆ ಸ್ವಾಮೀಜಿಗೆ ಸದ್ಬುದ್ಧಿ ಬರುವಂತೆ ಮಾಡಲು, ಅವರನ್ನು ಪ್ರಭಾವಿಸಲು, ಪೇಜಾವರ ಹಾಗೂ ಹಾಲಿ ಪರ್ಯಾಯ ಕೃಷ್ಣಾಪುರ ಮಠದ ಸ್ವಾಮೀಜಿ ನೇತೃತ್ವದಲ್ಲಿ ಇತರ ಮಠಾಧೀಶರು ಹಾಗೂ ಮಾಧ್ವ ವಿದ್ವಾಂಸರು ವಾರದ ಹಿಂದೆ ಕೃಷ್ಣನೆದುರು ನಿಂತು ವಿಶೇಷ ಪ್ರಾರ್ಥನೆ ಸಲ್ಲಿಸಿ, ಇದೇ ಕಾರಣಕ್ಕೆ ವಾಯುಸ್ತುತಿ, ಪುನಶ್ಚರಣ ಇತ್ಯಾದಿ ಹೋಮ, ಹವನಗಳನ್ನು ನಡೆಸಿದರು. ಎಲ್ಲವೂ ಆದಿತ್ಯವಾರ ಕೋಟಿ ತುಳಸಿ ಅರ್ಚನೆಯೊಂದಿಗೆ ಮುಕ್ತಾಯಗೊಂಡಿದೆ. ಪುತ್ತಿಗೆ ಸ್ವಾಮೀಜಿ ವಿರುದ್ಧ ಮಾಟ ಅಂತಲೂ ಈ ಹೋಮ ಹವನಗಳನ್ನು [illegible] ಲಾಗಿತ್ತು. ಏನೇ ಮಾಡಿದರೂ ಪುತ್ತಿಗೆ ಸ್ವಾಮಿ ಬದಲಾಗಿಲ್ಲ. ಇದೆಲ್ಲದರಿಂದಾಗಿ ಅಲ್ಲಿನ ಕೃಷ್ಣನಿಗೆ ಯಾವ ಸಾಮರ್ಥ್ಯ ಶಕ್ತಿ ಇಲ್ಲ ಎಂಬುದನ್ನು [illegible] ಆತನನ್ನು 'ಬೆತ್ತಲೆ' ಮಾಡಿದ್ದಾರೆ.

[illegible]

ಚೆಡ್ಡಿಗಳಿಗೆ ಬ್ಲ್ಯಾಕ್‌ಮೇಲ್

ವಿಶ್ವಹಿಂದೂ ಪರಿಷತ್‌ನ ರಾಷ್ಟ್ರೀಯ ಉಪಾಧ್ಯಕ್ಷರಾಗಿರುವ ಪೇಜಾವರರಿಗೆ ಪರ್ಯಾಯ ವಿವಾದದಲ್ಲಿ ಸಂಘ ಪರಿವಾರದ ಯಾವ ನಾಯಕರೂ ಇದುವರೆಗೆ ಬೆಂಬಲ ನೀಡಿಲ್ಲ. ಪೇಜಾವರ ಈಗೊಬ್ಬ ಗೊಡ್ಡು ಹಸು ಎನ್ನುವುದನ್ನು ತಿಳಿದುಕೊಂಡಿರುವ ಪರಿವಾರದ ಜನರು ಪೇಜಾವರರನ್ನು ನಿರ್ಲಕ್ಷಿಸಿದ್ದಾರೆ. ಯುವ ಸ್ವಾಮೀಜಿ, ಅಮೆರಿಕ ವಾಸಿ ಸುಗುಣೇಂದ್ರರು ಹಾಲು ಸಿಗುವ ಹಸು ಎಂದು ಸರಿಯಾಗಿಯೇ ಗುರುತಿಸಿ ಬೆಂಬಲ ವ್ಯಕ್ತಪಡಿಸಿದ್ದಾರೆ.

ಈ ಬೆಳವಣಿಗೆಯಿಂದ ಸ್ಥೈಮಿತ ಕಳೆದುಕೊಂಡಿರುವ ಪೇಜಾವರ ಸಂಘಪರಿವಾರದ ನಾಯಕರನ್ನು ಪರೋಕ್ಷವಾಗಿ ಬ್ಲ್ಯಾಕ್‌ಮೇಲ್ ಮಾಡುವ ಯತ್ನ ನಡೆಸಿದ್ದಾರೆ. ಮಾಯಾವತಿಯ ಭೇಟಿಗೆ ದಿನಾಂಕ ಕೇಳಿರುವುದು ಮತ್ತು ಬಿಎಸ್‌ಪಿಯಲ್ಲಿ ಬ್ರಾಹ್ಮಣರಿಗೆ ಸ್ಥಾನ-ಮಾನ ಕಲ್ಪಿಸುವಂತೆ ಕೇಳಿರುವುದು ಇದೇ ಹಿನ್ನೆಲೆಯಲ್ಲಿ.

ಈ ನಡುವೆ ಒಂದು ಕಲ್ಲಿಗೆ ಎರಡು ಹಕ್ಕಿಗಳನ್ನು ಹೊಡೆದುರುಳಿಸುವಂತೆ ವಿಮಾನಯಾನ ತ್ಯಜಿಸಲು ಸಿದ್ಧ ಎಂಬ ಹೇಳಿಕೆಯನ್ನು ಪೇಜಾವರರು ಕೊಟ್ಟಿದ್ದಾರೆ. ಕೃಷ್ಣ ಪೂಜೆ ಮಾಡಲು ಸಮುದ್ರೋಲ್ಲಂಘನೆ ನಿಷಿದ್ಧವಾದರೆ ವಿಮಾನಯಾನವನ್ನೂ ನಿಷೇಧಿಸಬೇಕೆಂದು ಪುತ್ತಿಗೆ ಸ್ವಾಮೀಜಿ ಒತ್ತಾಯಿಸಿದರು. ಇದು ಪೇಜಾವರರನ್ನು ಮಣಿಸುವ ತಂತ್ರವೂ ಆಗಿತ್ತು. ಪೇಜಾವರರು ಧರ್ಮ ಸಂಸತ್‌ನ ಹೆಸರಿನಲ್ಲಿ ಉತ್ತರ ಭಾರತದ ವಿವಿಧೆಡೆಗಳಿಗೆ ವಿಮಾನಯಾನ ಮಾಡುತ್ತಿದ್ದುದು ಹೊಸ ವಿಚಾರವಲ್ಲ. ಪುತ್ತಿಗೆ ಸ್ವಾಮೀಜಿ ವಿಮಾನಯಾನ ನಿಷೇಧ ಪ್ರಸ್ತಾಪ ಇಡುವ ಮೂಲಕ ಪೇಜಾವರರ ಬುಡಕ್ಕೆ ದೊಡ್ಡ ಪೆಟ್ಟು ಕೊಟ್ಟಿದ್ದಾರೆ. ಪೇಜಾವರ ಇದಕ್ಕೊಪ್ಪುವ ಮೂಲಕ ಪುತ್ತಿಗೆ ಸುಗುಣೇಂದ್ರರಿಗೂ, ಪರೋಕ್ಷವಾಗಿ ಸಂಘ ಪರಿವಾರದ ನಾಯಕರಿಗೂ ಸಂದೇಶ ರವಾನಿಸಿದ್ದಾರೆ. ಒಂದೆಡೆ ವಿಮಾನಯಾನ ತ್ಯಜಿಸಲು ಸಿದ್ಧವೆಂದು ಹೇಳುವ ಮೂಲಕ ಸಮುದ್ರೋಲ್ಲಂಘನೆ ಮಾಡಿದ ಪುತ್ತಿಗೆ ಸ್ವಾಮಿ ಕೃಷ್ಣ ಪೂಜೆಯ ಹಕ್ಕನ್ನು ಬಿಟ್ಟುಕೊಡಬೇಕೆಂಬ ಅಂತಹದ್ದಾದರೆ, ಇನ್ನೊಂದೆಡೆ ತನಗೆ ಬೆಂಬಲ ನೀಡದೆ ಅವಮಾನಿಸಿದ ಕಾರಣಕ್ಕೆ ನಾನು ಇನ್ನು ಮುಂದೆ ಸಂಘ ಪರಿವಾರ ಹೊರ ರಾಜ್ಯಗಳಲ್ಲಿ ಹಮ್ಮಿಕೊಳ್ಳುವ ಕಾರ್ಯಕ್ರಮಕ್ಕೆ ತನ್ನ ಅನುಪಸ್ಥಿತಿ ಇರಲಿದೆ ಎಂಬ ಸಂದೇಶ.

ಎಂಗಿದ್ದೋನು ಎಂಗಾದ ಪರಮೇಶ್ವರ ನಾಯ್ಕ



ದಾವಣಗೆರೆ ಜಿಲ್ಲೆಯ ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಹರಪನಹಳ್ಳಿಯೂ ಒಂದು. ಈ ಕ್ಷೇತ್ರದಿಂದ ಈ ಹಿಂದೆ ಗೆದ್ದು ಹೋದ ಹಲವಾರು ಶಾಸಕರುಗಳು 'ಬಂದ ಪುಟ್ಟ, ಹೋದ ಪುಟ್ಟ' ಎಂಬಂತೆ ಕ್ಷೇತ್ರಕ್ಕಾಗಿ ಹೆಚ್ಚು ಕೆಲಸಗಳನ್ನು ಮಾಡದೇ ಹೋದರೂ ಊರಿಗೆ ಉಪದ್ರವಿಗಳಾಗಿರಲಿಲ್ಲ. ಆದರೆ ಈಗ್ಗೆ ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿ ಬಂದಿರುವ ಪಿ.ಟಿ.ಪರಮೇಶ್ವರನಾಯ್ಕ ಮಾತ್ರ 'ಉಂಡೂ ಹೋದ ಕೊಂಡೂ ಹೋದ' ಎಂಬಂತಾಗಿಬಿಟ್ಟಿದ್ದಾನೆ. ಅಷ್ಟೇ ಏಕೆ, ತನ್ನ ಮಿತಿಮೀರಿದ ಗೂಂಡಾಗಿರಿ ಮತ್ತು ಮೋಸ-ವಂಚನೆಗಳ ಮೂಲಕ ಎಳೆಂಟು ವರ್ಷಗಳಲ್ಲೇ ನೂರಾರು ಕೋಟಿ ಆಸ್ತಿಯ ಒಡೆಯನಾಗಿ ರಾಷ್ಟ್ರದ ಕಡು ಭ್ರಷ್ಟ ರಾಜಕಾರಣಿಗಳಲ್ಲಿ ಅಗ್ರಸ್ಥಾನ ಪಡೆದಿದ್ದಾನೆ.


1999ರ ಹಿಂದೆ ಅಂದರೆ, ಈತ ಶಾಸಕನಾಗುವುದಕ್ಕಿಂತ ಹಿಂದೆ ಇವನಿಗಿದ್ದ ಆಸ್ತಿ ಎಂದರೆ ಹುಟ್ಟೂರಾದ ಲಕ್ಷ್ಮೀಪುರ ತಾಂಡದಲ್ಲಿ ಸೋರುತ್ತಿದ್ದ ಒಂದು ಮಾಳಿಗೆ ಮನೆ, ಈತನ ತಾಯಿಯ ಮೇಲಿನ ವಿಶೇಷ ಮಮಕಾರದಿಂದ ಮಾಜಿ ಶಾಸಕ ಯಂಕಾನಾಯ್ಕನ ತಮ್ಮ ಹನುಮಂತನಾಯ್ಕ ಕೊಟ್ಟಿದ್ದ 3 ಎಕರೆ ಜಮೀನು, ಒಂದು ಹಳೇ ಹೀರೋ ಹೊಂಡಾ ಬೈಕು ಮತ್ತು ಪಿ.ಎಲ್.ಡಿ. ಬ್ಯಾಂಕ್ ಮೂಲಕ ಸಾಲದಿಂದ ತಂದಿದ್ದ ಒಂದು ಟ್ರ್ಯಾಕ್ಟರ್. ಇವಿಷ್ಟನ್ನು ಹೊರತುಪಡಿಸಿ ಈತನಿಗೆ ಬೇರೆ ಯಾವುದೇ ರೀತಿಯ ಪಿತ್ರಾರ್ಜಿತ ಆಸ್ತಿಯಾಗಲೀ, ತಾನು ಗಳಿಸಿದ ಸ್ವಂತ ಆಸ್ತಿಯಾಗಲೀ ಇರಲಿಲ್ಲ -ಹರಪನಹಳ್ಳಿಯಲ್ಲಿ ತಾನಿದ್ದ ಮನೆಗೆ ಬಾಡಿಗೆ ಕಟ್ಟಲು ಕೂಡಾ ಈ ಪಿ.ಟಿ.ಪಿ ಒದ್ದಾಡುತ್ತಿದ್ದ.

ಶಾಸಕನಾಗುತ್ತಿದ್ದಂತೆಯೇ ಈತ ತನ್ನಲ್ಲಿ ಮೈಗೂಡಿಸಿಕೊಂಡಿದ್ದ ಉಡಾಳತನ ಹಾಗೂ ವಂಚಕ ಬುದ್ಧಿಗಳಿಗೆ ಚೆನ್ನಾಗಿ ಸಾಣೆ ಹಿಡಿದ. ಒಂದು ಕಡೆ ಸರ್ಕಾರಿ ಯೋಜನೆಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾ ಇನ್ನೊಂದು ಕಡೆ ತನ್ನ ವಂಚನೆಗಳನ್ನು ಮುಚ್ಚಿಹಾಕಿಕೊಳ್ಳಲು ತನ್ನದೇ ಆದ ಹೀನ ಸುಳಿಯ ಅಧಿಕಾರಿಗಳನ್ನು ಕ್ಷೇತ್ರದಲ್ಲಿ ನೇಮಿಸಿಕೊಂಡು ಭರ್ಜರಿ ಲೂಟಿಗಿಳಿದುಬಿಟ್ಟ. ಅಂದು ಮನೆ ಬಾಡಿಗೆ ಕಟ್ಟಲೂ ಒದ್ದಾಡುತ್ತಿದ್ದ ಪಿ.ಟಿ.ಪಿ ಈಗ ತನ್ನ ಊರಿನಲ್ಲೊಂದು ದೊಡ್ಡ ಮನೆ, ಹರಪನಹಳ್ಳಿಯ ಆಚಾರ್ ಲೇಔಟ್‌ನಲ್ಲಿ (ಇದನ್ನು ಡಾಲರ್ಸ್ ಕಾಲೋನಿ ಎಂದು ಇಲ್ಲಿನ ಜನ ವ್ಯಂಗ್ಯವಾಡುತ್ತಾರೆ) ತಂದೆ ಮಕ್ಕಳು ಕ್ರಿಕೆಟ್ ಆಡಬಹುದಾದಷ್ಟು ದೊಡ್ಡ ಮನೆಯನ್ನು ಕಟ್ಟಿಸಿದ್ದಾನೆ. ಜೊತೆಗೆ ದಾವಣಗೆರೆ ಮತ್ತು ಬೆಂಗಳೂರಿನಲ್ಲೂ ಕೂಡಾ ಒಂದೊಂದು ಭವ್ಯ ಬಂಗಲೆಯನ್ನು ಕಟ್ಟಿಸಿದ್ದಾನೆಂದು ಹೇಳಲಾಗುತ್ತಿದೆ. ಆಗ ಮೂರು ಎಕರೆ ಒಡೆಯನಾಗಿದ್ದ ಪಿ.ಟಿ.ಪರಮೇಶ್ವರನಾಯ್ಕ, ಈಗ ಹಿರೇಮ್ಯಾಗಳಗೇರಿ, ಲಕ್ಷ್ಮೀಪುರ ತಾಂಡ, ಬೆಂಡಿಗೇರಿ, ಸತ್ತೂರು ಮತ್ತು ದಾವಣಗೆರೆ ಆಜುಬಾಜಿನಲ್ಲಿ ನೂರಾರು ಎಕರೆ ಅಡಿಕೆ, ತೆಂಗು, ಸಪೋಟ ಹಾಗೂ ಮಾವಿನ ತೋಪುಗಳ ಒಡೆಯನಾಗಿದ್ದಾನೆ. ಲಟಕಾಸಿ ಹೀರೊ ಹೊಂಡ ಬದಲಿಗೆ ಈಗ ತಾನು ಆಸ್ತಿ ಮಾಡಿರುವಲ್ಲೆಲ್ಲಾ ಪ್ರತ್ಯೇಕ ವಾಹನಗಳನ್ನು ಮೆಂಟೇನ್ ಮಾಡುತ್ತಾನೆ. ಕೇವಲ ಏಳೆಂಟು ವರ್ಷಗಳ ಹಿಂದೆ ಬರಿಗೈ ದಾಸನಾಗಿದ್ದ ಪಿಟಿಪಿ ಈಗ ನೂರಾರು ಕೋಟಿ ಆಸ್ತಿಯ ಒಡೆಯನಾಗಿದ್ದಾನೆಂದರೆ ಏನೆಲ್ಲಾ ತಂತ್ರ-ಕುತಂತ್ರಗಳನ್ನು ಬಳಸಿರಬಹುದು? ಹೊಟ್ಟೆಗಿಲ್ಲದವರ ಎಷ್ಟು ಮನೆಗಳ ದೀಪ ಆರಿಸಿರಬಹುದು?

ಪಿಟಿಪಿಯ ರಾಜಕೀಯ ಬೆಳವಣಿಗೆ

ಹಿರೇಮ್ಯಾಗಳಗೇರಿಯ ಮಹಾಬಲೇಶ್ವರಗೌಡ ಎಂಬ ಚೋರ ಗುರುವಿನ ಆಶೀರ್ವಾದದಿಂದ ರಾಜಕೀಯದಲ್ಲಿ ಎಂಟ್ರಿ ಪಡೆದುಕೊಂಡ ಚಾಂಡಾಲ ಶಿಷ್ಯನೇ ಈ ಪರಮೇಶ್ವರ ನಾಯ್ಕ, ಮೊದಲು ಗ್ರಾಮಪಂಚಾಯತಿ ಮೆಂಬರಾಗುವ ಮೂಲಕ ರಾಜಕೀಯಕ್ಕೆ ಎಂಟ್ರಿಯಾಗಿ ಕೆಲವೇ ಸಮಯದಲ್ಲಿ ಮೋಸ, ವಂಚನೆಗಳ ಎಲ್ಲಾ ಕಲೆಗಳನ್ನೂ ಮೈಗೂಡಿಸಿಕೊಂಡ. 1995ರ ತಾಲ್ಲೂಕ್ ಪಂಚಾಯತಿ ಚುನಾವಣೆಯ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷವು ರಾಮಾನಾಯ್ಕನಿಗೆ ನೀಡಿದ್ದ ಬಿ-ಫಾರ್ಮನ್ನೇ ಕಸಿದುಕೊಂಡು ಹರಿದು ಹಾಕಿದ್ದ ಭೂಪನೀತ. ಅವತ್ತು ಬಾಯಿಸತ್ತವನಂತಿದ್ದ ರಾಮಾನಾಯ್ಕ ಗಲಾಟೆ ಮಾಡದೇ ಸುಮ್ಮನಾಗಿದ್ದರಿಂದಾಗಿ ಆ ಕ್ಷೇತ್ರದ ಚುನಾವಣಾ ಕಣದಲ್ಲಿ ಕಾಂಗ್ರೆಸ್ ಅಭ್ಯರ್ಥಿಯೇ ಇರಲಿಲ್ಲ! ಇಂತಹ ಸಂದರ್ಭದಲ್ಲಿ ಪಿ.ಟಿ.ಪರಮೇಶ್ವರನಾಯ್ಕ ತಾಲ್ಲೂಕ್ ಪಂಚಾಯಿತಿ ಚುನಾವಣೆಗೆ ಪಕ್ಷೇತರನಾಗಿ ಸ್ಪರ್ಧಿಸಿ ಗೆದ್ದುಬಂದುಬಿಟ್ಟ. ಆಗ ಕಾಂಗ್ರೆಸ್ ಪಕ್ಷದ ಮೋತಿನಾಯ್ಕ ತಾಲ್ಲೂಕು ಪಂಚಾಯಿತಿ ಅಧ್ಯಕ್ಷನಾಗುವ ಎಲ್ಲಾ ಸಾಧ್ಯತೆಗಳನ್ನು ಈತ ತಲೆಕೆಳಗು ಮಾಡಿ 'ಅಧ್ಯಕ್ಷಗಿರಿ ಕೊಡದಿದ್ದರೆ ಜೆ.ಡಿ.ಎಸ್.ಗೆ ಹೋಗುತ್ತೇನೆ' ಎಂದು ಅಂದಿನ ಶಾಸಕ ನಾರಾಯಣದಾಸರನ್ನು ಹೆದರಿಸಿ ತಾ.ಪಂ. ಅಧ್ಯಕ್ಷ ಪದವಿಯನ್ನೂ ಪಿ.ಟಿ.ಪಿ. ಗಿಟ್ಟಿಸಿಕೊಂಡ!

ಈ ಹೊತ್ತಿಗಾಗಲೇ ಗುರುತಿಸಬಹುದಾದಷ್ಟು ಗೂಂಡಾಗಿರಿ ಬೆಳೆಸಿಕೊಂಡಿದ್ದ ಪಿ.ಟಿ.ಪಿ.ಗೆ ಕಾಂಗ್ರೆಸ್ ಪಕ್ಷವು 1999ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ ಪಕ್ಷದಿಂದ ಸ್ಪರ್ಧಿಸಲು ಟಿಕೆಟ್ ಕೂಡಾ ಸಿಕ್ಕಿಬಿಟ್ಟಿತು. ಪಿ.ಟಿ.ಪರಮೇಶ್ವರನಾಯ್ಕನ ಅದೃಷ್ಟವೆಂದರೆ ಅದೇ ಸಮಯದಲ್ಲಿ ಕಾಂಗ್ರೆಸ್ ಪಕ್ಷದ ನಾಯಕಿ ಸೋನಿಯಾ ಗಾಂಧಿ ಲೋಕಸಭಾ ಚುನಾವಣೆಗೆ ಬಳ್ಳಾರಿಯಿಂದಲೇ ಸ್ಪರ್ಧಿಸಿದ್ದು. ಪರಮೇಶ್ವರ ನಾಯ್ಕನ ಪರವಾದ ಚುನಾವಣಾ ಪ್ರಚಾರದಲ್ಲಿ ಸೋನಿಯಾ ಗಾಂಧಿಯವರು ಭಾಗವಹಿಸಿದ್ದಂತೂ ಆತನಿಗೆ ವರದಾನವಾಯಿತು. ಆಗ ಇಡೀ ಬಳ್ಳಾರಿ ಜಿಲ್ಲೆಯಲ್ಲಿದ್ದ ಕಾಂಗ್ರೆಸ್ ಪಕ್ಷದ ಪ್ರಭಾವದಿಂದಾಗಿ ಮತ್ತು ಸೋನಿಯಾ ಗಾಂಧಿ ಅಲೆಯಿಂದಾಗಿ ಪರಮೇಶ್ವರನಾಯ್ಕ ಶಾಸಕನಾಗಿಯೂ ಗೆದ್ದು ಬಂದ. ಅಲ್ಲಿಂದ ಅವನ ಲೂಟಿಯು ನೆಗೆತದೋಪಾದಿಯಲ್ಲಿ ನುಗ್ಗಲಾರಂಭಿಸಿತು.



ಹಣ ಲೂಟಿ

ಪರಮೇಶ್ವರನಾಯ್ಕ ಶಾಸಕನಾಗಿದ್ದೇ ತಡ, ಕ್ಷೇತ್ರದ ಅಭಿವೃದ್ಧಿ ಯೋಜನೆಗಳಿಗಾಗಿ ಹರಿದುಬಂದ ಹಣವನ್ನು ನುಂಗಿ ನೀರು ಕುಡಿಯಲು, ಸರ್ಕಾರಿ ಕಚೇರಿಗಳ ನಿರ್ಣಾಯಕ ಸ್ಥಾನಗಳಲ್ಲಿ ತನ್ನ ಹಲ್ಕಟ್‌ಗಿರಿಗೆ ಬೆನ್ನೆಲುಬಾಗಲು ಲಷ್ಕರಿನಾಯ್ಕ, ಚಂದ್ರಾನಾಯ್ಕ, ಬಿ.ಇ.ಓ. ಆನಂದಪ್ಪನಂತಹ ನಿಸ್ಸೀಮರನ್ನು ನೇಮಿಸಿಕೊಂಡ. ಈ ಸಂದರ್ಭದಲ್ಲಿ ಸೋನಿಯಾ ಗಾಂಧಿ ಪ್ಯಾಕೇಜಿನ ಅಡಿಯಲ್ಲಿ ಬಳ್ಳಾರಿ ಜಿಲ್ಲೆಗೆ ಹರಿದುಬಂದ ರೂ. 3,300 ಕೋಟಿಯಲ್ಲಿ ಅತ್ಯಧಿಕ ಮೊತ್ತದ ಹಣವನ್ನು ಹರಪನಹಳ್ಳಿ ಕ್ಷೇತ್ರದ ಅಭಿವೃದ್ಧಿಗಾಗಿ ಮೀಸಲಿಡಲಾಗಿತ್ತು. ಇಷ್ಟು ದೊಡ್ಡ ಮೊತ್ತದ ಹಣದಿಂದ ಹರಪನಹಳ್ಳಿ ಕ್ಷೇತ್ರದ ಪ್ರಧಾನ ಅವಶ್ಯಕತೆಗಳನ್ನು ಈಡೇರಿಸಬಹುದಿತ್ತಾದರೂ, ಅಭಿವೃದ್ಧಿ ಯೋಜನೆಗೆ ಸಂಬಂಧಿಸಿದ ಕೆಲಸಗಳೆಲ್ಲವೂ ಪರಮೇಶ್ವರನಾಯ್ಕನಿಗೆ ತಾಳಹಾಕುವ ಪತ್ರಿಕೆಗಳಲ್ಲಿ ಮಾತ್ರ ರಾರಾಜಿಸಿದವೇ ವಿನಃ ವಾಸ್ತವದಲ್ಲಿ ಏನೂ ಆಗಿರಲಿಲ್ಲ, ಅಂದರೆ ಸೋನಿಯಾ ಪ್ಯಾಕೇಜ್ ಪಿ.ಟಿ.ಪಿ ದುಂಡಗಾಗಲು ಮಾತ್ರ ಪ್ರಯೋಜನವಾಯಿತು. ಇಂತಹುದೇ ಇನ್ನೊಂದು ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಯೋಜನೆ (ಎಚ್.ಕೆ.ಡಿ.ಪಿ.) ಅಡಿಯಲ್ಲಿ ಹರಪನಹಳ್ಳಿ ಕ್ಷೇತ್ರದ ಅಭಿವೃದ್ಧಿಗಾಗಿ ಹರಿದು ಬಂದ ಹಣವೂ ಕೂಡಾ ಕ್ಷೇತ್ರದ ಅಭಿವೃದ್ಧಿಗಾಗಿ ಹರಿಯದೇ ಸೀದಾ ಪರಮೇಶ್ವರನಾಯ್ಕನ ಜೇಬಿಗೆ ಬಂದು ಬಿತ್ತು.

ಇದೇ ಸಂದರ್ಭದಲ್ಲಿ ಬರಗಾಲ ಪೀಡಿತ ಪ್ರದೇಶದಲ್ಲಿ ಜಾರಿಗೆ ಬಂದ 'ಕೂಲಿಗಾಗಿ ಕಾಳು' ಯೋಜನೆಯಂತೂ ಪರಮೇಶ್ವರನಾಯ್ಕನಿಗೆ ಅಕ್ಕಿ ಮಾರಿಕೊಳ್ಳುವ ಹೊಸ ದಂಧೆಯನ್ನೇ ಹಾಕಿಕೊಟ್ಟಿತ್ತು, ರೈತಸಂಘ, ಭಾರತೀಯ ಕಮ್ಯೂನಿಸ್ಟ್ ಪಕ್ಷ ಮುಂತಾದ ಪ್ರಗತಿಪರ ಸಂಘಟನೆಗಳ ಸ್ಥಳೀಯ ನಾಯಕರುಗಳಾದ ಮಹೇಶ್ವರ ಸ್ವಾಮಿ, ಹೊಸಳ್ಳಿ ಮಲ್ಲೇಶ್ ಹಾಗೂ ಸಮಾಜವಾದಿ ಪಕ್ಷದ ಮೋತಿನಾಯ್ಕರ ನೇತೃತ್ವದಲ್ಲಿ ಇವನ 'ಹಗಲು ದರೋಡೆ'ಯ ವಿರುದ್ಧ ಬೃಹತ್ ಪ್ರತಿಭಟನೆಗಳೇ ನಡೆದವು; ಈತ ಅಕ್ರಮವಾಗಿ ಸಾಗಿಸುತ್ತಿದ್ದ ಅಕ್ಕಿ ಲೋಡುಗಳನ್ನು ಹಿಡಿದು ಅಕ್ಕಿ ಕಳ್ಳಸಾಗಾಣಿಕೆಯನ್ನು ಕೂಡ ಬಯಲಿಗೆಳೆಯಲಾಯಿತು. ಆದರೆ ದುರಂತ ನೋಡಿ, ಪರಮೇಶ್ವರನಾಯ್ಕನ ಇಷ್ಟೆಲ್ಲಾ ಹಗರಣಗಳು ಬಯಲಿಗೆ ಬಂದರೂ ಎಂಜಲಿನಲ್ಲಿ ಸಿಕ್ಕಿಹಾಕಿಕೊಂಡಿದ್ದ ತನ್ನ ಕೈಗಳನ್ನು ಮಾತ್ರ ಈತ ಎತ್ತಲಿಲ್ಲ; ಯಾವ ಅಧಿಕಾರಿಯೂ ಇವನ ಅಕ್ರಮಗಳ ವಿರುದ್ಧ ದೂರು ದಾಖಲಿಸಿಕೊಳ್ಳಲಿಲ್ಲ!

ಕೊನೆಗೆ, ತನ್ನ ಅಕ್ರಮಗಳ ವಿರುದ್ಧ ದನಿ ಎತ್ತಿದ್ದಕ್ಕಾಗಿ ರೈತಸಂಘದ ಮಹೇಶ್ವರಸ್ವಾಮಿಯ ಮೇಲೆ ತನ್ನ ಗೂಂಡಾಗಳಿಂದ ಹಲ್ಲೆ ಮಾಡಿಸಿದ್ದಷ್ಟೇ ಅಲ್ಲದೆ ಹಲ್ಲೆಗೊಳಗಾದ ಮಹೇಶ್ವರಸ್ವಾಮಿಯ ಮೇಲೇ ದೂರು ದಾಖಲಾಗುವಂತೆ ನೋಡಿಕೊಂಡ ಕೀಚಕನಿವನು. ಮೊದಲ ಬಾರಿಗೆ ಶಾಸಕನಾದ ನಂತರ ಹರಪನಹಳ್ಳಿಯಲ್ಲಿ ಕೋಮುಗಲಭೆ ಸೃಷ್ಟಿಸಿದ್ದ ಪಿ.ಟಿ.ಪಿ., ಗಲಭೆಕೋರರನ್ನು ನಿರಾತಂಕವಾಗಿರಲು ಬಿಟ್ಟು ತನಗಾಗದವರನ್ನು ಮಾತ್ರ ಜೈಲಿಗೆ ಕಳಿಸಿದ್ದ. ಇವನ ಕುತಂತ್ರದ ರುಚಿ ಉಂಡವರಲ್ಲಿ ಕೆಲವರು ಇಂದಿಗೂ ಇವನ ಕೈಗೊಂಬೆಗಳಾಗುವುದರ ಮೂಲಕ ಜನರ ಶತ್ರುಗಳಾಗಿ ಮಾರ್ಪಾಟಾಗಿದ್ದಾರೆ.

ಎರಡನೇ ಬಾರಿ ಆಯ್ಕೆ

ಬಳ್ಳಾರಿ ಜಿಲ್ಲೆಯ ಕಾಂಗ್ರೆಸ್ ನಾಯಕ ಕೆ.ಸಿ. ಕೊಂಡಯ್ಯ ಮತ್ತು ಹರಪನಹಳ್ಳಿ ಕ್ಷೇತ್ರದ ಮಾಜಿ ಶಾಸಕ ಯಂಕಾನಾಯ್ಕರ ನಡುವೆ ಇದ್ದ ವಿರಸವನ್ನೇ ಬಂಡವಾಳ ಮಾಡಿಕೊಂಡು ಕೆ.ಸಿ.ಕೊಂಡಯ್ಯನಿಗೆ ಬೆಣ್ಣೆ ಹಚ್ಚುವುದರ ಮೂಲಕ ತನ್ನ ಪ್ರತಿಸ್ಪರ್ಧಿಗಳಾದ ಯಂಕಾನಾಯ್ಕ ಮತ್ತು ನಾರಾಯಣ ದಾಸರನ್ನು ಮೇಲ ಕ್ಕೇಳದಂತೆ ತುಳಿದುಹಾಕಿ ಎರಡನೇ ಬಾರಿಯೂ ಕಾಂಗ್ರೆಸ್‌ನಿಂದ ಟಿಕೆಟ್ ಗಿಟ್ಟಿಸಿಕೊಂಡ. ನಂತರ ಕೇವಲ 2 ಸಾವಿರ ಮತಗಳ ಅಂತರದಿಂದ ಎರಡನೇ ಬಾರಿಗೆ ಆರಿಸಿಯೂ ಬಂದ. ಮೊದಲ ಬಾರಿಗೆ ಸೋನಿಯಾ ಗಾಂಧಿ ಅಲೆಯಿಂದ ಆರಿಸಿಬಂದನಾದರೂ ಎರಡನೇ ಬಾರಿಗೆ ಈತನ ಗೂಂಡಾ ವರ್ತನೆಗೆ ವಿರುದ್ಧವಾದ ಐಕ್ಯತೆಯನ್ನು ವಿರೋಧಪಕ್ಷ ಹಾಗೂ ಬಂಡಾಯ ಅಭ್ಯರ್ಥಿ ಪ್ರದರ್ಶಿಸದೇ ಹೋದುದರಿಂದಾಗಿಯೇ ಗೆದ್ದು ಬಂದಿದ್ದ, ಕಾಂಗ್ರೆಸ್ ಬಂಡಾಯ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ನಾರಾಯಣದಾಸ್ ಪಿ.ಟಿ.ಪಿ. ವಿರುದ್ಧ ಕೇವಲ 2 ಸಾವಿರ ಮತಗಳ ಅಂತರದಲ್ಲಿ ಸೋತರು. ಎಂ.ಪಿ. ಪ್ರಕಾಶರ ಅಭ್ಯರ್ಥಿಯಾಗಿ ಜೆ.ಡಿ.ಎಸ್.ನಿಂದ ಸ್ಪರ್ಧಿಸಿದ್ದ ಮಾಜಿ ಎಸ್.ಪಿ. ಮಾಡ್ಲಗೇರಿ ತಾಂಡದ ಎಂ.ಪಿ.ನಾಯ್ಕ ಎಂಬಾತ ಬಾಯಿಬಿಟ್ಟರೆ ಕಾನೂನಿನ ಕಲಮುಗಳನ್ನೇ ಉದುರಿಸುತ್ತಿದ್ದರಿಂದ ಜನರು ಈತನನ್ನು ಇಷ್ಟಪಡಲಿಲ್ಲ, ಈ ಎರಡು ಎಡವಟ್ಟುಗಳು ಪಿ.ಟಿ... ಎರಡನೇ ಬಾರಿಗೆ ಶಾಸಕನಾಗಲು ಮೆಟ್ಟಿಲುಗಳಾದ...

ಎರಡನೇ ಬಾರಿ ಗೆದ್ದಾಗ ಉದ್ಯೋಗ ಖಾ... ಯೋಜನೆಯನ್ನು ತನ್ನ ಕವಾಯಿಗಾಗಿ ಚೆನ್ನಾ... ಬಳಸಿಕೊಂಡ. ಇವನು ಮಾಡಿದ ಕೆಲಸವಿಷ್ಟೇ: ಹಿಂದೆ ಮಾಜಿ ಶಾಸಕರುಗಳಾದ ಯಂಕಾನಾಯ್ಕ ಹಾಗ... ನಾರಾಯಣದಾಸ್ ಕಟ್ಟಿಸಿದ್ದ ಗೋಕಟ್ಟೆಗಳ ಮೇಲೆ ಜಂಗಲ್ ಕಟಿಂಗ್ ಮಾಡಿಸಿ, ಗ್ರಾವೆಲ್ ಹಾಕಿಸಿ ಇವುಗಳಿಗೆ ಹೊಸ ಹೆಸರುಗಳನ್ನಿಟ್ಟು ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ನುಣ್ಣಗೆ ಬಳಿದುಕೊಂಡ. ಕೆರೆಗಳಲ್ಲಿ ಹೂಳೆತ್ತುವ ನೆಪದಲ್ಲಿ ತನ್ನ ತೋಟಗಳಿಗೆ ಮಣ್ಣು ಹೇರಿಸಿಕೊಂಡಿದ್ದೇ ಅಲ್ಲದೇ ಇದಕ್ಕಾಗಿ ಪಿ.ಟಿ.ಪಿ. 20-30 ಲಕ್ಷ ಬಿಲ್ ಮಾಡಿಸಿ... ಕೊಂಡು ನುಂಗಿದ. ಉದ್ಯೋಗ ಖಾತ್ರಿ ಯೋಜನೆಯ... ಯಲ್ಲಿ ನಡೆಯುತ್ತಿದ್ದ ಅಕ್ರಮಗಳ ವಿರುದ್ಧವೂ ಪ್ರಗತಿಪ... ಸಂಘಟನೆಗಳ ನಾಯಕರು ಮತ್ತು ಅನ್ಯಾಯಕ್ಕೊ... ಗಾದ ಜನರು ತೀವ್ರವಾಗಿ ಪ್ರತಿಭಟಿಸಿದ್ದರು. ಇವ... ಮೇಲೂ ತನ್ನ ಗೂಂಡಾಗಳಿಂದ ಹಲ್ಲೆ ನಡೆಸಿ ತಾನೊ... ಗೂಂಡಾ ಶಾಸಕನೆಂದು ಮತ್ತೊಮ್ಮೆ ಸಾಬೀತುಪಡಿ... ಕೊಂಡ.

ಹರಪನಹಳ್ಳಿ

ಪ್ರಾರಂಭದಲ್ಲಿ ಹಿರೇಮ್ಯಾಗಳಗೇರಿಯ ಮಹಾ... ಬಲೇಶ್ವರಗೌಡನೆಂಬ ಚೋರಗುರುವಿ... ಚಾಂಡಾಲ ಶಿಷ್ಯನಾಗಿ ರಾಜಕೀಯ... ಬಂದವನು ಈಗ ತಾನೇ ಚೋರಗುರು... ವಾಗಿ ತನ್ನ ಅಕ್ರಮಗಳನ್ನು ಮುಚ್ಚಿಹಾಕಲು ಮ... ಗೂಂಡಾಗಿರಿ ನಡೆಸಲು ಪೋಮ್ಯಾನಾಯ್ಕ, ಲಷ್ಕರಿನಾಯ್ಕ... ಚಂದ್ರಾನಾಯ್ಕ ಮುಂತಾದ ಚಾಂಡಾಲ ಶಿಷ್ಯರನ್ನು ದ... ಮಾಡುತ್ತಿದ್ದಾನೆ.

ಇವನ ಅಕ್ರಮಗಳ ಬಗ್ಗೆ ಸರಿಯಾದ ತನಿಖೆಯಾದ... ಪರಮೇಶ್ವರನಾಯ್ಕ ರಾಜಕೀಯವಾಗಿ ಮ... ಗುಂಪಾಗುವುದು ಒತ್ತಟ್ಟಿಗಿರಲಿ, ಪರ್ಮನೆಂಟಾಗಿ ಜೈಲ... ಸೇರುವುದಂತೂ ಖಂಡಿತ. ಆದರೆ ಕಳ್ಳರ ಸಂತೆಯ... ಇಂತಹ ಬೆಳವಣಿಗೆಯೊಂದನ್ನು ನಿರೀಕ್ಷಿಸುವುದು ತು... ಕಷ್ಟ. ಬರಲಿರುವ ಚುನಾವಣೆಯಲ್ಲಿ ಕಾಂಗ್ರೆಸ್ ಪ... ವೇನಾದರೂ ಪಿ.ಟಿ.ಪರಮೇಶ್ವರನಾಯ್ಕನಿಗೆ ಟಿಕೆ... ಕೊಟ್ಟರೆ ಇಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾ... ವುದಂತೂ ಸತ್ಯ!

-ಚಂದ್ರಶೇಖರ ತೋರಣಘಟ್ಟ

ಗಬ್ಬೆದ್ದ ಕ್ಷೇತ್ರ ನೋಡಲು ಎರಡು ಕಣ್ಣು ಸಾಲದು!


ಕುಷ್ಟಗಿ ಎಂಬ ನತದೃಷ್ಟ ಕ್ಷೇತ್ರಕ್ಕೆ ಮೊನ್ನೆವರೆಗೆ ಆಳಿದ ದೊಡ್ಡನ ಗೌಡ ಎಂಬ ಪುಣ್ಯಾತ್ಮನೇ ಪೀಡೆಯಾಗಿ ಕುಂತಿದ್ದಾನೆ. ತನಗೆ ಓಟು ಕೊಟ್ಟು ಗೆಲ್ಲಿಸಿದ ಮತದಾರರು ಇಂದಿಗೂ ಕುಡಿಯುವ ಹನಿ ನೀರಿಗೂ ಪರದಾಡುವಂತೆ ಮಾಡಿರುವುದೇ ಈತನ ಸಾಧನೆ. ಅದು ಬಿಟ್ಟರೆ ಕೆಲ ಹಿಂಬಾಲಕರಿಂದ ಕುಷ್ಟಗಿಯಲ್ಲಾದ ಗಲಭೆ ಹಾಗೂ ತನ್ನ ಸ್ವಗ್ರಾಮ ಕೊರಡಿಕೇರಿಯ ಅಮಾಯಕ ತಿಪ್ಪಮ್ಮ ಎಂಬ ಯುವತಿಯ ರೇಪಿಸ್ಟ್‌ರಿಗೆ ಅಭಯ ಹಸ್ತ ನೀಡಿದ್ದು ದೊಡ್ಡನಗೌಡನ ಹೆಗ್ಗಳಿಕೆ.

ಕುಷ್ಟಗಿ ಕ್ಷೇತ್ರವೇ ವಿಚಿತ್ರ. 1994ರಿಂದ ಸತತ ಹೊಸಬರನ್ನೇ ಗೆಲ್ಲಿಸುತ್ತ ಬಂದಿದೆ. ಆಗಿನ ಜನತಾದಳ ಸರ್ಕಾರವಿದ್ದಾಗ ಶಾಸಕನಾಗಿದ್ದ ಕೆ. ಶರಣಪ್ಪನನ್ನು ಆತ್ಮೀಯ ಹಸನ್‌ಸಾಬ ದೋಟಿಹಾಳ 1999 ರಲ್ಲಿ ಸೋಲಿಸಿಬಿಟ್ಟ. ಅದೇ ಹಸನ್ ಸಾಬನನ್ನು ಆತನ ಶಿಷ್ಯನಾದ ಈ ದೊಡ್ಡನ ಗೌಡ 2004 ರಲ್ಲಿ ಚೆಡ್ಡಿ ತೊಟ್ಟು ಸೋಲಿಸಿಬಿಟ್ಟ. ಇವತ್ತಿಗೂ ಯಾವ ವಿಷಯದಲ್ಲಿಯೂ ಸ್ಪಷ್ಟತೆ ಹೊಂದಿರದ, ತತ್ವ-ಸಿದ್ಧಾಂತವನ್ನೂ ಅರಿಯದ ದೊಡ್ಡನಗೌಡ ಬರೀ 40 ತಿಂಗಳಲ್ಲಿ ಕ್ಷೇತ್ರವನ್ನು ಯಾವ ಪರಿ ಗಬ್ಬೆಬ್ಬಿಸಿದ್ದಾನೆಂದರೆ ನೋಡಲು ಎರಡು ಕಣ್ಣು ಸಾಲದು.

ದೊಡ್ಡನ ಗೌಡ ಶಾಸಕನಾದ ಮೇಲೆ ಕುಷ್ಟಗಿ-ಮುದುಗಲ್ ಪಟ್ಟಣಗಳಿಗೆ ಕೃಷ್ಣಾ ನದಿ ನೀರು ತರುವುದು, ಮಳೆಯಾಧಾರಿತ ಭೂಮಿಗೆ ಕೆರೆ-ಚೆ... ಡ್ಯಾಂಗಳನ್ನು ನಿರ್ಮಿಸುವುದು, ನೀರಾವರಿಗಾಗಿ ಕೃ... 'ಬಿ' ಸ್ಕೀಂ ಅಡಿಯಲ್ಲಿ ನೀರು ತರುವುದು ಸೇರಿದ... ಸಮಸ್ಯೆಗಳ ಗುಡ್ಡೆಯೇ ಆತನ ಎದುರಿಗಿತ್ತು. ಆದ... "ಆ ಸಮಸ್ಯೆಗಳೆಲ್ಲ ಇರಲಿ ಬಿಡು, ಮುಂದೆ ಅವ... ಬಗೆಹರಿಸಿದಾಯಿತು" ಅಂತ ದೊಡ್ಡನಗೌಡ ಇನ್ನಿತ... ಚಟುವಟಿಕೆಗಳತ್ತ ಗಮನಹರಿಸಿದ. ಹೀಗಾಗಿ ಇವ... ಕುಷ್ಟಗಿ ಬಿಜೆಪಿಯ ಅರ್ಧದಷ್ಟು ಜನರ ಬಾಯ... ಈತನ ಖಯಾಲಿಗಳ ಬಗ್ಗೆಯೇ ಸುದ್ದಿ.

ಬರೀ ನಾಟಕ, ಬಯಲಾಟಗಳತ್ತ ಇನ್ನಿಲ್ಲದ ಕಾಳ... ವಹಿಸುವ ದೊಡ್ಡನಗೌಡ ಜನಕ್ಕೆ ಮೂಲಭೂ... ಸೌಲಭ್ಯವಾದ ಕುಡಿಯುವ ನೀರು ಕೊಡಬೇಕೆಂ... ಪರಿಜ್ಞಾನವೂ ಇಲ್ಲದ ಅವಿವೇಕಿ. ಎರಡು ವಾರಕ್ಕೊ... ಕುಷ್ಟಗಿಗೆ ಬರುವ ಅಲ್ಪಸ್ವಲ್ಪ ನೀರೇ ಇಲ್ಲಿನ ಜನ... ಗತಿ. ನೀರು ಬೇಕೆಂದರೆ ಕ್ಷೇತ್ರದ ಜನ ಕಿಲೋ... ಮೀಟರ್‌ಗಟ್ಟಲೆ ನಡೆದುಹೋಗಬೇಕು. ರಾಜ್ಯದಲ್ಲಿ...

ಕಲ್ಲಿನ ಕ್ವಾರಿಯಿಂದ ದೊಡ್ಡನಗೌಡ ಕೆತ್ತಿದ್ದೆಷ್ಟು?



ಹುನಗುಂದ

'ಕಲ್ಲಿನಿಂದ ಕಾಸು ಮಾಡಬೇಕೆಂದರೆ ಹುನಗುಂದ ಕ್ಷೇತ್ರವನ್ನು ಆಯ್ಕೆ ಮಾಡಿಕೊ' ಎಂಬುದೊಂದು ಮಾತಿದೆ. ಬೇರೆ ಬೇರೆ ಕ್ಷೇತ್ರಗಳಲ್ಲಿ ಜನಪ್ರತಿನಿಧಿಗಳು ಕಬ್ಬಲು ಬೇರೆ ಬೇರೆ ಆಮದಾನಿಗಳಿರುವಂತೆ ಹುನಗುಂದದಲ್ಲಿ ಈ ಕ್ವಾರಿಗಳಿವೆ. ಅಂದರೆ, ಈ ಕ್ವಾರಿಗಳ ಮೇಲೆ ಹಿಡಿತವಿರುವವನು ಕ್ಷೇತ್ರದ ಎಮ್ಮೆಲ್ಲೆಯೂ ಆಗ್ತಾನೆ. ನಂತರ ಕಣ್ಣುಮುಚ್ಚಿ ಬಿಡುವಷ್ಟರೊಳಗಾಗಿ ಕೋಟಿಕೋಟಿ ನುಂಗಿ ಕುಬೇರನೂ ಆಗ್ತಾನೆ. ಎಷ್ಟರಮಟ್ಟಿಗೆ ಎಂದರೆ, ಇಲ್ಲಿಗೆ ಬರುವ ಅಧಿಕಾರಿಗಳೂ ಕೂಡ ದಿನಬೆಳಗಾದರೆ ಬ್ರೀಫ್‌ಕೇಸ್ ತುಂಬಾ ಮತ್ತು ತುಂಬಿಕೊಂಡು ಜನಪ್ರತಿನಿಧಿಗಳ ಬಾಗಿಲಲ್ಲಿ ನಿಂತಿರ್ತಾರೆ. ಇಲ್ಲಿನ ಕೆಂಪು ಶಿಲೆಗೆ ದೇಶವಿದೇಶಗಳಲ್ಲಿ ಭಾರಿ ಬೇಡಿಕೆ ಇದೆ. ಇದನ್ನು ಲೂಟಿ ಹೊಡೆದು ಕಾಸುಮಾಡುವ ಕ್ವಾರಿ ಉದ್ಯಮಿಗಳು ತಮ್ಮ ಹಣದಲ್ಲೊಂದಿಷ್ಟು ಭಾಗವನ್ನು ಜನಪ್ರತಿನಿಧಿಗಳಿಗೆ ತಿನ್ನಿಸುವ ಕಲೆಯನ್ನು ಕರಗತ ಮಾಡಿಕೊಂಡಿದ್ದಾರೆ.

ಈ ಹಿಂದೆ ಹುನಗುಂದ ಕ್ಷೇತ್ರವನ್ನು ಪ್ರತಿನಿಧಿಸಿದ್ದ ಶಿವಶಂಕ್ರಪ್ಪ ಕಾಶಪ್ಪನವರ್ ಸತತ ಮೂರು ಬಾರಿ ಆಯ್ಕೆಯಾಗಿದ್ದರ ಹಿಂದಿನ ರಹಸ್ಯ ಕೂಡ ಇದೆ. ನಂತರ ಎಸ್.ಆರ್. ಕಾಶಪ್ಪನವರ್ ದಿವಂಗತರಾದ ಮೇಲೆ ನಡೆದ ಉಪ ಚುನಾವಣೆಯಲ್ಲಿ ಅವರ ಧರ್ಮಪತ್ನಿ ಗೌರಮ್ಮ ಕಾಶಪ್ಪನವರ್ ಅನುಕಂಪದ ಮತಗಳನ್ನು ಗಿಟ್ಟಿಸಿಕೊಂಡು ಅಲ್ಪಾವಧಿ ಶಾಸಕರಾದರು. ಆದರೆ, ಆ ಅವಧಿಯಲ್ಲಿ ಶಾಸಕತ್ವದ ದರ್ಬಾರ್ ನಡೆಸಿದ್ದು ಮಾತ್ರ ಅವರ ಸುಪುತ್ರ ವಿಜಯಾನಂದ. ಈತ ಗ್ರಾನೈಟ್ ಉದ್ಯಮಿಗಳನ್ನು ಗೋಳುಹೊಯ್ದುಕೊಂಡ ರೀತಿ ಮಾತ್ರ ಅವರನ್ನೆಲ್ಲ ದಂಗುಬಡಿಸಿತ್ತು.

ಯಾವಾಗ ವಿಜಯಾನಂದನ ಗೆಬರುವಿಕೆ ಮಿತಿ ಮೀರಿ ಹೋಯಿತೋ ಕ್ವಾರಿ ಉದ್ಯಮಿಗಳೆಲ್ಲ ಮುಂದಿನ ಚುನಾವಣೆಯಲ್ಲಿ ಕಾಶಪ್ಪನವರ ಫ್ಯಾಮಿಲಿಯನ್ನು ಮನೆಗೆ ಕಳಿಸಿ ಆ ಜಾಗಕ್ಕೆ ತಮ್ಮ ಉದ್ಯಮಕ್ಕೆ ಬೆಂಬಲವಾಗಿ ನಿಲ್ಲುವ ವ್ಯಕ್ತಿಯನ್ನು ಕೂಡಿಸುವ ಲೆಕ್ಕಾಚಾರ ಮಾಡಿಬಿಟ್ಟರು. ಅದಕ್ಕೆಂದೇ, ಕೊಪ್ಪಳ ಜಿಲ್ಲೆಯ ಕುಷ್ಟಗಿ ಮತಕ್ಷೇತ್ರದ ದೊಡ್ಡನಗೌಡ ಪಾಟೀಲ್ ಎಂಬ ಹಣದ ಭಾರೀ ಕುಳವನ್ನು ಹುನಗುಂದಕ್ಕೆ ಕರೆಸಿ, ತರಾತುರಿಯಲ್ಲಿ ಅವನಿಗೊಂದು ಖಾಕಿ ಚೆಡ್ಡಿ ತೊಡಿಸಿ, ಕೈಯ್ಯಲ್ಲೊಂದು ಲಾರಿ ಕೊಟ್ಟು ಬಿಜೆಪಿಯ ಅನಂತಕುಮಾರ್ ಎದುರು ನಿಲ್ಲಿಸಿ, ನಂತರ ಅವರೊಂದಿಗೆ ಒಂದು ಬೈಠಕ್ ಮಾಡಿಸಿ ಬಿಜೆಪಿಯ ಟಿಕೆಟ್ ಕೊಡಿಸಿಯೇಬಿಟ್ಟರು.


ಇಲ್ಲಿ ಗಣಿ ಉದ್ಯಮಿಗಳು ಯಾರ ಬೆನ್ನಿಗಿರುತ್ತಾರೋ ಅವರೇ ಚುನಾವಣೆಯಲ್ಲಿ ಕ್ಷೇತ್ರದ ಪ್ರತಿನಿಧಿಯಾಗಿ ಗೆಲ್ಲೋದು. ಆ ಬಾರಿ ಆಗಿದ್ದೂ ಅದೇ. ಕಾಶಪ್ಪನವರ ಕುಟುಂಬ ಮೂಲೆಗುಂಪಾಗಿ ದೊಡ್ಡನಗೌಡ ಪಾಟೀಲ್ ಗೆದ್ದುಬಂದ.

ವಾಸ್ತವದಲ್ಲಿ ದೊಡ್ಡನಗೌಡ ಪಾಟೀಲ್ ಒಬ್ಬ ರಾಜಕಾರಣಿಯಲ್ಲ, ಕೊಪ್ಪಳ ಜಿಲ್ಲೆ ಕುಷ್ಟಗಿಯಲ್ಲಿ ಕಲ್ಲಿನ ಕ್ವಾರಿಗಳ ದಂಧೆ ಮಾಡಿಕೊಂಡಿದ್ದ ಒಬ್ಬ ಬ್ಯುಸಿನೆಸ್ ಮ್ಯಾನ್. ಹಾಗಾಗಿ, ಈತ ಚುನಾವಣೆಯಲ್ಲಿ ಗೆದ್ದು ರಾಜಕೀಯ ಮಾಡಿದ್ದಕ್ಕಿಂತ ಗ್ರಾನೈಟ್ ಬ್ಯುಸಿನೆಸ್ ಮಾಡಿದ್ದೇ ಜಾಸ್ತಿ. ಅದರಲ್ಲೂ ಇಳಕಲ್ ಕಲ್ಲಿನ ಮೇಲೆ ಯಾವಾಗ ಇವನ ಕಣ್ಣು ಬಿತ್ತೋ, ರಾಜಕೀಯ ಮರೆತೇ ಬಿಟ್ಟು ಕಂಡಕಂಡ ಕಡೆಯಲ್ಲೆಲ್ಲಾ ಕೈಯಾಡಿಸಿ ಗುಡಿಸಿ ಗುಡ್ಡೆಹಾಕಿಕೊಂಡುಬಿಟ್ಟ. ಇದೆಲ್ಲದರ ಪರಿಣಾಮವಾಗಿ ಹಲವೇ ದಿನಗಳಲ್ಲಿ ಇವನ ಹಿಂದೆ ದೊಡ್ಡದೊಂದು ಲೂಟಿಕೋರರ ಗ್ಯಾಂಗೇ ಸಿದ್ಧವಾಗಿ ನಿಂತಿತ್ತು.

ದೊಡ್ಡನಗೌಡ ಪಾಟೀಲ್ ಹೀಗೆ ಏಕಾಏಕಿ ಗೆಬರುತ್ತಿದ್ದ ಪರಿಯನ್ನು ನೋಡಿ ಪ್ರಮೋದ್ ಮುತಾಲಿಕನಿಗೂ ಸುಮ್ಮನಿರಲಾಗಲಿಲ್ಲ. ಪಾಟೀಲ್ ಗೆಬರಿದ್ದರಲ್ಲಿ ತನಗೂ ಪರ್ಸೆಂಟೇಜ್ ಕೊಡಬೇಕೆಂದು ಪಟ್ಟುಹಿಡಿದು ಬಿಟ್ಟ. ಆದರೆ, ದೊಡ್ಡನಗೌಡ ಒಬ್ಬ ಕಂಜೂಸ್ ಬಿಸಿನೆಸ್‌ಮ್ಯಾನ್. ಮುತಾಲಿಕನಿಗೇಕೆ ಆತ ಸುಮ್ಮಸುಮ್ಮನೇ ದುಡ್ಡು ಕೊಡ್ತಾನೆ? ಯಾವಾಗ ದೊಡ್ಡನಗೌಡ ಕಾಸು ಬಿಚ್ಚುವುದಿಲ್ಲ ವೆಂದು ಖಾತ್ರಿಯಾಯ್ತೋ, ಮುತಾಲಿಕ್ ತನ್ನ ಶ್ರೀರಾಮಸೇನೆಯ ವಾನರ ಪಡೆಯನ್ನು ಕಟ್ಟಿಕೊಂಡು ದೊಡ್ಡನಗೌಡನ ಮೇಲೆ ಮುಗಿಬಿದ್ದ, ಅವರಿಬ್ಬರ ನಡುವಿನ ಕಾಳಗ ಗಂಭೀರ ಹಂತಕ್ಕೆ ತಲುಪಿಬಿಟ್ಟಿತ್ತು.

ಈ ಹಿಂದಿದ್ದ ಶಾಸಕಿ ಗೌರಮ್ಮ ಕಾಶಪ್ಪನವರ ಪುತ್ರರತ್ನ ವಿಜಯಾನಂದ ಕಾಂಟ್ರಾಕ್ಟರ್‌ಗಳನ್ನು ಸುಲಿಯುತ್ತಿದ್ದ ರೀತಿಗೂ ಈಗ ದೊಡ್ಡನಗೌಡ ಸುಲಿಯುತ್ತಿರುವ ರೀತಿಗೂ ಒಂದು ದೊಡ್ಡ ವ್ಯತ್ಯಾಸವಂತೂ ಇದೆ. ವಿಜಯಾನಂದ ತಾನೇ ದೊಡ್ಡ ರೌಡಿಯಂತೆ ಪೋಜು ಕೊಡುತ್ತಾ ಬಹಿರಂಗವಾಗಿ ಕಾಂಟ್ರಾಕ್ಟರ್‌ಗಳನ್ನು ಬೆದರಿಸಿ ಸುಲಿಯುತ್ತಿದ್ದ. ಆದರೆ ದೊಡ್ಡನಗೌಡ ಈ ಸುಲಿಯುವ ಕಾರ್ಯವನ್ನು ಸುಗಮವಾಗಿ ಮಾಡುವುದಕ್ಕೆ ತನ್ನ ಅಧಿಕಾರಿಗಳನ್ನೇ ಬಳಸಿಕೊಳ್ಳುತ್ತಾನೆ. ಈತನ ಚೇಲಾಗಳಾದ ತಹಶೀಲ್ದಾರ ಸಿದ್ದಪ್ಪ, ಪೊಲೀಸ್ ಇನ್ಸ್‌ಪೆಕ್ಟರ್ ಡಿ. ಕುಮಾರ್, ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಶ್ರೀಶೈಲ ಬಾಡಿ, ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿ ಮಹಾಂತೇಶ್ ಕೊನ್ನೂರ್, ಭೂಗರ್ಭ ಇಲಾಖೆಯ ಸಣ್ಣಕ್ಕಿ, ಪಿಎಸ್‌ಐ ರಾಘವೇಂದ್ರ, ಅಮೀನಗಡದ ಧೂಳಬೀಡ - ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ ದೊಡ್ಡನಗೌಡನ ಸುಲಿಗೆಕೋರರ ಪಡೆ. ಇವರೆಲ್ಲರೂ ತಾವು ಕ್ವಾರಿಗಳಿಂದ ಕೀಳಿಸಿದ್ದ ದುಡ್ಡಿನಲ್ಲಿ ನಿಯತ್ತಾಗಿ ತಂದು ಕೊಡುವ ಪರ್ಸೆಂಟೇಜೇ ದೊಡ್ಡನಗೌಡನ ಖಜಾನೆಯನ್ನು ತುಂಬಿಸಿಬಿಟ್ಟಿದೆ.

ನಾಲ್ಕು ವರ್ಷಗಳಿಂದಲೂ ಇಲ್ಲೇ ರಿಕಾಣಿ ಹೂಡಿರುವ ತಹಶೀಲ್ದಾರ್ ಸಿದ್ದಪ್ಪ ಪ್ರತೀ ಗ್ರಾನೈಟ್ ಉದ್ಯಮದಾರರಿಂದ, ಗ್ರಾನೈಟ್ ಪಾಲೀಶ್ ಫ್ಯಾಕ್ಟರಿಗಳಿಂದ ಲೂಟಿ ಮಾಡಿದ ಹಣದಲ್ಲೇ ಬೆಂಗಳೂರಿನಲ್ಲಿ ಕೋಟ್ಯಂತರ ರೂ. ಮೌಲ್ಯದ ಬಂಗಲೆಯೊಂದನ್ನು ಎಬ್ಬಿಸಿದ್ದಾನೆ. ಸರ್ಕಲ್ ಇನ್ಸ್‌ಪೆಕ್ಟರ್ ಡಿ. ಕುಮಾರ್ ಮತ್ತು ಅವನಿಗೆ ಸಾಥ್ ನೀಡುತ್ತಿರುವ ಎಸ್ಸೈ ರಾಘವೇಂದ್ರ ಅದೆಷ್ಟು ದುಡ್ಡು ಮಾಡಿದ್ದಾರೋ ಲೆಕ್ಕವಿಲ್ಲ. ಇಂಥ ಒಬ್ಬೊಬ್ಬ ಅಧಿಕಾರಿಗಳೇ ಈ ಮಟ್ಟಕ್ಕೆ ಕೊಬ್ಬಿದ್ದಾರೆಂದರೆ ಇವರೆಲ್ಲರಿಂದಲೂ ಪರ್ಸೆಂಟೇಜ್ ಪಡೆಯುವ ದೊಡ್ಡನಗೌಡ ಅದಿನ್ನೆಷ್ಟು ಹಣ ಮಾಡಿರಬೇಡ?


ವಿಜಯಾನಂದ

ಪುರಸಭೆಯಲ್ಲೂ ಕೂಡ ತನ್ನವರೇ ತುಂಬಿದ್ದರೆ ಅಲ್ಲಿಂದಲೂ ಅಪಾರ ಆಮದಾನಿ ಪಡೆಯಬಹುದೆಂಬ ಲೆಕ್ಕಾಚಾರದಿಂದ ದೊಡ್ಡನಗೌಡ ಪಾಟೀಲ್ ಮಟ್ಕಾ ಇಸ್ಪೀಟ್ ಕಿಂಗ್ ಅಶೋಕ್ ಬೋಗಾಪುರ, ಶರಣಗೌಡ ಪಾಟೀಲ್, ವೆಂಕಟೇಶ್ ಪೂತ ಮುಂತಾದ ಕುಳಗಳನ್ನು ಪುರಸಭೆಗೆ ಕಳಿಸಲು ಹಗಲು ರಾತ್ರಿ ಕಷ್ಟಪಟ್ಟಿದ್ದಾನೆ.


ದೊಡ್ಡನಗೌಡ ಪಾಟೀಲನಿಗೆ ಕೇವಲ ಕ್ವಾರಿಗಳು ಮಾತ್ರವಲ್ಲ, ಇತರ ಮೂಲಗಳೂ ಇವೆ. ಕ್ಷೇತ್ರಕ್ಕೆ ಬರುವ ಕೋಟ್ಯಂತರ ಮೌಲ್ಯದ ಸರ್ಕಾರಿ ಕಾಮಗಾರಿಗಳೆಲ್ಲವೂ ಇವನಿಗೆ ಹೆಚ್ಚು ಪರ್ಸೆಂಟೇಜ್ ಕೊಡುವವರಿಗೆ ಮಾತ್ರವೇ ಹೋಗುತ್ತವೆ. ಸ್ವೀಕರ್ ಸದಾ ಓಲೇಕಾರ ಎಂಬ ಕಾಂಟ್ರಾಕ್ಟರ್ ದೊಡ್ಡನಗೌಡನ ಚುನಾವಣಾ ವೆಚ್ಚವನ್ನು ನೋಡಿಕೊಳ್ಳುತ್ತಾನೆ. ಹಾಗಾಗಿಯೇ, ದೊಡ್ಡನಗೌಡ ಕುಮಾರಸ್ವಾಮಿಗೆ ದುಂಬಾಲು ಬಿದ್ದು ಶೀಘ್ರ ಮತ್ತು ಅತ್ಯುತ್ತಮ ಗುತ್ತಿಗೆದಾರ ಪ್ರಶಸ್ತಿಯನ್ನು ಕೊಡಿಸಿದ್ದಾನೆ. ಅಂದರೆ, ಮುಂದಿನ ಚುನಾವಣೆಯಲ್ಲಿ ದೊಡ್ಡನಗೌಡನಿಗಾಗಿ ಓಲೇಕಾರನ ಹಣದಲ್ಲಿ ಬಹುಪಾಲು ಸದಾ ಓಲೇಮಠನದೇ ಇರುತ್ತದೆ.

ಬರುವ ಚುನಾವಣೆಯಲ್ಲಿ ಕ್ಷೇತ್ರದ ಜನ ದೊಡ್ಡನಗೌಡನಿಗೆ ಒಲಿಯುವುದು ಸ್ವಲ್ಪ ಕಷ್ಟ ಅನ್ನಿಸುತ್ತದೆ. ಕಾರಣವೇನೆಂದರೆ, ಈತ ಕ್ಷೇತ್ರದ ಶಾಸಕನಾಗಿ ನಾಮ ಹೆಸರಿಗೆ ಮಾತ್ರ ಇದ್ದು ಮಾಡಿದ್ದೆಲ್ಲ ಕ್ವಾರಿ ಬ್ಯುಸಿನೆಸ್ ಎಂಬುದು ಜನಕ್ಕೆ ಗೊತ್ತು. ಕ್ಷೇತ್ರಕ್ಕಾಗಿ, ಜನರ ಅಭಿವೃದ್ಧಿಗಾಗಿ ಎಂದೂ ಈತ ತಲೆಕೆಡಿಸಿಕೊಂಡಿಲ್ಲ. ತನ್ನ ಆಮದಾನಿಯ ಜಾಲವನ್ನು ಭದ್ರಪಡಿಸಿಕೊಳ್ಳುವಲ್ಲೇ ಕಾಲಕಳೆದು ಬಿಟ್ಟಿದ್ದಾನೆ. ಇಂಥವನನ್ನು ಮತ್ತೆ ಗೆಲ್ಲಿಸುವ ತಪ್ಪನ್ನು ಈ ಬಾರಿ ಕ್ಷೇತ್ರದ ಜನ ಮಾಡಲಾರರು. ಎರಡನೆಯದಾಗಿ, ಕ್ಷೇತ್ರದಲ್ಲಿ ನಿರ್ಣಾಯಕರಾಗಿರುವ ಲಿಂಗಾಯತರು ಈ ಬಾರಿ ಇವನಿಗೆ ಕೈ ಕೊಡುವುದು ಗ್ಯಾರಂಟಿ.

ಈ ಪರಿಸ್ಥಿತಿಯನ್ನು ಕಾಂಗ್ರೆಸ್ ಬಳಸಿಕೊಳ್ಳಬೇಕಷ್ಟೆ. ಅಲ್ಪಸಂಖ್ಯಾತರನ್ನು ಓಲೈಸಬೇಕೆಂಬ ಒಂದೇ ಉದ್ದೇಶದಿಂದ ಉಸ್ಮಾನ್ ಗಣಿಗೆ ಟಿಕೆಟ್ ಕೊಡುವ ಯೋಚನೆ ಕಾಂಗ್ರೆಸ್‌ಗಿದೆ. ಆದರೆ ಈ ಕ್ಷೇತ್ರದಲ್ಲಿ ಮುಸಲ್ಮಾನರ ಮತಗಳು ನಿರ್ಣಾಯಕವಲ್ಲ. ಜಿಲ್ಲಾ ಪಂಚಾಯತಿ ಸದಸ್ಯನಾಗಿರುವ, ಒಳ್ಳೆಯ ಜನಸಂಪರ್ಕ ಹೊಂದಿರುವ ಸುಭಾಷ್ ತಾಳಿಕೋಟಿ ಎಂಬುವವನನ್ನು ಕಾಂಗ್ರೆಸ್ ಪರಿಗಣಿಸಬಹುದು. ಈತ ಹುನಗುಂದದಾದ್ಯಂತ ಓಡಾಡಿ ಒಂದಿಷ್ಟು ಹೆಸರುವಾಸಿಯಾದವನು. ಈತನಕ ಹೆಸರು ಕೆಡಿಸಿಕೊಂಡಿಲ್ಲ, ಅದೂ ಅಲ್ಲದೇ ಮುಸ್ಲಿಮರ ನಾಯಕರೆನಿಸಿಕೊಂಡಿರುವ ಸರಕಾವಸ್, ಜಬ್ಬಾರ್ ಕಲಬುರ್ಗಿಯಂತಹ ಯುವಕರು ಈ ಬಾರಿ ಸುಭಾಷ್ ತಾಳಿ ಕೋಟಿಗೆ ಬೆಂಬಲಿಸುವ ನಿರ್ಣಯ ತೆಗೆದುಕೊಂಡಿದ್ದಾರೆ. ಇದನ್ನೂ ಕಾಂಗ್ರೆಸ್ ಗಮನಿಸುವುದು ಸೂಕ್ತ.

ಜೆಡಿಎಸ್ ಇಲ್ಲಿ ಪ್ರಭಾವಿ ಪಕ್ಷವಲ್ಲವಾದ್ದರಿಂದ ಬಿಜೆಪಿಗೆ ಕಾಂಗ್ರೆಸ್ಸೇ ಪೈಪೋಟಿ ನೀಡಬೇಕು. ಸರಿಯಾಗಿ ಎಚ್ಚೆತ್ತುಕೊಂಡು, ಸೂಕ್ತ ವ್ಯಕ್ತಿಯನ್ನು ಆಯ್ಕೆ ಮಾಡಿ ಟಿಕೆಟ್ ನೀಡದಿದ್ದರೆ ಮತ್ತೆ ಹುನಗುಂದವನ್ನು ಕಳೆದು ಕೊಳ್ಳಬೇಕಾದೀತು.

- ಮೇಘರಾಜ್



ಕುಷ್ಟಗಿ

...ಹೆಚ್ಚು ಫ್ಲೋರೈಡ್ ಹೊಂದಿರುವ ಕ್ಷೇತ್ರಗಳಲ್ಲಿ ಇದೂ ಒಂದಾಗಿದ್ದು ಇಲ್ಲಿನ ಗ್ರಾಮಸ್ಥರು ವಿಧಿ ಇಲ್ಲದೆ ಫ್ಲೋರೈಡ್ ನೀರನ್ನು ಕುಡಿದು ಅಕಾಲ ವೃದ್ಧಾಪ್ಯಕ್ಕೆ ಈಡಾಗಿದ್ದಾರೆ. ಇನ್ನು ಕೆಲ ಹಳ್ಳಿಗಳಲ್ಲಿ ಹೊಲಸು ನೀರೇ ಗತಿಯಾಗಿದೆ. ಅಂತಹ ಗಲೀಜು ನೀರು ಕುಡಿದು ವಾಂತಿ-ಭೇದಿ ಇಲ್ಲಿ ಸಾಮಾನ್ಯವಾಗಿರುವಾಗ, ಅಕಸ್ಮಾತ್ ಅವರು ಆಸ್ಪತ್ರೆಗಳಿಗೆ ಹೋದರೆ ಅಲ್ಲಿ ಔಷಧಿಯೂ ಇರುವುದೇ ಇಲ್ಲ.

ಕುಷ್ಟಗಿ ಪಟ್ಟಣದಲ್ಲಿ ಹಾದುಹೋಗಿರುವ ಹೆದ್ದಾರಿಯಲ್ಲಿ ಅಪಘಾತಕ್ಕೀಡಾಗಿ ಗಾಯಗೊಂಡವರನ್ನು ಕುಷ್ಟಗಿ ಆಸ್ಪತ್ರೆಗೆ ತಂದರೆ, ಅವರೆಲ್ಲ ನೇರ ಪರಲೋಕಕ್ಕೆ ಹೋಗುವಂತಹ ಅವ್ಯವಸ್ಥೆಯನ್ನು ಈ ದೊಡ್ಡನಗೌಡ ಮಾಡಿದ್ದಾನೆ.


ಇನ್ನು ಕುಷ್ಟಗಿ ಕ್ಷೇತ್ರದಲ್ಲಿ ... ಯೋಜನೆಯ ... ನಿರ್ಮಾಣದಲ್ಲಿ ನಡೆದ ಅವ್ಯವಹಾರ ... ಲೆಕ್ಕವೂ ಸಿಗುತ್ತಿಲ್ಲ. ಕ್ಷೇತ್ರದ ತುಂಬ ನಡೆದ ರಸ್ತೆ ಕಾಮಗಾರಿ ಯಲ್ಲಿನ ಕಳಪೆತನ ದೊಡ್ಡನಗೌಡ ಮತ್ತು ಆತನ ಕೆಲ ಹಿಂಬಾಲಕರ ಅಸಲಿಯತ್ತನ್ನು ತೋರಿಸುತ್ತಿದೆ. ಕಾಮಗಾರಿ ನಡೆದ ಒಂದೇ ... ಸಣ್ಣ ಮಳೆಗೂ ಕೊಚ್ಚಿಕೊಂಡು ಹೋಗುವಂತಹ ... ನಿರ್ಮಾಣಕ್ಕೆ ಕಾರಣನಾದ ಪುಣ್ಯ ಪುರುಷ ಈ ದೊಡ್ಡನಗೌಡ. ಕ್ಷೇತ್ರದಲ್ಲಿ ಅಕ್ರಮ ಗಣಿಗಾರಿಕೆಯು ... ಅವನ್ನು ಪೋಷಿಸಿದ್ದು ಕೂಡ ದೊಡ್ಡ ಗೌಡನೇ.

ಹಾಗೆ ನೋಡಿದರೆ ಅದೇನೋ ತಪ್ಪಿ ಈತ ಜೆಡಿಎಸ್ ಪಂಚಾಯ್ತಿ ಸದಸ್ಯನಾಗಿದ್ದು ಕಾಂಗ್ರೆಸ್‌ನಿಂದ. ಆದರೆ ಮತ್ಯಾವತ್ತೂ ಜನಪ್ರತಿನಿಧಿಯಾಗಲು ಲಾಯಕ್ ಇಲ್ಲದ ದೊಡ್ಡನಗೌಡ 2004 ರಲ್ಲಿ ಬಿಜೆಪಿ ಸೇರಿ ಅಭ್ಯರ್ಥಿಯಾಗಿಬಿಟ್ಟ. ತನ್ನ ಸ್ವಜಾತಿಯ (ಕುರುಬ) ಮತ್ತು ದಲಿತರ ಓಟುಗಳಿಂದ ಗೆದ್ದುಬಿಟ್ಟ. ಜೊತೆಗೆ ಹಿತ್ತಾಳೆ ಕಿವಿಯ ಜೆಡಿಎಸ್‌ನ ಕೆ. ಶರಣಪ್ಪನ ವಿರುದ್ಧದ ಅಲೆಯೂ ಕೆಲಸ ಮಾಡಿದ್ದ ರಿಂದ ಬಿಜೆಪಿಯಿಂದ ಗೌಡ ಗೆದ್ದ.

ಗೆದ್ದ ಕೂಡಲೇ ಈತನ ಹಿಂಬಾಲಕರು ಪುಟ್ಟ-ಸಲಿಕೆ ತಗೊಂಡು ಹಣ ಬಳಿಯಲು ಸರ್ಕಾರಿ ಕಚೇರಿಗಳಿಗೆ ಲಗ್ಗೆಯಿಟ್ಟರು. ಬರೆದರೆ ಅದೇ ಒಂದು ಮಹಾಭಾರತದ ಕಥೆಯಾಗುತ್ತದೆ.

ಗೆದ್ದಾಗಿನಿಂದ ಒರಿಜಿನಲ್ ಬಿಜೆಪಿಯವರೇ ಹೆದರಿ ಓಡಬೇಕು, ಆ ಪರಿ ಹಳ್ಳಿಗಳಲ್ಲಿ ಭಯೋತ್ಪಾದನೆ, ಕಾಶ್ಮೀರ ಸಮಸ್ಯೆ, ದತ್ತಪೀಠ ಮುಕ್ತಿ, ಹಂಪಿ ಭಯೋತ್ಪಾದಕರ ಹೆಡ್ಕ್ವಾರ್ಟರ್ಸು ಅಂತೆಲ್ಲ ಈತ ಮಾತನಾಡುವುದನ್ನು ನೋಡಿಯೇ ಇಲ್ಲಿನ ಜನ ರೋಸಿ ಹೋಗಿದ್ದಾರೆ. ಒಂದಿನವೂ ತಮ್ಮ ಸಮಸ್ಯೆಗಳ ಬಗ್ಗೆ ಈತ ಚಕಾರ ಎತ್ತುತ್ತಿಲ್ಲ ಎನ್ನುವುದು ಅವರ ಆಕ್ರೋಶ.

ಶಾಸಕತ್ವದ ಅಮಲು ತಲೆಗೇರಿದ ತಕ್ಷಣ ತನ್ನ ಸ್ವಜಾತಿಬಾಂಧವರಿಗೆ ಇನ್ನಿಲ್ಲದ ಮಣೆ ಹಾಕಿದ ಈತ ಎತ್ತು ಬಂಡಿ ಯೋಜನೆಯಲ್ಲಿ ಸ್ವಜಾತಿಯವರಿಗೆ ಸಿಂಹ ಪಾಲು ಸಿಗುವಂತೆ ನೋಡಿಕೊಂಡ. ತೋಟಗಾರಿಕೆಯ ರೈತರಿಗಾಗಿ ಬಂದ ಇಸ್ರೇಲ್ ತಂತ್ರಜ್ಞಾನ ಮತ್ತು ಹಣವೂ ಕೂಡ ದೊಡ್ಡನಗೌಡ ಹೇಳಿದವರಿಗೆ, ಬಿಜೆಪಿಯ ಪುಢಾರಿಗಳಿಗೆ ಸಿಗುವಂತೆ ನೋಡಿಕೊಂಡಿದ್ದಾನೆ. ಬರಗಾಲ ಕಾಮಗಾರಿಯಲ್ಲಂತೂ ಗೆಬರಿ ಗೆಬರಿ ತಿಂದದ್ದು ಸ್ವತಃ ದೊಡ್ಡನಗೌಡನಿಗೆ ಲೆಕ್ಕಕ್ಕೆ ಸಿಗುತ್ತಿಲ್ಲ. ಇನ್ನು ಕ್ಷೇತ್ರದ ಅಧಿಕಾರಿಗಳಂತೂ ಥೂ....ಥೂ ಅನ್ನಿಸಿಕೊಂಡೇ ನೌಕರಿ ಮಾಡಬೇಕಾಗಿದೆ.


ದೊಡ್ಡನಗೌಡ ಎಚ್. ಪಾಟೀಲ್

ಈತ ಮುಂದೆ ಗೆಲ್ತಾನೋ ಬಿಡ್ತಾನೋ ಗೊತ್ತಿಲ್ಲ, ಆದರೆ ಸಾಯೋವರೆಗೂ ಜನ ನೆನಪಿಡುವಂತಹ ಕೃಷ್ಣಾ 'ಬ'ನದಿ ತಾಲ್ಲೂಕಿಗೆ ನೀರು ತರಬಹುದಿತ್ತು. ಆದರೆ ಮೈತುಂಬ ಸೋಮಾರಿತನ ತುಂಬಿಕೊಂಡಿರುವ ಗೌಡ ಮಾತ್ರ ತನ್ನ ಗೌಡಕಿಯ ಧಿಮಾಕಿನಲ್ಲಿಯೇ ಕಾಲ ಕಳೆದು ಈಗ ಬರುವ ಚುನಾವಣೆಯಲ್ಲಿ ಮತ್ತೆ ಕೃಷ್ಣಾ 'ಬ' ಸ್ಕೀಂ ಎಂಬ ಮಂತ್ರ ಹೇಳುತ್ತ ಹೊರಡಲಿದ್ದಾನೆ.


ತಾಲ್ಲೂಕಿನ ಕೆರೆಗಳ ನಿರ್ವಹಣೆಗಾಗಿಯೇ ವರ್ಷಕ್ಕೆ ಲಕ್ಷಾಂತರ ರೂಪಾಯಿಗಳ ಲೆಕ್ಕ ಬರೆಯಲಾಗಿದೆ. ಆದರೆ ಕೆರೆಗಳು ಮಾತ್ರ, ಈತನ ಅವಧಿಯಲ್ಲಿ ಒಡೆದಷ್ಟು ಬೇರೆ ಯಾವಾಗಲೂ ಒಡೆದಿಲ್ಲ, ಒಂದು ಕೆರೆಯೇನಾದರೂ ಒಡೆಯಿತು ಅಂತ ಗೊತ್ತಾದರೆ ನಾನು 'ಆಫೀಸರ್‌ನ ಸಸ್ಪೆಂಡ್ ಮಾಡ್ತೀನಿ.... ಎಇಇಯನ್ನ ಮನೆಗೆ ಕಳಿಸ್ತೀನಿ.... ಅವರ ಜಾಗಕ್ಕೆ ಹೊಸಬರನ್ನ ಅಪಾಯಿಂಟ್ ಮಾಡಕೋತಿನಿ....' ಅಂತ ಬಡಬಡಿಸಿ ತನ್ನ ಹೆಡ್ಡತನವನ್ನು ಪ್ರದರ್ಶಿಸಿ ಅವರು ಕೊಟ್ಟ ಒಂದಿಷ್ಟು ಹಣಕ್ಕೆ ಬಾಯಿ ಚಾಚಿ ಗಪ್ ಆಗಿಬಿಡುತ್ತಾನೆ. ಸರ್ಕಾರ ಬೀಳುವ ಕೆಲತಿಂಗಳ ಮುನ್ನ ಬಿದ್ದ ಅತಿವೃಷ್ಟಿ ಮಳೆಯಿಂದ ಆದ ಹಾನಿ ಪರಿಹಾರಕ್ಕೆ ಬಲ್ಲಮೂಲಗಳಿಂದ ಅಂದಾಜು 4 ಕೋಟಿ ರೂಪಾಯಿ ಬಂದಿದೆ. ಆದರೆ ಬಂದ ಹಣವನ್ನು ಮಾತ್ರ ಅರ್ಧದಷ್ಟು ಜನರಿಗೆ ಹಂಚಿ, ಉಳಿದದ್ದು ರೋಡ್ ಕೆಲಸಕ್ಕೆ ಹಾಕಿ ಅಂತ ಅಧಿಕಾರಿಗಳ ಮೇಲೆ ಒತ್ತಡ ಹಾಕಿದ್ದಾನೆ. ರೋಡ್ ಕೆಲಸಕ್ಕೆ ಅಂತ ಆ ಹಣದಲ್ಲಿಯೂ ಪರ್ಸೆಂಟೇಜ್ ಹೊಡೆಯುವ ದುರಾಸೆ ದೊಡ್ಡನಗೌಡನಿಗೆ. ಮಾತೆತ್ತಿದರೆ ತಾನು ಕೂಡ ರೈತನ ಮಗ ಎಂದೇ ಬೊಗಳೆ ಬಿಡುವ ಈತ ರೈತರ ಹಣದಲ್ಲಿಯೂ ರಾಜಕೀಯ ಮಾಡಿ ಕಮಾಯಿಸಿಕೊಳ್ಳುತ್ತಾನೆ.

ಹೇಳುತ್ತಾಹೋದರೆ ದೊಡ್ಡನಗೌಡನ ಮಹಾನ್ ಕಾರ್ಯಗಳು ಹನುಮಂತನ ಬಾಲದಂತೆ ಬೆಳೆಯುತ್ತಲೇ ಹೋಗುತ್ತವೆ. ಇದೀ 40 ತಿಂಗಳು ತಿನ್ನುವುದರಲ್ಲಿ, ನುಂಗುವುದರಲ್ಲಿ, ಗುಳುಂ ಮಾಡುವುದರಲ್ಲಿ ದೊಡ್ಡನಗೌಡನದು ಒನ್‌ಸೈಡ್ ಬ್ಯಾಟಿಂಗ್. ಜೆಡಿಎಸ್‌ನ ಕೆ. ಶರಣಪ್ಪ ಮಾತ್ರ, ಇದನ್ನೆಲ್ಲ ನೋಡಿಕೊಂಡು, ಮಾವಿಗೆ ಸವರಿಕೊಳ್ಳುತ್ತ ಇದ್ದನೆ ಹೊರತು ಒಂದಿನವೂ ಗೌಡನ ದುರಾಡಳಿತದ ವಿರುದ್ಧ ಬೀದಿಗಿಳಿದು ಪ್ರತಿಭಟಿಸಲಿಲ್ಲ. ಕಾಂಗ್ರೆಸ್‌ನವರ ಬಗ್ಗೆ ಇಲ್ಲಿ ಬರೆಯದಿರುವುದೇ ಮೇಲು.

ದೊಡ್ಡನಗೌಡ ವಿರೋಧಿ ಅಲೆ ಇಲ್ಲಿ ಜೆಡಿಎಸ್‌ಗೆ ಪ್ಲಸ್ ಪಾಯಿಂಟ್ ಆಗುವ್ಹದಿತ್ತು, ಆದರೆ ಈಗಾಗಲೇ ತಾನೇ ಅಭ್ಯರ್ಥಿಯೆಂದು ತಿಳಿದಿರುವ ಕೆ. ... ಹಿಂದಿರುವ ಕೇ ಕುಟಗಳು ಬಾಲ ಬಿಚ್ಚುತ್ತಿರುವುದು ... ಮಾತ್ರ ಕುಷ್ಟಗಿಗೆ ... ತಪ್ಪಿಲ್ಲ.

-ವರದಿಗಾರ

ಎಲ್ಲನ್ನ ಸುಭದ್ರ ಪರಿಣಯ



ಅವರ ಕೃಷ್ಣೆ, ಅವರ ರಾಧೆ ಇವರೆಲ್ಲಾ ನಮ್ಮ ಬಂಗಾರಕ್ಕ, ಕೇತಣ್ಣಗಳ ಮುಂದೆ ಏನೇನೂ ಅಲ್ಲ. ಹೀಗೆಲ್ಲಾ ಹೇಳಿ ಕೊನೆಯಲ್ಲಿ ಅರ್ಥ ಆಯ್ತಾ ಅನ್ನೋ ನಾಗನ್ನನ ಪ್ರಶ್ನೆಗೆ ಎಲ್ಲನ್ನನ ಹತ್ತಿರ ಉತ್ತರವೇ ಇರ್ತಿರಲಿಲ್ಲ. ಏನೋ ಗೊಂದಲ ಆದರೂ ಅರ್ಥ ಮಾಡ್ಕೋಬೇಕು ಅನ್ನಿಸ್ತಿತ್ತು. ಅದನ್ನೇ ಬಗೀತಾ ಹೋದರೆ ಒಳಾರ್ಥಗಳು ಅವೆಷ್ಟೋ?! ಅಗೆದಷ್ಟೂ ಮಣ್ಣು ಬರುತ್ತಲೇ ಇರುತ್ತೆ. ಮಣ್ಣು ಎತ್ತಿ ಹಾಕಿದಷ್ಟೂ ಇನ್ನೂ ಆಳವಿದೆ, ಆಳದಲ್ಲಿ ಏನೋ ಅರ್ಥವಿದೆ ಅನ್ನಿಸೋ ಮಾತು. ಎಲ್ಲನ್ನ ನಾಗನ್ನನನ್ನೇ ದಿಟ್ಟಿಸಿ ನೋಡ್ತಾ ಅವನ ಮಾತುಗಳನ್ನ, ಕಥೆಗಳನ್ನ ಕೇಳಿಸಿಕೊಳ್ತಿದ್ದ.

ಸುಡು ಬೇಸಗೆ. ತಾನಾಗಿಯೇ ಪಿಟ್ಲೋನ ಮನೆಯ ಮುಂದಿನ ಮರದ ನೆರಳಿಗೆ ತಾನೂ ಹೋದಳು ಭೂದೇವಿ. ಆ ಮರದ ನೆರಳಲ್ಲೇ ಸುಭದ್ರ ಮಲಗಲು ಮಂಚ ಹಾಕಿಕೊಳ್ಳೋದು. ಭೂದೇವಿಯನ್ನ ನೋಡಿದಾಕ್ಷಣ ಎದ್ದು ನಿಂತ ಸುಭದ್ರ ಒಳಕ್ಕೆ ಓಡಲು ನೋಡಿದಳು. ಬೆದರು ಹಕ್ಕಿ. ತನ್ನ ತಂದೆಯ ಹೋಲಿಕೆ ಮುಖದಲ್ಲಿ ಮಾತ್ರವೇ, ಎದೆಯಲ್ಲಿ ಇಲ್ಲ, ಅವಳ ಕೈಹಿಡಿದು ಎಳೆದು ಕೂಡಿಸಿದಳು ಭೂದೇವಿ.

ತಾನು ಮಂಚದ ಪಕ್ಕ ಕೆಳಗೆ ಕುಳಿತು ಮಂಚದ ಮೇಲಿದ್ದ ಸುಭದ್ರಳ ಕೈಗೆ ಬಾಚಣಿಗೆ ಕೊಟ್ಟಳು. ಆ ಹುಡುಗಿಗೋ ಅಯೋಮಯ. ಬಾಚಣಿಗೆ ಕೈಯಲ್ಲಿ ಹಿಡಿದು ಭೂದೇವಿಯ ತಲೆಗೆ ತಾಕಿಸುತ್ತಿದ್ದಂತೆಯೇ "ಹೇನು ತೆಗೀ ಅಂತಲ್ಲ ನಾನು ಬಂದಿದ್ದು. ಬೆನ್ನೆಲ್ಲಾ ತುರಿಕೆ, ಸೆಖೆ ಗುಳ್ಳೆ. ಚನ್ನಾಗಿ ಕೆರಿ" ಅಂತಾ ಭೂದೇವಿ ತನ್ನ ಕುಪ್ಪಸವನ್ನ ಬೆನ್ನಿನ ಮೇಲಕ್ಕೆ ಎಳೆದುಕೊಂಡಳು. "ಮಣೆ ಮೇಲೆ ಕುಂತ್ಕೋ" ಅಂತಾ ಚನ್ನಮ್ಮ ಮಣೆ ತಂದು ಹಾಕಿದರೆ ಅದರ ಮೇಲೆ ಕುಳಿತ ಭೂದೇವಿಯ ಬೆನ್ನಿನ ಮೇಲೆ ನಿಧಾನವಾಗಿ ಬಾಚಣಿಗೆಯನ್ನ ಆಡಿಸತೊಡಗಿದಳು ಸುಭದ್ರ. ಆ ಕೆಲಸ ತನ್ನ ತಾಯಿಆಗಲಿ,ಭೂದೇವಿ ಆಗಲಿ, ಯಾರು ಹೇಳಿದರೂ ತಾನು ಎಂದೆಂದಿಗೂ ಮಾಡುವವಳಲ್ಲ. ಆದರೆ, ಹಿಂದಿನ ರಾತ್ರಿ ತಾನು ಸಿಕ್ಕಿಹಾಕಿಕೊಂಡ ನೆನಪು ಬಂತು. ಭೂದೇವಿ ಹೇಳಿದ ಹಾಗೆ ಕೇಳಲೇಬೇಕಾಗಿ ಬಂದಿತ್ತು, ಜೊತೆಗೆ, ಭೂದೇವಿ ದೊಡ್ಡಮ್ಮ ಒಳ್ಳೆಯವಳು ಅನ್ನೋದೇ ಸುಭದ್ರಳಿಗೆ ಯಾವಾಗಲೂ ಅನ್ನಿಸೋದು.

ಚನ್ನಮ್ಮ ಆ ಮಾತೂ, ಈ ಮಾತೂ ಆಡ್ತಾ ಇದ್ದರೆ ಆ ಮಾತುಗಳು ಬೆಳೆದು ಎಲ್ಲೆಲ್ಲಿಗೋ ಹೋಗೋದು ಶುರುವಾಯಿತು. ತನ್ನ ತಾಯಿ ಮಾತನಾಡದಿದ್ದರೇನೇ ಒಳ್ಳೇದು ಅಂತ ಸುಭದ್ರಳಿಗೆ ಅನ್ನಿಸಿದರೂ ಏನೂ ಮಾಡೋ ಹಾಗಿರಲಿಲ್ಲ. ಚನ್ನಮ್ಮನ ಮಾತು ನಿಲ್ಲೋದೇ ಇಲ್ಲ. ಕೊನೆಗೂ ಆ ಮಾತು ಸುಭದ್ರಳ ಮದುವೆ ವಿಷಯಕ್ಕೆ ಬಂದು ನಿಂತಿತು. ಇದ್ದಕ್ಕಿದ್ದಂತೆ ಭೂದೇವಿ ಹೇಳಿದಳು, "ಇವಳನ್ನ ಆ ಎಲ್ಲನ್ನನಿಗೆ ಕೊಡಬಾರದೇನೇ, ಲಿಂಗಾಲು ಸಂತೋಷಪಡ್ತಾಳೆ?!" "ಸಂದೇನಿದೆ? ಎಲ್ಲಾ ಅವಳಿಷ್ಟ, ಅವಳಪ್ಪನಿಷ್ಟ?!" ಮನೆಯಲ್ಲಿ ತನ್ನ ಮಾತೇನೂ ನಡೆಯೋದಿಲ್ಲ ಅನ್ನೋ ಮಾತನ್ನ ಈ ರೀತಿ ಹೊರಹಾಕಿದಳು ಚನ್ನಮ್ಮ. ಈ ಮಾತು ಕೇಳಿ ಸುಭದ್ರ ಭೂದೇವಿ ಬೆನ್ನಮೇಲೆ ಜೋರಾಗಿ ಕೆರೆದಳು. ಅವಳ ಮೇಲಿನ ಕೋಪವನ್ನ ಬೆನ್ನ ಮೇಲೇಕೆ ತೋರುಸ್ತೀಯೇ ಅಂದಳು ಭೂದೇವಿ. ಸುಭದ್ರಳಿಗೆ ನಿಜವಾಗಲೂ ಕೆಟ್ಟದ್ದೆನಿಸಿತು. "ಕೆರೆದದ್ದು ಸಾಕು, ಇಲ್ಲಿ ಬಾ" ಅಂತ ಸುಭದ್ರಳನ್ನ ತ... ಮುಂದೆ ಕೂಡಿಸಿಕೊಂಡು ಅವಳ ತಲೆಯಲ್ಲಿ ಹೇನು ತೆಗೆಯಲು ಹೊರಟಳು ಭೂದೇವಿ. ಎಷ್ಟು ಹುಡು... ದರೂ, ಒಂದು ಹೇನೂ ಸಿಗಲಿಲ್ಲ. "ಹೇನೇ ಇಲ್ಲದ ಇರೋ ತಲೆ, ಇದೆಂಥಾ ತಲೇನೇ?!" ಅಂತಾ ಮತ್ತೆ ಮತ್ತೆ ಹುಡುಕಿದಳು. ಕೆಂಚ ಕೂದಲಾದರೂ ಎಷ್ಟು ಚೆನ್ನಾಗಿದೆ?! ಅಂದುಕೊಂಡಳು. ಅದೇ ಮಾತನ್ನ ಜೋರಾಗಿ ಹೇಳಿದಳು. "ಕೆಲವರಿಗೆ ಇಂಥಾ ಕೆಂಚ ಕೂದಲೇ ಸರಿ. ಇವಳಿಗೆ ಕಪ್ಪು ಕೂದಲು ಅಷ್ಟು ಚನ್ನಾಗಿರ್ತಿಲ್ಲಿಲ್ಲ" ಅಂತ ಸ್ವಲ್ಪ ಒಗ್ಗರಣೇನೂ ಸೇರಿಸಿದಳು. ಆಗಲೇ ಅನ್ನಿಸಿತು ಚನ್ನಮ್ಮನಿಗೆ, ತನ್ನ ಮಗಳನ್ನ ಈಕೆಯ ಮನೆಗೆ ಕಳಿಸಿದರೆ ಸುಖವಾಗಿರ್ತಾಳೆ ಅಂತ. ಆದರೆ ತನ್ನ ಗಂಡನ ಮನಸ್ಸಿನಲ್ಲಿ ಏನಿದೆಯೋ?!

ಆ ಹಳ್ಳಿಯಲ್ಲಿ ಸ್ವಲ್ಪ ಕಾಳು, ಕಡ್ಡಿ ಇರೋದು ಅಂದರೆ ಪಿಟ್ಲೋನನ ಹತ್ತಿರ ಮಾತ್ರ. ಊರೂರೂ ತಿರುಗಿ ಗಾರೆ ಕೆಲಸ ಮಾಡಿ ಸಂಪಾದಿಸಿದ್ರಲ್ಲಿ ಪ್ರತಿ... ಸಂಜೆ ತನ್ನ ಮಗಳಿಗೆ ಏನೋ ಒಂದು ಕೊಂಡು ತರ್ತಾನೆ. ಅವನ ದೃಷ್ಟಿಯಲ್ಲಿ ಸುಭದ್ರ ಎಂದಿಗೂ ಮಗುವೇ. ಅವನು ಅವಳನ್ನ ಬೆಳೆಸಿದ ರೀತೀನೇ ಬೇರೆ. ಕಾಲಿಗೆ ಗೆಜ್ಜೆ ಕಿವಿಗೆ ಬೆಂಡೋಲೆ, ಏನೇನು ಬೇಕು?! ಮೂಗುತಿ ಬೇಕು ಅಂದಾಗ ಯಾನಾದಿಗಳ ಲಕ್ಷ್ಮಿಯನ್ನೇ ಕರೆದು ಹತ್ತಿರ ನಿಂತು ಮೂಗುತಿ ಹಾಕಿಸಿದ. ಸುತ್ತಮುತ್ತಲ ಹೊಲೆಗೇರಿಗಳಲ್ಲಿ ಮಂಡಿ ಕೆಳಕ್ಕೆ ಸೀರೆ ಉಟ್ಟವಳು ಅಂದರೆ ಸುಭದ್ರ ಒಬ್ಬಳೇ. ಊರಿನವರಿಗೆಲ್ಲಾ ಅದೇ ಒಂದು ದೊಡ್ಡ ವಿಷಯ. ಅವಳು ಹಾಗೆ ಸೀರೆ ಉಟ್ಟದ್ದರ ಬಗ್ಗೆ ಹಳ್ಳಿಯ ರೆಡ್ಡಿಗಳು ಆಡಿದ ಮಾತುಗಳು ಅವನ ಕಿವಿಗೆ ಬಿದ್ದವು. ಆದರೆ ಯಾರೂ ಅವನ ಮುಂದೆ ಏನೂ ಮಾತಾಡಲಿಲ್ಲ. ಏನಾದರೂ ಅಂದರೆ ಅವನ ನಾಲಿಗೆ ಸುಮ್ಮನಿರೋದಿಲ್ಲ ಅಂತ ಎಲ್ಲರಿಗೂ ಗೊತ್ತು. ಪೋಲಯ್ಯ ಮಾಮನಿಗೆ ಹೇಳಿ...

ಉಡುಪಿ ಜಿಲ್ಲೆಯ ಕಾಪುವಿನ ಸಮೀಪ ಮೂಳೂರು ಎಂಬ ಗ್ರಾಮವಿದೆ. ಕಾಪು-ಮೂಳೂರು ಪರಿಸರದಲ್ಲಿ ಸಾಕಷ್ಟು ಮುಸ್ಲಿಮರು ವಾಸಿಸುತ್ತಿದ್ದಾರೆ. ಮೂಳೂರಿನ ಜುಮ್ಮಾ ಮಸೀದಿ ಉಡುಪಿ, ಕಾಪು, ಮಂಗಳೂರು ಹೆದ್ದಾರಿಯ ಪಕ್ಕದಲ್ಲೇ ಇದೆ. ಈ ವರ್ಷದ ಮೊದಲ ದಿನ ಮುಂಜಾನೆ ಆ ಮಸೀದಿಯ ಕಾಂಪೌಂಡಿನ ಒಳಗೆ ಕೊಳೆಯುವ ಸ್ಥಿತಿಯಲ್ಲಿದ್ದ ಹಂದಿಯ ತಲೆಯೊಂದು ಪ್ರತ್ಯಕ್ಷವಾಯಿತು. ಅದನ್ನು ಈಗ ಪೊಲೀಸ್ ಬಂಧನದಲ್ಲಿರುವ ಈ ಇಬ್ಬರು ಆಪಾದಿತರು ಸ್ವತಃ ಈ ಸಂಗತಿಯನ್ನು ಹೊರಗೆಡವಿದ್ದಾರೆ. ಇಷ್ಟಾದ ಬಳಿಕ ಕಾಪು ಪೊಲೀಸರು ನೈಜ ಆರೋಪಿಯನ್ನು ಪತ್ತೆ ಮಾಡುವ ನಾಟಕ ಪ್ರಾರಂಭಿಸಿದ್ದಾರೆ. ಕಾಪು ಕ್ಷೇತ್ರದ ಮಾಜಿ ಕಾಂಗ್ರೆಸ್ ಶಾಸಕ ಮತ್ತು ಮಂತ್ರಿ ವಸಂತ ಸಾಲಿಯಾನ್ ಹಾಗೂ ಜೆಡಿಎಸ್ ಪಕ್ಷದ ಸ್ಥಳೀಯ ಮುಖಂಡ ದೇವಿಪ್ರಸಾದ್ ಶೆಟ್ಟಿ ಪತ್ರಿಕಾಗೋಷ್ಠಿ ಕರೆದು, ಆಪಾದಿತ ಗೋಪಾಲಕೃಷ್ಣ ದೇವಾಲಯಗಳ ಆವರಣದಲ್ಲಿ ಏಕಕಾಲಕ್ಕೆ ಗೋಮಾಂಸ ಕಂಡುಬಂದಿತ್ತು, ಕೋಟ ಪೊಲೀಸರು ಅದನ್ನು ಹೂತು ಹಾಕಿ ಕೇಸು ಕ್ಲೋಸ್ ಮಾಡುವುದರಲ್ಲಿದ್ದರು. ಅಷ್ಟರಲ್ಲಿ ಕೋಟದ ಹಿಂದೂ ವೀರರು ಆ ಮಾಂಸವನ್ನು ಪಶು ವೈದ್ಯರ ಬಳಿ ಒಯ್ದು ಅದು ಗೋಮಾಂಸವೇ ಹೌದು ಎಂದು ಸರ್ಟಿಫಿಕೇಟು ಮಾಡಿಸಿದರು. ಅವರು ಕೋಟಕ್ಕೆ ಕಿಚ್ಚು ಹಚ್ಚಬೇಕು ಎಂದಿದ್ದರು. ಆದರೆ ಮೂಳೂರಿನ ಮುಸ್ಲಿಮರಂತೆ, ಕೋಟದ ಹಿಂದೂಗಳು ಕೂಡ ಈ ಘಟನೆಯ ಬಗ್ಗೆ ಅತೀವ ನಿರ್ಲಕ್ಷ್ಯ ತೋರಿದ್ದರಿಂದ ಊರು ಸುಡಲಿಲ್ಲ.

"ನಾಗರಿಕರು" ಮತ್ತು "ಕಿಡಿಗೇಡಿಗಳು"

ಅಲ್ಲಿ ಇರಿಸಿದ 'ಪುಣ್ಯಾತ್ಮ'ನ ಕೊಳೆತ ಮನಸ್ಸು, ಆ ಕೊಳೆತ ಹಂದಿ ತಲೆಯಷ್ಟೇ ನಿಚ್ಚಳವಾಗಿ ಎಲ್ಲರಿಗೂ ಕಾಣುವಂತಿತ್ತು. ಕಾಪು ಮೂಳೂರು ಪರಿಸರದಲ್ಲಿ ಕೋಮುಹಿಂಸೆಗೆ ಒಂದು ಕಾರಣವನ್ನು ಸೃಷ್ಟಿ ಮಾಡುವುದು ಅವನ ಉದ್ದೇಶವಾಗಿತ್ತು. ಮೂಳೂರಿನ ಮುಸ್ಲಿಮರು ಇದನ್ನು ಸರಿಯಾಗಿ ಗ್ರಹಿಸಿ, ಸಂಯಮದಿಂದ ಈ ಪ್ರಸಂಗವನ್ನು ನಿಭಾಯಿಸಿದರು. ಈ ಪ್ರಕರಣದ ಅಪರಾಧಿಗಳನ್ನು ಪತ್ತೆಹಚ್ಚಿ ಸೂಕ್ತ ಕ್ರಮ ತೆಗೆದುಕೊಳ್ಳಿ ಎಂದು ಅವರು ಪೊಲೀಸ್ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು; ಘಟನೆಯ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸಿದರು; ಯಾರಿಗೂ ತೊಂದರೆಯಾಗದ ರೀತಿಯಲ್ಲಿ ಪರಿಸರದ ಹಿಂದೂಗಳು ಮತ್ತು ಕ್ರೈಸ್ತರ ಸಹಕಾರದೊಂದಿಗೆ ಒಂದು ದಿನದ ಬಂದ್ ಕೂಡ ಆಚರಿಸಿದರು; ಆದರೆ ಹಿಂಸಾಚಾರಕ್ಕೆ ಎಳ್ಳಷ್ಟೂ ಅವಕಾಶ ಮಾಡಿಕೊಡಲಿಲ್ಲ.

ಆದರೆ ಈಗ, ಮಸೀದಿಯ ಆವರಣದಲ್ಲಿ ಕಾಣಸಿಕ್ಕಿದ ಕೊಳೆತ ಹಂದಿ ತಲೆಯ ಗಿರಾಕಿ ಶಿರ್ವದ ಗೋಪಾಲಕೃಷ್ಣ ಪ್ರಭು ಎಂದು ಪತ್ತೆಯಾಗಿದೆ. ಈ ಆಸಾಮಿ, ಕಾಪು ಕ್ಷೇತ್ರದ ನಿಕಟಪೂರ್ವ ಬಿಜೆಪಿ ಮಾಜಿ ಶಾಸಕ ಲಾಲಾಜಿ ಮೆಂಡನ್ ಅವರ ಆಪ್ತ ವಲಯಕ್ಕೆ ಸೇರಿದವರು. ಹಂದಿಯ ರುಂಡವನ್ನು 'ಪೂಜೆಗೆ' ಎಂದು ಅವರು ಶಿರ್ವದ ಮಾಂಸ ಮಾರಾಟಗಾರರಾದ ಮೈಕೆಲ್ ಕೋರ್ಡಾ ಮತ್ತು ಐವನ್ ಮಟಾದೋ ಅವರಿಂದ ಖರೀದಿಸಿದ್ದರು.

ಪ್ರಭು ಅವರ ಬಂಧನಕ್ಕಾಗಿ ಆಗ್ರಹ ಪಡಿಸಿದ್ದಾರೆ. ದಿ. 9.1.2008, ಬುಧವಾರದಂದು ಮೂಳೂರಿನಲ್ಲಿ ಕೆ.ಎಫ್.ಡಿ., ಈ ಪ್ರಯುಕ್ತ ಒಂದು ಬೃಹತ್ ಪ್ರತಿಭಟನೆಗೆ ಸಿದ್ಧತೆ ನಡೆಸಿತ್ತು, ಆದರೆ ಎರಡು ದಿನಗಳ ಒಳಗೆ ಆಪಾದಿತರನ್ನು ಬಂಧಿಸುವುದಾಗಿ ಕಾಪು ಠಾಣೆಯ ಪೊಲೀಸ್ ಅಧಿಕಾರಿಗಳು ಕೊಟ್ಟ ಆಶ್ವಾಸನೆ ಮೇರೆಗೆ ಈ ಪ್ರತಿಭಟನೆಯನ್ನು ಸದ್ಯಕ್ಕೆ ಮುಂದೂಡಲಾಗಿದೆ. ಈ ಮಧ್ಯೆ ಆಪಾದಿತ ಗೋಪಾಲಕೃಷ್ಣ ಪ್ರಭು ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದುಕೊಳ್ಳಲು ಪೊಲೀಸರೇ ಅವರೊಂದಿಗೆ ಸಹಕರಿಸುತ್ತಿದ್ದಾರೆ ಎಂಬ ಮಾತು ಕೇಳಿಬರುತ್ತಿದೆ.

ಸದ್ರಿ ಗೋಪಾಲಕೃಷ್ಣ ಪ್ರಭು ಮತ್ತು ಅವರ ಹಂದಿ ತಲೆಯ ಈ ಅವಾಂತರ ಕುರಿತು ಕಾಪು ಮೂಳೂರು ಪರಿಸರದ ಮುಸ್ಲಿಮರು ತಾಳ್ಮೆ ವಿವೇಕಗಳಿಂದ ವರ್ತಿಸಿದ್ದಾರೆ ಎನ್ನುವುದನ್ನು ಬಿಟ್ಟರೆ ಈ ಪ್ರಕರಣದಲ್ಲಿ ಹೊಸತೇನೂ ಇಲ್ಲ. ಮಸೀದಿ ಎದುರು ಹಂದಿ ಮಾಂಸ ಚೆಲ್ಲುವುದು ಹಾಗೂ ದೇವಾಲಯಗಳ ಎದುರು ಗೋಮಾಂಸ ಇರಿಸುವುದು ಕಳೆದ ಶತಮಾನದ ಮೊದಲ ದಶಕದಿಂದಲೂ ಕೋಮು ಗಲಭೆ ಹುಟ್ಟುಹಾಕಲು ಎರಡೂ ಧರ್ಮಗಳ ಮತಾಂಧರು ಅನುಸರಿಸುತ್ತಿರುವ ತಂತ್ರವಾಗಿದೆ. ಭಾರತದಲ್ಲಿ ಹಂದಿ ಮಾಂಸ ಮತ್ತು ಗೋಮಾಂಸ, ಕೋಮು ಹಿಂಸೆಯ ಕವಿ ಸಮಯಗಳಾಗಿಬಿಟ್ಟಿವೆ. ಕಳೆದ ವರ್ಷ, ಏಪ್ರಿಲ್ ತಿಂಗಳ ಒಂದು ದಿನ, ಉಡುಪಿ ಜಿಲ್ಲೆಯ ಕೋಟದ ಆಸುಪಾಸಿನ ಮೂರು

ಆದಾಗ್ಯೂ ಮೂಳೂರಿನ ಹಂದಿ ಮಾಂಸದ ಪ್ರಕರಣದಲ್ಲಿ ಆತಂಕಕಾರಿಯಾದ ಒಂದೆರಡು ಅಂಶಗಳಿವೆ. ಈ ಪ್ರಕರಣದ ರೂವಾರಿ ಎನ್ನಲಾಗಿರುವ ಗೋಪಾಲಕೃಷ್ಣ ಪ್ರಭುವಿಗೆ ಸ್ವಂತಿಕೆಯೂ ಇಲ್ಲ; ಸಾರ್ವಜನಿಕ ವ್ಯಕ್ತಿತ್ವವೂ ಇಲ್ಲ. ಅವರು ಬಿಜೆಪಿಯ ಕ್ರೂರ ರಾಜಕೀಯದ ಒಂದು

ಕರಾವಳಿಯ ಪತ್ರಕರ್ತರು, ಧಾರ್ಮಿಕ ಮುಖಂಡರು, ಮಠಾಧೀಶರು, ಶಿಕ್ಷಣ ಸಂಸ್ಥೆಗಳ ಧಣಿಗಳು ಮುಂತಾದ ಗಣ್ಯರಲ್ಲಿಯೂ ಯಾರೂ ಕಿಡಿಗೇಡಿಗಳಲ್ಲ. ಅವರೆಲ್ಲರೂ ನಾಗರಿಕರೇ; ಸಂದೇಹಬೇಡ. ಹಾಗೆಂದ ಮೇಲೆ ಈ ನಾಗರಿಕರು ಎತ್ತಿ ಹಿಡಿಯುತ್ತಿರುವ ಸಿದ್ಧಾಂತವನ್ನೇ ಜಾರಿಗೊಳಿಸುವವರು ಕಿಡಿಗೇಡಿಗಳು ಹೇಗಾಗುತ್ತಾರೆ?



ಬಾಯಿ ಜೊತೆ ಚರ್ಮದ ಚಪ್ಪಲಿ ಹೊಲಿಸಿದ. ಆ ಚಪ್ಪಲಿಗಳು ಘಾಘಾ ಹೊಳೆಯೋ ಥರ ಚನ್ನಾರಿಯ ಕೆಲಸಾನೂ ಮಾಡಿಸಿದ್ದ. ಆ ಚರ್ಮ ಮೊದಲೇ ಹದ ಮಾಡಿದ್ದರೂ ಇನ್ನೂ ಮೂರು ದಿನ ಅದಕ್ಕೆ ಹರಳೆಣ್ಣೆ ಹಚ್ಚಿದ್ದ.

ಇಂಥಾ ಸುಭದ್ರ ಒಂದು ಸಲ ಬಟ್ರಗುಂಟದ ಜಾತ್ರೆಗೆ ಹೋಗಿದ್ದಳು. ಮುಂದಿಕೆಳಕ್ಕೆ ಸೀರೆ, ಕಾಲಿಗೆ ಚಪ್ಪಲಿ, ಬೆಂಡೋಲೆ, ಮೂಗುತಿ, ಹೀಗೆ ಸಕಲಾಭರಣಭೂಷಿತಳಾಗಿ ನಡೆದಾಡ್ತಾ ಇದ್ದ ಸುಭದ್ರಳನ್ನು ನೋಡಿದ್ದ ಮಾದಿರೆಡ್ಡಿ ಸುಬ್ಬಾಯಮ್ಮಳ ಸೊಸೆ ಯಾರು ಈ ಹುಡುಗಿ ಅಂತ ಕೇಳಿದಳು. ಪಕ್ಕದಲ್ಲಿದ್ದವರು ಯಾರೋ ಪಿಟ್ಟೋನನ ಮಗಳು ಅಂದಿದ್ದಕ್ಕೆ, ಶ್ಯಾನುಭೋಗರ ಹುಡುಗಿ ಥರಾ ಇದಾಳೆ ಅಂತ ಮತ್ತೆ ಮತ್ತೆ ಹೇಳಿ ಮೆಚ್ಚಿಕೊಂಡಳು. ಆ ಹುಡುಗಿಯ ಬಣ್ಣ, ಕೆಂಚು ಕೂದಲು, ಜಡೆ ಒಂದೊಂದನ್ನೂ ನೋಡಿ ನೋಡಿ ಸಂಭ್ರಮಿಸಿದಳು. ಹತ್ತಿರಕ್ಕೆ ಕರೆಯಿಸಿ ಕಣ್ಣಲ್ಲಿ ಕಣ್ಣಿಟ್ಟು ನೋಡಿದಳು. ಹೀಗಾಯಿತು ಅಂತ ತಿಳಿದ ಪಿಟ್ಟೋನು ಅವತ್ತು ರಾತ್ರಿಯೇ ಸುಭದ್ರಳಿಗೆ ದೃಷ್ಟಿ ತೆಗೆಸಿದ. ತನಗೆ ಗೊತ್ತಿದ್ದ ದೃಷ್ಟಿಗಳೆಲ್ಲಾ ತೆಗೆದ ಮೇಲೆ ಇನ್ನೂ ಯಾವುದಾದರೂ ಉಳಿದಿದೆಯೇನೋ ಅಂತ ಭೂದೇವಿನ ಕರೆದಳು ಚಿನ್ನಮ್ಮ. ಗಂಡ, ಹೆಂಡತಿ ಹೇಳಿದ್ದನ್ನೆಲ್ಲಾ ಕೇಳಿ ಎಳ್ಳದೆಲೆ ತುಂಡು ಮಾಡಿ, ತನ್ನ ಎಂಜಲು ಅದಕ್ಕೆ ಬಳಿದು ಆ ಎಲೆಯನ್ನ ಸುಭದ್ರಳ ಕೆನ್ನೆಯ ಮೇಲೆ ಇಟ್ಟು ಇಷ್ಟೇ ಸಾಕು ಅಂದಳು ಭೂದೇವಿ. ಆದರೆ ಅವತ್ತು ರಾತ್ರಿ ಸುಭದ್ರಳಿಗೆ ಮೈ ಬಿಚ್ಚಗಾಯಿತು. ಪಿಟ್ಟೋನಂತೂ ಸುಲೋಚನಳನ್ನ ಹೇಳಬಾರದ ಮಾತುಗಳಲ್ಲಿ ಬೈದ. ಬೆಳಗಿನ ಹೊತ್ತಿಗೆ ತಿಳೀತು ಆ ಹುಡುಗಿಗೆ ಜ್ವರ ಬಂದಿದ್ದು ಸುಲೋಚನಳ ಕೆಟ್ಟ ದೃಷ್ಟಿಯಿಂದಲ್ಲ ಅಂತ. ಪಿಟ್ಟೋನು ಅದೆಷ್ಟೇ ಹರಳೆಣ್ಣೆ ಖರ್ಚು ಮಾಡಿದ್ದರೂ ಹೊಸ ಚಪ್ಪಲಿಯಂತೂ ತನ್ನ ಕಚ್ಚೋ ಕೆಲಸವನ್ನ ನಡೆಸಿತ್ತು. ಸುಭದ್ರಳ ಬಲಗಾಲಿನ ಹೆಬ್ಬೆಟ್ಟು ಬೊಬ್ಬೆಯಾಗಿ ಊದಿಕೊಂಡು ಸೋರೆಕಾಯಿಯಾಗಿತ್ತು.

"ನೀನು ನನ್ನ ಮಗಳಿಗೆ ಚಪ್ಪಲಿ ಸರಿಯಾಗಿ ಹೊಲಿದುಕೊಡಲಿಲ್ಲ" ಅಂತ ಪಿಟ್ಟೋನು ಪೋಲಯ್ಯನ ಮೇಲೆ ಜಗಳಕ್ಕೆ ಹೋದ. ಪೋಲಯ್ಯ ನಕ್ಕು ಗಟ್ಟಿ ಚಪ್ಪಲಿ ಅಂದ್ರೆ ಅದು ಹಾಗೇನೇ. ನಾಳೆ ಬೆಳಗಿನ ಹೊತ್ತಿಗೆ ಎಲ್ಲಾ ಸರಿಹೋಗುತ್ತೆ ಹೋಗು ಅಂದ. ಅದು ಹಾಗೇ ಆಯಿತು. ಪೋಲಯ್ಯ ಮಾದುನ ಮಾತೂ ಅಂದ್ರೆ ಮಾತು ಅಂತ ಪಿಟ್ಟೋನು ಸಂತೋಷಪಟ್ಟ. ಹಾಗೆ ಬೆಳೆಸಿದ ತನ್ನ ಮಗಳನ್ನ. ಇನ್ನೂ ಅಲ್ಲೀ ಇಲ್ಲೀ ಆಟ ಆಡಿಕೊಂಡಿರೋ ತನ್ನ ಮಗನಿಗೆ ಎಲ್ಲಿ ಕೊಡ್ತಾನೆ ಅನ್ನೋದು ಎರ್ರೆಂಕನ ಅನುಮಾನ. ಆದರೆ ಪಿಟ್ಟೋನು ಮಗಳ ಮಾತು ತೆಗೆದುಹಾಕೋನಲ್ಲ ಅಂತ ಭೂದೇವಿಗೆ ಗೊತ್ತಿತ್ತು, ಆ ಹುಡುಗಿಗೆ ಎಲ್ಲನ್ನನ ಮೇಲೆ ಮನಸ್ಸಿರೋದು, ಅದಕ್ಕಿಂತಲೂ ಹೆಚ್ಚಾಗಿ ಅವಳ ಕಣ್ಣಲ್ಲಿ ನೀರು ತುಂಬಿದರೆ ಪಿಟ್ಟೋನ ಜೀವ ಹೊಡಕೊಳ್ಳೋದು ಎಲ್ಲಾ ಭೂದೇವಿಗೆ ಗೊತ್ತಿತ್ತು.

ಕೊನೆಗೆ ಎಲ್ಲಾ ಭೂದೇವಿ ಅಂದುಕೊಂಡ ಹಾಗೇ ನಡೆಯಿತು. ಪಿಟ್ಟೋನು ಪಕ್ಕದ ಹಳ್ಳಿ ಕೊಳ್ಳದಿನ್ನೆಯ ಒಂದು ಸಂಬಂಧ ನೋಡಿದ್ದ. ಇನ್ನೇನು ಅವರು ಮಾತುಕತೆಗೆ ಬರಬೇಕು, ಆಗ ಸುಭದ್ರ ಕಡ್ಡಿ ಮುರಿದ ಹಾಗೆ ಹೇಳೇ ಬಿಟ್ಟಳು. "ನಾನು ಮದುವೆ ಆದರೆ ಎಲ್ಲನ್ನನನ್ನೇ!" ಆಗ ಪಿಟ್ಟೋನು ಆ ಹುಡುಗನ ಬಗ್ಗೆ ತಲೆಕೆಡಿಸಿಕೊಂಡ. ತಮ್ಮ ಎರಡೂ ಕುಟುಂಬಗಳಿಗೆ ಎಲ್ಲನ್ನ ಒಬ್ಬನೇ ಗಂಡು ಮಗ. ಆಟ, ಕುಣಿತ ಅಂತ ಊರಿಂದ ಊರಿಗೆ ತಿರುಗ್ತಿರ್ತಾನೆ. ತಿರುಗಾಡಲಿ, ಕೊನೆಗೆ ಮನೆಗೆ ಬಂದರೆ ಸಾಕು. ಅವನಿಗೆ ತನ್ನ ಸಂಪಾದನೆಯಿಂದ ಸುಭದ್ರಳನ್ನು ಸಾಕೋ ಕೆಲಸ ಇಲ್ಲ. "ಇನ್ನೇನು? ಆಗೇ ಹೋಗಲಿ." ಅವನಿಂದ ಈ ಮಾತು ಕೇಳಿದ ಚಿನ್ನಮ್ಮ ಭೂದೇವಿಯ ಕಿವಿಗೆ ಹಾಕಿದಳು. ಭೂದೇವಿ, ಎಂಕಟನರಸು ಮತ್ತು ಲಿಂಗಾಲು ಪಿಟ್ಟೋನನ ಮನೆಗೆ ಮಾತುಕತೆಗೆ ಹೋಗಿ, ಮೂರು ರೂಪಾಯಿ, ಆರಾಣೆ ಓಲಿ, ಕಾಲಿಗೆ ಚೈನು, ಕಿವಿಗೆ ಓಲೆ ಹುಡುಗಿಗೆ ಕೊಡೋ ಹಾಗೆ ಮಾತಾಯಿತು. ಮುಹೂರ್ತ ಇಟ್ಟಿದ್ದು, ಮದುವೆ ನಡೆಸಿದ್ದು ಎಲ್ಲಾ ಕಣ್ಣುಮುಚ್ಚಿ ತೆಗೆಯೋದರಲ್ಲಿ ಮುಗಿದೇಹೋಯಿತು. "ಎಲ್ಲನ್ನ, ಸುಭದ್ರ ನನ್ನ ಹತ್ತಿರವೇ ಇರಲಿ" ಅಂದ ಭೂದೇವಿಯ ಮಾತಿಗೆ ಯಾರೂ ಬೇಡ ಅನ್ನಲಿಲ್ಲ.

* * * *

ಎಲ್ಲನ್ನನ ಆಟ ಕುಣಿತಗಳಿಗೆ ಸುಭದ್ರ ಎಂದೂ ಅಡ್ಡಿಮಾಡಲಿಲ್ಲ. ಇದುವರೆಗೂ ಹೇಗೋ ಆಯಿತು. ಇನ್ನು ಮೇಲಾದ್ರೂ ಬೆಳಗಿನ ಹೊತ್ತು ಎಲ್ಲಿಗೆ ಹೋದ್ರೂ ರಾತ್ರಿಯಾದ್ರೂ ಎಲ್ಲನ್ನ ಮನೆಗೆ ಬರಲಿ ಅನ್ನೋದು ಭೂದೇವಿಯ ಆಸೆ. ಎಂಕಟನರಸು ವ್ಯಾಪಾರದ ಮೇಲೆ ದಿನಗಟ್ಟಲೆ ಮನೆಕಡೆ ಇರೋದಿಲ್ಲ, ಈ ಹುಡುಗ ಹೀಗೆ. ಮನೆಯಲ್ಲಿ ಹೆಂಗಸರಿಬ್ಬರೇ ಮಿಕಮಿಕ ಅಂತ. ಸುಭದ್ರಳನ್ನ ಅವಳ ತಾಯಿಗಿಂತಲೂ ಚನ್ನಾಗಿ ನೋಡಿಕೊಳ್ತಿದ್ದಳು ಭೂದೇವಿ. ಎಲ್ಲನ್ನನಿಗಿಂತ ಸುಭದ್ರಳ ಮೇಲೇ ಅವಳಿಗೆ ಅಕ್ಕರೆ ಜಾಸ್ತಿ. ಅವಳು ಬಯಸಿದಂತೆ ಸ್ವಲ್ಪ ದಿನದಲ್ಲೇ ಸುಭದ್ರಳಿಗೆ ತಿಂಗಳು ತುಂಬಿತು. ಗಂಡು ಮಗುವನ್ನು ಹಡೆದಳು. ನಾಗನ್ನನೇ ಬಂದು ಮಗುವಿಗೆ ಶಿವಯ್ಯ ಅಂತ ಹೆಸರಿಟ್ಟ. ಅತ್ತೆ ಸೊಸೆಯಂದಿರಿಗೆ ಶಿವಯ್ಯನೇ ಎಲ್ಲಾ ಆದ.

ಜಿ. ಕಲ್ಯಾಣರಾವ್‌ರವರ

ಅಸ್ಪೃಶ್ಯ ವಸಂತ

9

ಅನುವಾದ: ಪ್ರೊ. ನಗರಗೆರೆ ರಮೇಶ್

ಎಲ್ಲನ್ನ ಹುಡುಗನಾಗಿದ್ದಾಗ ನಾಗನ್ನನ ಹತ್ತಿರ ಕಲಿತ ಒಡ್ಡೆ ... ಆ ... ಕುಣಿತದಲ್ಲಿ ಇನ್ನೂ ಹೊಸ ಹೊಸ ಹಟ್ಟುಗಳನ್ನ ತಾನಾಗಿ ಕಲಿತು ದೊಡ್ಡವನಾದ ಮೇಲೆ ಚೆಂಚು ನಾಟಕ ಆಡಬೇಕು ಅನ್ನೋ ಹಟ ಅವನದು. ಅದಕ್ಕಾಗಿ ನಾಗನ್ನನನ್ನ ಒಂದೇ ಹಿಡಿಸಿದ್ದ. ನಾಗನ್ನನಿಗೆ ತಮಟೆಯ ಕುಣಿತ ಮಾತ್ರ ಅಲ್ಲ, ರಾಯಲಸೀಮೆಯ ಬೈಲಾಟ ಸಹ ಚೆನ್ನಾಗಿ ಗೊತ್ತಿತ್ತು. ನಾಗನ್ನನ ಗುರು ಚಂದ್ರಪ್ಪ ಮಹಾನ್ ಕಲಾವಿದ. ಜಾನಪದದ ಎಲ್ಲಾ ರೀತಿಗಳು ಚಂದ್ರಪ್ಪ ಅರೆದು ಕುಡಿದಿದ್ದವನೇ. ಅವೆಲ್ಲಾ ನಾಗನ್ನನಿಗೆ ಕಲಿಸಿದ್ದ. ಚಂದ್ರಪ್ಪನಿಗೆ ವಿದ್ವಾಂಸರ ಮೇಲೆ ಸಹಜವಾದ ಅಸಮಾಧಾನವಿತ್ತು, ಅದರಿಂದಾಗಿಯೇ ಅವೆಷ್ಟೋ ಕಥೆಗಳನ್ನ ಹಾಗೇ ಹೆಣೆದು ಹೇಳ್ತಿದ್ದ. ಚಂದ್ರಪ್ಪನ ಆ ಕಥೆಗಳೆಲ್ಲಾ ನಾಗನ್ನನಿಂದ ಎಲ್ಲನ್ನನಿಗೆ ಮುಟ್ಟಿದವು. ಅವು ಎಲ್ಲನ್ನನ ಆಟಕ್ಕೆ, ಹಾಡಿಗೆ ಒಳ್ಳೆಯ ಜೊತೆಯಾದವು.

ಮರಾಠಿಗರು ನಮ್ಮವರೇ. ಅದೆಷ್ಟು ಚೆನ್ನಾಗಿ ತೊಗಲು ಗೊಂಬೆ ಆಡುಸ್ತಾರೆ?! ಎಲ್ಲಾ ಪುರಾಣಗಳನ್ನೂ ಅದೆಷ್ಟು ಚೆನ್ನಾಗಿ ಹಾಡ್ತಾರೆ. ಅವರು ಮಾಡೋ ಒಂದು ಗೊಂಬೆ, ಎಲ್ಲಿ ಈ ಪಂಡಿತರನ್ನ ಮಾಡು ಅನ್ನು ನೋಡೋಣ?! ಅವರ ಕೃಷ್ಣ ಅವರ ರಾಧೆ ಇವರೆಲ್ಲಾ ನಮ್ಮ ಬಂಗಾರಕ್ಕ, ಕೇತಣ್ಣಗಳ ಮುಂದೆ ಏನೇನೂ ಅಲ್ಲ. ಹೀಗೆಲ್ಲಾ ಹೇಳಿ ಕೊನೆಯಲ್ಲಿ ಅರ್ಥ ಆಯ್ತಾ ಅನ್ನೋ ನಾಗನ್ನನ ಪ್ರಶ್ನೆಗೆ ಎಲ್ಲನ್ನನ ಹತ್ತಿರ ಉತ್ತರವೇ ಇರ್ತಿರಲಿಲ್ಲ. ಏನೋ ಗೊಂದಲ ಆದರೂ ಅರ್ಥ ಮಾಡ್ಕೋಬೇಕು ಅನ್ನಿಸ್ತಿತ್ತು. ಅದನ್ನೇ ಬಗೀತಾ ಹೋದರೆ ಒಳಾರ್ಥಗಳು ಅವೆಷ್ಟೋ?! ಅಗೆದಷ್ಟೂ ಮಣ್ಣು ಬರುತ್ತಲೇ ಇರುತ್ತೆ, ಮಣ್ಣು ಎತ್ತಿ ಹಾಕಿದಷ್ಟೂ ಇನ್ನೂ ಆಳವಿದೆ, ಆಳದಲ್ಲಿ ಏನೋ ಅರ್ಥವಿದೆ ಅನ್ನಿಸೋ ಮಾತು. ಎಲ್ಲನ್ನ ನಾಗನ್ನನನ್ನೇ ದಿಟ್ಟಿಸಿ ನೋಡ್ತಾ ಅವನ ಮಾತುಗಳನ್ನ, ಕಥೆಗಳನ್ನ ಕೇಳಿಸಿಕೊಳ್ತಿದ್ದ.

(ಮುಂದುವರೆಯುತ್ತದೆ)

ಮುಖಹೀನ ಉಪಕರಣ. ಬರಲಿರುವ ವಿಧಾನಸಭೆಯ ಚುನಾವಣೆಗಳನ್ನು ಗಮನದಲ್ಲಿ ಇರಿಸಿಕೊಂಡು ಬಜೆಪಿ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಏನು ಮಾಡಲು ಹೊರಟದೆ? 2006 ರ ಅಕ್ಟೋಬರ್ ತಿಂಗಳಿನಲ್ಲಿ ಮಂಗಳೂರಿನಲ್ಲಿ ನಡೆದ ಹಿಂಸಾಚಾರದ ನಂತರ ಕರಾವಳಿಯ ಉಭಯ ಜಿಲ್ಲೆಗಳು ಹೆಚ್ಚುಕಡಿಮೆ ಶಾಂತವಾಗಿಯೇ ಇದ್ದವು. ಕಳೆದ ಸಾಲಿನ ಬಕ್ರಿದ್ ಹಬ್ಬದ ಸಂದರ್ಭದಲ್ಲಿ ಕುಂದಾಪುರ ತಾಲ್ಲೂಕಿನ ಕಿರುಮಂಜೇಶ್ವರದಲ್ಲಿ ಗೋಹತ್ಯೆಯ ನೆವದಲ್ಲಿ ಮುಸ್ಲಿಮರ ಮನೆಗಳ ಮೇಲೆ ನಡೆದ ದಾಳಿಯೇ ಆ ಹಿಂಸಾಸರಣಿಯ ಕೊನೆಯ ದುರ್ಘಟನೆ. ಆದರೆ ಕಳೆದ ಒಂದು ತಿಂಗಳಿಂದ, ಇದ್ದಕ್ಕಿದ್ದಂತೆ ಅಲ್ಲಲ್ಲಿ ಮತ್ತೆ ಹಿಂಸೆ ತಲೆದೋರುತ್ತಿದೆ. ಸಾರ್ವಜನಿಕ ಸ್ಥಳಗಳಲ್ಲಿ ಹಿಂದೂ ತರುಣಿಯರ ಜೊತೆ ಕಾಣಿಸಿಕೊಳ್ಳುವ "ಅನ್ಯಮತೀಯ"ರಿಗೆ ಗುಂಪು ಕಟ್ಟಿಕೊಂಡು ಹಲ್ಲೆ ಮಾಡುವುದು ಮತ್ತು ನಂತರ ಅವರನ್ನು ಪೊಲೀಸರಿಗೆ ಒಪ್ಪಿಸುವುದು ಕೂಡ ಮತ್ತೆ ಪ್ರಾರಂಭವಾಗಿದೆ. ದನಕರು ಖರೀದಿಸಿ ಸಾಗಿಸುವ ಕಸಾಯಿ ದಂಧೆಯವರ ಮೇಲೆ ಹೆದ್ದಾರಿ ಹಲ್ಲೆ ಹಾಗೂ ಗೋಮಾಂಸ ಮಾರುವ ಹೋಟೆಲುಗಳ ಮೇಲೆ ಗುಂಪು ದಾಳಿಗಳು ಸಹ ಮತ್ತೆ ಶುರುವಾಗಿವೆ. ಕಳೆದ ವಾರ ಉಡುಪಿಗೆ ಸಮೀಪದ ಐರೋಡಿಯ "ಯೆಹೋವನ ಸಾಕ್ಷಿಮಂದಿರ" ಎಂಬ ಪ್ರಾಟೆಸ್ಟಂಟ್ ಪಂಥದ ಇಬ್ಬರು ಅನುಯಾಯಿಗಳನ್ನು, ಸ್ಥಳೀಯ ಹಿಂದೂ ಜಾಗರಣ ವೇದಿಕೆಯವರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ. ಈ ಇಬ್ಬರು ಯೆಹೋವನ ಅನುಯಾಯಿಗಳು ಹಿಂದೂ ದೇವತೆಗಳನ್ನು ಅವಹೇಳನ ಮಾಡುವ ಪುಸ್ತಕಗಳನ್ನು ಮನೆಮನೆಗೆ ಹಂಚುತ್ತಿದ್ದಾರಂತೆ!

ದಿ 5.1.2008, ಶನಿವಾರ, ನಡುರಾತ್ರಿಯ ಹೊತ್ತಿಗೆ ಮಂಗಳೂರು ನಗರವನ್ನು ಪ್ರವೇಶಿಸುತ್ತಿದ್ದ ಟೂರಿಸ್ಟ್ ಬಸ್ ಒಂದಕ್ಕೆ ಕಲ್ಲು ಎಸೆದು, ಬಸ್ಸಿನಲ್ಲಿದ್ದ ಪ್ರವಾಸಿಗರನ್ನು ಬಲಾತ್ಕಾರವಾಗಿ ಕೆಳಗೆ ಇಳಿಸಲಾಯಿತು. ಈ ನಡುವೆ ಪ್ರವಾಸಿಗರ ಮೂರು ಮೊಬೈಲ್ ಫೋನ್ ಮತ್ತು 15,000 ರೂ. ನಗದು ... ಮಂಗಳೂರಿನ ಕಂಪ್ಯೂಟರ್ ತರಬೇತಿ ಸಂಸ್ಥೆಯೊಂದರ (ಸಿ.ಬಿ.ಸಿ. ಕೊಕ್ಕಡ) ವಿದ್ಯಾರ್ಥಿಗಳು, ವಿದ್ಯಾರ್ಥಿನಿ... ... ಮತ್ತು ಪ್ರಾಂಶುಪಾಲರು ಸಹಿತ ಆ ದಿನ ಉತ್ತರ ಕನ್ನಡ ಜಿಲ್ಲೆಯ ಮುರುಡೇಶ್ವರ, ಗೋಕರ್ಣ, ಯಾಣ ಮುಂತಾದೆಡೆ ಪ್ರವಾಸ ನಡೆಸಿ ಮಂಗಳೂರಿಗೆ ವಾಪಸ್ಸಾಗುತ್ತಿದ್ದಾಗ ಮೋಟರ್ ಬೈಕುಗಳಲ್ಲಿ ಬಂದ 10-12 ಹೆಲ್ಮೆಟ್‌ಧಾರಿ ತರುಣರು ಈ ದಾಳಿ ನಡೆಸಿದ್ದಾರೆ. ಈ ಬಗ್ಗೆ ತಮ್ಮ ಸತ್ಯಸಂಧತೆ, ನಿಷ್ಪಕ್ಷಪಾತತನಗಳಿಗೆ ಹೆಸರು ಮಾಡಿರುವ ಕರಾವಳಿಯ ಎಮ್ಮೆಯ ಎರಡು ದಿನಪತ್ರಿಕೆಗಳು ಏನು ಹೇಳುತ್ತವೆ ಎಂಬುದನ್ನು ಗಮನಿಸಿ:

ಉದಯವಾಣಿ: ".... ಕಂಪ್ಯೂಟರ್ ಸಂಸ್ಥೆಯ ವಿದ್ಯಾರ್ಥಿಗಳು ಶನಿವಾರ ಬೆಳಿಗ್ಗೆ 4.45 ಕ್ಕೆ ಪ್ರವಾಸ ಹೊರಟಿದ್ದರು. ಒಟ್ಟು 46 ಮಂದಿ ಇದ್ದು ಅದರಲ್ಲಿ ಶೇ. 50 ರಷ್ಟು ಹುಡುಗಿಯರಿದ್ದರು. ಸಂಸ್ಥೆಯ ಮುಖ್ಯಸ್ಥರು ಮತ್ತು ಪ್ರಾಂಶುಪಾಲರು ಕೂಡಾ ಇದ್ದರು. ಅನ್ಯಕೋಮಿನ ಯುವಕರು ಕೂಡಾ ಪ್ರವಾಸ ತಂಡದಲ್ಲಿ ಇದ್ದರು ಎಂಬ ಕಾರಣಕ್ಕಾಗಿ ಕಿಡಿಗೇಡಿಗಳು ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದೆ.

ಪೊಲೀಸರು ಸ್ಥಳಕ್ಕೆ ಧಾವಿಸಿ ಬಂದು ಪ್ರಕರಣ ದಾಖಲಿಸಿದ್ದಾರೆ, ಯಾರನ್ನೂ ಬಂಧಿಸಿಲ್ಲ, ತನಿಖೆ ನಡೆಯುತ್ತಿದೆ" (ದಿ. 7.01.08, ಪುಟ 10).

ವಿಜಯ ಕರ್ನಾಟಕ (ಏರು ಹೊತ್ತಿನ ಆವೃತ್ತಿ): "..... ತೊಕೊಟ್ಟಿನಲ್ಲಿರುವ ಸರ್ಕಾರದ ಮಾನ್ಯತೆ ಪಡೆದಿರುವ ಕಂಪ್ಯೂಟರ್ ಸಂಸ್ಥೆ ವಿದ್ಯಾರ್ಥಿಗಳು ಶನಿವಾರ ಬೆಳಿಗ್ಗೆ ಪ್ರವಾಸಕ್ಕೆ ಹೊರಟಿದ್ದರು.... ಬಸ್ಸಿನಲ್ಲಿ 46 ಮಂದಿ ಇದ್ದರು. ಅವರಲ್ಲಿ ಅರ್ಧದಷ್ಟು ಮಂದಿ ಹುಡುಗಿಯರಿದ್ದರು. ಸಂಸ್ಥೆಯ ಮುಖ್ಯಸ್ಥರು, ಪ್ರಾಂಶುಪಾಲರು ಕೂಡ ಇದ್ದು ಸಂತೋಷದಿಂದ ಟ್ರಿಪ್ ಮುಗಿಸಿ ಮರಳುತ್ತಿದ್ದರು. ಆಗ ದಾಳಿ ನಡೆಯಿತು.

ತಂಡದಲ್ಲಿ ಕೆಲವು ಅನ್ಯಕೋಮಿನ ಯುವಕರಿದ್ದರು ಎಂಬ ಕಾರಣಕ್ಕಾಗಿ ಕೆಲವು ಕಿಡಿಗೇಡಿಗಳು ಈ ಕೃತ್ಯಕ್ಕೆ ಮುಂದಾಗಿದ್ದಾರೆ ಎನ್ನಲಾಗಿದೆ. ಆದರೆ ಇದು ಯಾವುದಾದರೂ ಸಂಘಟನೆಯ ಕೆಲಸವೇ, ಅಸ್ವಸ್ಥ ಮನಸ್ಸಿನ ಅಸಹಾಯಕ ಯುವಕರ ಕೃತ್ಯವೇ ಎನ್ನುವುದು ಸ್ಪಷ್ಟವಾಗಿಲ್ಲ..." (6.1.08 ಪುಟ 1).

ಎರಡು ವರದಿಗಳೂ ಪ್ರವಾಸ ತಂಡದಲ್ಲಿ ಅರ್ಧದಷ್ಟು 'ಹುಡುಗಿಯರಿದ್ದರು'. ಜೊತೆಗೆ "ಅನ್ಯಕೋಮಿನವರು" ಇದ್ದರು ಎಂದು ಹೇಳುತ್ತವೆ. "ಅನ್ಯಕೋಮಿನವರು" ಎಂದರೆ ಯಾರು ಹಾಗೂ ಯಾರಿಗೆ ಅವರು "ಅನ್ಯರು" ಎಂಬುದನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಭಾರತದ ಸಂವಿಧಾನ, ಯಾರನ್ನೂ "ಅನ್ಯರು" ಎಂದು ಹೆಸರಿಸದೆ ಇದ್ದರೂ ಕರಾವಳಿಯ ಪತ್ರಿಕೆಗಳಿಗೆ ಈಗ ಹಿಂದೂಯೇತರರೆಲ್ಲರೂ "ಅನ್ಯಕೋಮಿ"ನವರು! ಸಂಘ ಪರಿವಾರದ ಹಿಂಸಾ ಕೃತ್ಯಗಳನ್ನು ಈ ಪತ್ರಿಕೆಗಳು ಸಮರ್ಥಿಸುವ ಪರಿ ಇದು! ಮೇಲೆ ಕೊಟ್ಟಿರುವ ಎರಡು ವರದಿಗಳೂ ಪ್ರವಾಸೀ ತಂಡದ ಮೇಲೆ ದಾಳಿ ನಡೆಸಿದವರು 'ಕಿಡಿಗೇಡಿ'ಗಳಿರಬಹುದು ಎಂಬ ಸಂದೇಹವನ್ನು ವ್ಯಕ್ತಪಡಿಸಿವೆ. ಅವರು ಕಿಡಿಗೇಡಿಗಳೇ ಇರಬಹುದು. ಆದರೆ ಕರಾವಳಿಯ ಸಮಸ್ಯೆ ಏನೆಂದರೆ, ಇಲ್ಲಿ ನಾಗರಿಕರು ಮತ್ತು ಕಿಡಿಗೇಡಿಗಳ ನಡುವಿನ ವ್ಯತ್ಯಾಸ ದಿನೇದಿನೇ ಕಡಿಮೆಯಾಗುತ್ತಿದೆ. ಕಳೆದ ವಾರವಷ್ಟೆ, ಮಂಗಳೂರಿನ ಪುರಭವನದಲ್ಲಿ ರಿವ್ಯೂಟಿಯವರು ಏರ್ಪಡಿಸಿದ್ದ ಸಾರ್ವಜನಿಕ ಕಾರ್ಯಕ್ರಮವೊಂದರಲ್ಲಿ ಮಂಗಳೂರಿನ ಮಾಜಿ ಬಜೆಪಿ ಶಾಸಕ ಯೋಗೀಶ್ ಭಟ್ ಮಾತಾಡುತ್ತ "ಮುಸ್ಲಿಮರು ಗೋಮಾಂಸ ಭಕ್ಷಣೆ ಬಿಡಬೇಕು ಮತ್ತು ಮುಸ್ಲಿಮ್ ತರುಣರು ಹಿಂದೂ ಹುಡುಗಿಯರನ್ನು ಚುಡಾಯಿಸುವುದನ್ನು ನಿಲ್ಲಿಸಬೇಕು. ಕರಾವಳಿಯಲ್ಲಿ ಶಾಂತಿ ನೆಲೆಸಲು ಇದು ಅಗತ್ಯ" ಎಂದಿದ್ದಾರೆ. ಯೋಗೀಶ್ ಭಟ್ ಖಂಡಿತ ಕಿಡಿಗೇಡಿಯಲ್ಲ; ಅವರು "ನಾಗರಿಕರು"; ಅಷ್ಟೇ ಯಾಕೆ, ಮಂಗಳೂರಿನ ಎಲ್ಲ ನಾಗರಿಕರನ್ನು ಪ್ರತಿನಿಧಿಸುವಂತಹ ಮಹಾನಾಗರಿಕರು. ಹಾಗೆಯೇ ಕರಾವಳಿಯ ಪತ್ರಕರ್ತರು, ಧಾರ್ಮಿಕ ಮುಖಂಡರು, ಮಠಾಧೀಶರು, ಶಿಕ್ಷಣ ಸಂಸ್ಥೆಗಳ ಧಣಿಗಳು ಮುಂತಾದ ಗಣ್ಯರಲ್ಲಿಯೂ ಯಾರೂ ಕಿಡಿಗೇಡಿಗಳಲ್ಲ, ಅವರೆಲ್ಲರೂ ನಾಗರಿಕರೇ; ಸಂದೇಹ ಬೇಡ. ಹಾಗೆಂದ ಮೇಲೆ ಈ ನಾಗರಿಕರು ಎತ್ತಿ ಹಿಡಿಯುತ್ತಿರುವ ಸಿದ್ಧಾಂತವನ್ನೇ ಜಾರಿಗೊಳಿಸುವವರು ಕಿಡಿಗೇಡಿಗಳು ಹೇಗಾಗುತ್ತಾರೆ?

ಪ್ರವಾಸಿತಂಡವೊಂದರ ಮೇಲೆ, ಅದರಲ್ಲಿ ಮಹಿಳೆಯರ ಜೊತೆ "ಅನ್ಯಕೋಮಿ"ನ ಗಂಡಸರೂ ಇದ್ದಾರೆ ಎಂಬ ಕಾರಣಕ್ಕೆ ದಾಳಿ ನಡೆಯುವುದು, ಮಂಗಳೂರಿನಲ್ಲಿ ಇದೇನೂ ಮೊದಲ ಬಾರಿ ಅಲ್ಲ. 2005 ರ ಅಕ್ಟೋಬರ್ ತಿಂಗಳಲ್ಲಿ ಮಂಗಳೂರಿನ ಸ್ವೀಟ್ ಪ್ಯಾಲೇಸ್‌ನ ನೌಕರರು ಮೈಸೂರು ಪ್ರವಾಸಕ್ಕೆ ಹೊರಟಾಗ, ಇದೇ ಕಾರಣವನ್ನು ಮುಂದೊಡ್ಡಿ ಮಂಗಳೂರಿನ ಹೊರವಲಯದ ಪಂಪ್‌ವೆಲ್‌ನಲ್ಲಿ ಕೇಸರಿ ಪಡೆಯವರು ಬಸ್ಸಿನ ಒಳಗೆ ನುಗ್ಗಿ ಪ್ರಯಾಣಿಕರ ಮೇಲೆ ಹಲ್ಲೆ ಮಾಡಿ, ರಾಡಿನಿಂದ ಹೊಡೆದು, ನಗದು ಹಣ ದೋಚಿದ್ದು ಮಾತ್ರವಲ್ಲ ಮಹಿಳಾ ಪ್ರಯಾಣಿಕರ ಆಭರಣಗಳನ್ನೂ ಎಳೆದು ತೆಗೆದುಕೊಂಡಿದ್ದರು. ಅವರಲ್ಲಿ ಒಬ್ಬಾಕೆ ಹಲ್ಲೆಯಲ್ಲಿ ಗಾಯಗೊಳ್ಳುವುದರ ಜೊತೆ ತನ್ನ ಮಂಗಳಸೂತ್ರವನ್ನೂ ಕಳೆದುಕೊಂಡಿದ್ದರು. ಆ ಬಸ್ಸಿನಲ್ಲಿ ಸ್ವೀಟ್ ಪ್ಯಾಲೇಸ್‌ನ ಮಾಲೀಕರು ತಮ್ಮ ಪತ್ನಿಯ ಜೊತೆಗೆ ಪ್ರವಾಸ ಹೊರಟಿದ್ದರು. ಹಲವು ಮಹಿಳಾ ನೌಕರರು ತಮ್ಮ ಸಂಸಾರ ಸಮೇತ ಆ ತಂಡದಲ್ಲಿದ್ದರು. ಅವರೆಲ್ಲರೂ ಮಂಗಳೂರಿನ ನಾಗರಿಕರೇ. ಅವರ ಮೇಲೆ ಹಲ್ಲೆ ನಡೆಸಿದ ಕೇಸರಿ ಶಾಲಿನವರು ನಾಗರಿಕರಲ್ಲವೋ? ಕರಾವಳಿಯ ಯೋಗೀಶ್ ಭಟ್, ಲಾಲಾಜಿ ಮೆಂಡನ್, ನಾಗರಾಜ್ ಶೆಟ್ಟಿ, ವಿ.ಎಸ್. ಆಚಾರ್ಯ ಮತ್ತು ರಘುಪತಿ ಭಟ್ (ಆದಿ ಉಡುಪಿ ಬೆತ್ತಲೆ ಪ್ರಕರಣದ ಪ್ರಮುಖ ಆರೋಪಿಯನ್ನು ಉಡುಪಿ ಪುರಸಭೆಗೆ ನಾಮಕರಣ ಸದಸ್ಯರನ್ನಾಗಿ ಮಾಡಿದ ಮಹನೀಯರು) ಹಾಗೂ ಇನ್ನಿತರ ಗಣ್ಯರು ನಾಗರಿಕರಾದರೆ ಈ ದಾಳಿಕಾರರೂ ಖಂಡಿತ "ನಾಗರಿಕರೇ". ಹಾಗೆ ನೋಡಿದರೆ ಒಂದು ತೂಕ ಹೆಚ್ಚೇ "ನಾಗರಿಕರು". ನಮ್ಮ ಕರಾವಳಿಯ "ಎಮ್ಮೆ"ಯ ನಾಗರಿಕರು; ನಮ್ಮ ದೇಶ, ಧರ್ಮ ಮತ್ತು ನಮ್ಮ ಮಹಿಳೆಯರ ಮಾನ, ಮಾಂಗಲ್ಯಗಳನ್ನು ಕಾಪಾಡುವ ನಾಗರಿಕರು! ಇವರು ಖಂಡಿತ ಕಿಡಿಗೇಡಿಗಳಲ್ಲ, ಇವರಲ್ಲಿ ಕೆಲವರಿಗೆ ಕಂಡವರ ದುಡ್ಡು ಕಾಸು, ಚಿನ್ನ, ಭೂಮಿ ಇತ್ಯಾದಿಗಳನ್ನು ಲಪಟಾಯಿಸುವ ಅಭ್ಯಾಸವಿರಬಹುದು. ಹಾಗೆಂದು ಇವರನ್ನು ಬಸ್ ಸ್ಟ್ಯಾಂಡ್ ಪಿಕ್ ಪಾಕೆಟ್‌ಗಳ ಸಾಲಿಗೆ ಸೇರಿಸಲಾಗುವುದಿಲ್ಲ, ಕಿಡಿಗೇಡಿಗಳಿಗೆ, ಪಿಕ್‌ಪಾಕೆಟ್‌ಗಳಿಗೆ ಸಿದ್ಧಾಂತವಿಲ್ಲ; ಇವರಿಗೆ ಇದೆ.

■ ಜಿ. ರಾಜಶೇಖರ

ಬುಕ್ಕನ ಬೆಟ್ಟದ ಜಾತ್ರೆ ನೋಡಿ ಜೀವನ ಸಾರ್ಥಕಾಯ್ತು ಕಂಡ್ಯ

ಇದ್ದಕ್ಕಿದ್ದಂತೆ ಕಾಳಮಾವ ಒಂದು ದಿನ ಕಾಣೆಯಾಗಿದ್ದು ನಂತರ ಕಾಣಿಸಿಕೊಂಡ. ಅವನನ್ನು ನೋಡಿದ ಜುಮ್ಮಿ,

"ಎಲ್ಲಿಗೋಗಿದ್ದೊ ಮಾವ? ನೀನೊಂದಿನ ಕಾಣದೆ ಯಿರಬ್ರೆ ನನಿಗೆ ಬೇಜಾರಾಗಿತ್ತು" ಎಂದಳು.

"ನಾನೇನು ಇಲ್ಲೆ ಇರಕ್ಕೆ ಬಂದಿದ್ವಿನೇನ್ಲೆ? ಒಂದಲ್ಲಾ ಒಂದಿನ ಹೋಗ್ಲೆಬೇಕವ್ವ. ಅದ್ಯಾರಾರ ತಡಿಯಕ್ಕಾದತೆ?"

"ಅದು ನನಿಗೂ ಗೊತ್ತೂ. ಇದ್ದಕ್ಕಿದ್ದಂಗೆ ಯತ್ತಗೋಗಿದ್ವೇ?"

"ಒಂದೂವರೆ ಲಕ್ಷ ರೂಪಾಯಿ ಬೆಲಿಬಾಳೊ ದನ ಬುಕ್ಕನ ಬೆಟ್ಟದ ಜಾತ್ರಿಗೆ ಬಂದವೆ ಅಂದ್ರು. ವತ್ತರಲೆ

ಬಯಲು ಸೀಮೆಯ ಕಟ್ಟೆ ಪುರಾಣ

ಬ. ಚಂದ್ರೇಗೌಡ

ಎದ್ದು ಹ್ಯಗಲಮ್ಯಾಲೆ ಬಟ್ಟೆ ಹಾಯ್ಕಂಡು ಪರುವು ಮುಂದಾಗಿ ಹೋಗಿಬುಟ್ಟೆ ಕಂಡ್ಯ. ಆ ದನ ನೋಡಿ ಮನೆಕಡಿಕ್ ಬರಕ್ಕೆ ಮನಸಾಗಲಿಲ್ಲ. ಅಂಥಾ ರಾಸವು" ಎಂದು ಕಾಳಮಾವ ತಾನು ಜಾತ್ರೆಯಲ್ಲಿ ನೋಡಿದ ದನಗಳ ವೃತ್ತಾಂತ ಹೇಳುತ್ತಿದ್ದರೆ, ಎಲ್ಲರಿಗೂ ಈ ಕೂಡಲೆ ಬುಕ್ಕನ ಬೆಟ್ಟದ ಜಾತ್ರೆಗೆ ಹೋಗಿಬಿಡಬೇಕು ಅನ್ನಿಸಿತು. ಆಗ ಜುಮ್ಮಿ,

"ಉಗ್ರಿ ನಡಿಲ ಬೂಕನ ಬ್ಯಟ್ಟದ ಜಾತ್ರಿಗೋಗಿ ಬರನ" ಎಂದಳು.

"ಬೂಕ ಅಲ್ಲ ಕಣೇ, ಬುಕ್ಕನಬೆಟ್ಟ ಅದು. ವಿಜಯನಗರ ಕಟ್ಟಿದ ಅಕ್ಕಬುಕ್ಕ ಅಂತ ಇದ್ರಲ್ಲಾ? ಅವುರ ಪೈಕಿ ಬುಕ್ಕ ಅನ್ನೊನು ಇಲ್ಲಿಗೆ ಬಂದು ಬ್ಯಟ್ಟದ ಮ್ಯಾಲೆ ರಂಗನಾಥಸ್ವಾಮಿ ದೇವಸ್ಥಾನ ಕಟ್ಟಿ ಸಂಕ್ರಾಂತಿಗೂ ಮದ್ಲು ದನಿನ ಜಾತ್ರೆ ನ್ಯಡಿಯಂಗೆ ಮಾಡಿಹೋದನಂತೆ. ಆ ಕಾಲದಿಂದ ಇಲ್ಲಿಗಂಟ ಆ ಜಾತ್ರೆ ನ್ಯಡಕಂಡು ಬಂದದೆ" ಎಂದ ಉಗ್ರಿ.

"ಅದು ಕಟಗಂಡು ನನಿಗೇನು, ನಡಿಲ."

"ದನಿನ ಜಾತ್ರೆಲಿ ಹೆಂಗಸರಿಗೇನೆ ಕ್ಯಲ್ಸ? ಜನ ನಿನ್ನೊಂಥರಾ ನೋಡ್ತರೆ ಸುಮ್ನನಿರು. ನಾನೋಗಿ ಬತ್ತಿನಿ."

"ಜನ ನೋಡ್ತರೆ ಅಂತ ಮಲ್ಲಿಕುಂತಿದ್ರೆ ಯಂಗಿರತಿದ್ದೆ ಗೊತ್ತೆ ನಾನು? ಮುಚಗಂಡು ನಡಿಲ ಕಂಡಿದ್ದಿನಿ ದನ ನೋಡಿಕಂ ಬರನ."

"ಏ ದನ ಅಂದ್ರೆ ದನ ಕಂಡ್ಯ. ಅವ ಕಟ್ಟರೊ ಜಾಗ ಸಿಂಗಾರ ಮಾಡ್ಯವುರಲ್ಲಾ, ಅಂಗೆ ಮದುವೆ ಚಪ್ಪರಿದ್ದಂಗದೆ" ಎಂದ ಕಾಳಮಾವ.

"ಯಾಪಾರಾಗಿದ್ದವೊ ಇಲವೊ ಮಾವ?" ಎಂದ ಉಗ್ರಿ.

"ಆಗ್ಯವೆ ಅಂದ್ರು ಕಂಡ್ಯ. ಆದ್ರು ತಗಂಡೋನು ಅವು ಕೈಲಿ ಅದೇನು ಕ್ಯಲಸ ಮಾಡಿಸ್ಕನೊ ಕಾಣೆ ಹೋಗ ತ್ತಗೆ."

"ಇಷ್ಟು ಬ್ಯಾಲಿಬಾಳೊ ದನ ಕಟ್ಟದ್ದಿನಿ ಅನ್ನೊ ಡೌಲು ಬುಟ್ರೆ ಇಂತ ದನಿನಿಂದ ಇನ್ನಾವ ಫಾಯ್ದೆನೂ ಇಲ್ಲ ಕಣಮಾವ" ಎಂದು ಉಗ್ರಿ ವಿವರಿಸುತ್ತಿದ್ದಾಗ ಬಂದ ವಾಟಿಸ್ಸೆ,

"ದ್ವಡಪ್ಪ ದ್ವಡಪ್ಪಾ ಜಾತ್ರೆಲಿ ನಾನು ನಿನ್ನೋಡಿದೆ. ಯತ್ಲಗೋದೆ ನೀನು ಆಮ್ಯಾಲೆ ಸಿಗಲೇಯಿಲ್ಲವಲ್ಲ" ಎಂದ.

"ನೀನೆಲ್ಲಿದ್ದಾ?"

"ರಂಗನಾಥ ಸ್ವಾಮಿ ಪಿಗ್‌ಮಟನ್ ಹೋಟ್ಯಲಿದ್ದೆ ದ್ವಡಪ್ಪ, ಕೂಗನ ಅಂದ್ರೆ ಬಾಯಲಿ ಪಿಗ್‌ಮಟನ್ ಪೀಸಿತ್ತು. ಅದ್ಕೆ ಕೂಗಕ್ಯಾಗಲಿಲ್ಲ, ಸಾರಿ ದ್ವಡಪ್ಪ."

"ನೀನು ಜಾತ್ರಿಗ್ಯಾಕೋಗಿದ್ದೆ ಅಂತ ಈಗ್ಗೊತ್ತಾಯ್ತು ಬುಡ್ಯ."

"ನಾನು ಹೋಯ್ತಿರಲಿಲ್ಲ ದ್ವಡಪ್ಪ, ಆ ಮಂಜಯ್ಯನೂ ಅಂಗಡಿ ಜಯರಾಮನೂ ಯಳಕಂಡೋದ್ರು. ಒಂದೇ ಜಾಗದಲ್ಲಿ ಯರಡು ಪಿಗ್‌ಮಟನ್ ಹೋಟ್ಲು ನೋಡಿದೆ. ಅದು ಕ್ಯಾಶ್ ಮ್ಯಾಲೆ ನಮ್ಮ ಜುಮ್ಮಕ್ಕನಂಗೆ ವಬ್ಳು ಕುಂತಿದ್ಲು. ಅದೂ ಮೊಬೈಲಲ್ಲಿ ಮಾತಾಡ್ತ....."

"ಹಂದಿ ಕುಯ್ಯೋರ ಜೊತೆ ಮಾತಾಡತಿದ್ದೇನೊ" ಎಂದಳು ಜುಮ್ಮಿ.

"ಇರಬವುದು. ಅಲ್ಲಿ ಕಸ್ಟಮರ್ ನೋಡಿದ್ರೆ ಎಷ್ಟು ಹಂದಿ ಕೂದ್ರು ಶಾರಟೇಜಾಗಂಗಿದ್ರು ಕಣಕ್ಕ. ನಾನು ಯರಡು ಪ್ಲೇಟ್ ತಿಂದೆ. ಅಮ್ಯಾಲೆ ಇಡೀ ಜಾತ್ರೆ



ಯರಡು ರೌಂಡ್ ವಡದು ಬಂದೆ."

"ಲಕ್ಸರೂಪಾಯಿ ಜ್ವತೆ ದನಿದ್ದವಂತೆ ನೋಡಿದ್ನ?"

"ನೋಡಿದೆ ಕಣಕ್ಕ. ಅವೇನು ದೂರದವಲ್ಲ ಕಣಕ್ಕ ಇದೇ ಅಂಕನಳ್ಳಿ ಗೌಡನವು. ಅಂತ ಸಾಸ ನಾವ್ಯಾರು ಮಾಡಕ್ಯಾಗದಿಲ್ಲ. ಒಂದು ಲಕ್ಷದ ಹತ್ತು ಸವುರ ಕೊಟ್ಟು ತಗಂಡಿದ್ದನಂತೆ. ಈಗ ಲಕ್ಷದ ಅರವತ್ತು ಸವುರಕೆ ಯಾಪಾರಾದೊ. ಅಲ್ಲಿಗೆ ಲಾಬೆಷ್ಟು ಬತ್ತೊ ದ್ವಡಪ್ಪ?"

"ಯಲ್ಲ ಅಲ್ಲಿದಲ್ಲಿಗೆ ಆಗ್ಯದೆ ಕಂಡ್ಯ. ಏನೂ ಬ್ಯಾಡಪ್ಪ ಆ ದನಗಳ ನಿಗಾ ನೋಡಕ್ಕೆ ಮೂರು ಜನಿದ್ರು. ಅವುರಾಕೊ ತಿಂಡಿ, ಮ್ಯರವಣಿಗೆ, ಆಮ್ಯಾಲೆ ಜಾತ್ರೆ... ಚಪ್ಪರ, ಲೈಟು ಇದಕ್ಕೆಲ್ಲ ಲಕ್ಷ ಹಾಕಿದ್ರೆ, ಆ ಪುಗ... ದನಿನ ಮುಕ ನೋಡ್ಕರೆ ವರತು ದುಡ್ಡಿನ ... ನೋಡೋರಲ್ಲ ಕಂಡ್ಯ" ಎಂದ ಕಾಳಮಾವ.

"ಇನ್ನೊಂದು ಜ್ವತೆ ಇದ್ದೊ ದ್ವಡಪ್ಪ, ಆರಲ್ಲಾಗಿ... ಅರವತ್ತು ಸವುರ ಹೇಳತಿದ್ದ, ಅವು ಯರಡಲ್ಲಾಗಿ... ಯಂಗಿದ್ದೊ ಯೇಚ್ನೆ ಮಾಡಿದಾ?"

"ಯರಡಲ್ಲಿನವು, ನಾಕಲ್ಲಿ... ಆರಲ್ಲಿನವು, ಹಲ್ಲೇ ಆಗದೆಯಿ... ಜೊತೆನ್ಯಲ್ಲ ನೋಡಿ ಬಂದೆ ಕಂ... ಅಂತೂ ಒಂದೂವರೆ ಲಕ್ಷ ರೂ... ಯಿಗೆ ಮಾರಾಟವಾಗೊ ... ನೋಡಿದನಲ್ಲ ಬುಡು" ಎಂ... ಕಾಳಮಾವ ಬದುಕು ಸಾರ್ಥ... ಗೊಂಡಂತೆ ಕಣ್ಣುಬಿಡುತ್ತಿರುವ... ವಾಟಿಸ್ಸೆ,

"ಮುಂದಿನ ವರ್ಷ ನಾ... ಒಂದು ಜ್ವತೆ ದನ ತಗಂಡೊ... ಜಾತ್ರೆಲಿ ಕಟ್ಟೈಬೇಕು ದ್ವಡಪ್ಪ,"

"ಅಂತ ದನ ನವ್ಮ... ಎಲ್ಲಿದ್ದವುಲ?"

"ಈ ಉಗ್ರಿ ಹತ್ರ ಒಂ... ಬಳಿಕರದೆ ದ್ವಡಪ್ಪ, ಅದ್ನೆ ಚೆನ್... ಮೇಸಿ ಜ್ವತಿಗಾಕಿದ್ರಾಯ್ತು. ನಾ... ಜಾತ್ರೆಲೊಂದಾವಣೆ ಹಾಕಿ, ಮಟನ್ ಸಾರು ಮಾ... ಹೋಗೋರು ಬರೋರನ್ಯಲ್ಲ ಕರದು ವಳ್ಳೆ ಪಾ... ಮಾಡಬವುದು. ಅಲ್ಲವೇನೊ ಉಗ್ರಿ?"

"ಏ ನನ್ನ ಕರ ಚನಾಗ್ಯದೆ. ಆದ್ರೆ ಒಂದು ಬೀಜ... ಕಣೊ. ಇನ್ನೊಂದು ವಟ್ಟೆವಳಗೆ ಉಳಕಂಡದೆ" ಎಂ... ಉಗ್ರಿ.

"ಸರಿಯಾಗಿ ನೋಡಿದಾ?"

"ನಾನೆ ಕೈಯಾಕಿ ನೋಡಿದೆ. ನೋಡಿಕಳಪ್ಪ ನ... ಬಂಡವಾಳವ ಅಂತ ಅದು ಕಾಲ ನೀಡಿ ತೋರತು...

ವಿಷ್ಣುವಿನ ಪರದಾಟಗಳು

ಸೃಷ್ಟಿ, ಕರ್ತೃ, ಲಯಗಳ ವಾರಸುದಾರರು ಯಾರು?

ಬ್ರಹ್ಮ, ವಿಷ್ಣು ಮಹೇಶ್ವರರು!

ಈ ಬ್ರಹ್ಮ ಅನ್ನೋನು ಜಗತ್ತನ್ನ ಲೀಲಾಜಾಲವಾಗಿ ಸೃಷ್ಟಿ ಮಾಡಿ ಕಮಲದ ಹೂವಿನ ಮಂಚದ ಮೇಲೆ ಜೋಕಾಗಿ ಕುಂತಿದ್ದಾನೆ. ಇನ್ನು ಮಹೇಶ್ವರ ಅಂಬೋನು ಹಿಮಾಲಯ ಪರ್ವತದ ಶಿಖರದ ಮೇಲೆ ಗಂಗೆ, ಪಾರ್ವತಿಯರ ಜೊತೆ ಜಾಲಿ ಮಾಡುತ್ತಾ ಜಗತ್ತಿನ ಆಗುಹೋಗುಗಳನ್ನು ನೋಡ್ತ ಮಜ ತೆಗೊಳ್ತಿದಾನೆ. ಇವನ್ನೆಲ್ಲ ನೋಡಿ, ನೋಡಿ ಬೇಸರ ಬಂದರೆ ಪ್ರಳಯರುದ್ರ ಆಗಿ ನಾಶ ಮಾಡ್ತಾನೆ. ನಮ್ಮನ್ನು ಈ ಹಾಳು ಭೂಮಿ ಮೇಲೆ ಯಾಕೋ ಹುಟ್ಟಿಸಿದೆ ಅಂತ ಆ ಬ್ರಹ್ಮನ್ನ ಯಾರೂ ಕೇಳೋಲ್ಲ, ಯಾಕೋ ನಮ್ಮ ಸಾಯಿಸ್ತಿಯ ಅಂತ ಆ ಮಹೇಶ್ವರನನ್ನು ಹಾವಿನ ಪಟ್ಟ ಹಿಡಿದು ಜಾಡಿಸೋಲ್ಲ. ಎಲ್ಲರ ಕಣ್ಣೂ ಆ ಬಡಪಾಯಿ ವಿಷ್ಣು ಮೇಲೆ. ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ ಅಂತ ಹಲವಾರು ಅವತಾರ ಎತ್ತಿದ್ದೇ ಮುಳುವಾಗಿರಬೇಕು. ಗುರುತು ಕಂಡ ಬದ್ದಿ ಅಂತಾನೋ ಏನೋ ಅವನ್ನೇ ಹಿಡಿದು ಜಗ್ಗಾಡಿಸುತ್ತಾರೆ. ಇದು ಹೆಂಗಾಗಿದೆಯಪ್ಪ ಅಂದರೆ.....

ಒಂದು ಊರು. ಅಲ್ಲಿ ಒಬ್ಬ ಭಿಕ್ಷುಕ. ಅವನು ಒಂದು ಬೀದಿಯಲ್ಲಿ ದಿನಾ ಭಿಕ್ಷಕ್ಕೆ ಬರೋನು. ಒಂದು ಮನೆಯ ಆಕೆಗೆ ಆತನನ್ನ ಕಂಡರೆ ಬಲೇ ಕರುಣೆ. ಬಂದಾಗಲೆಲ್ಲ ಭಿಕ್ಷೆ ನೀಡುತ್ತಿದ್ದಳು. ಅವರ ಮನೆಯ ಎದುರು ಒಂದು ಮನೆ. ಅದರ ಒಡತಿ ಗಯಾಳಿ ಹೆಂಗಸು. ಭಿಕ್ಷುಕರನ್ನ ಕಂಡರೇ ಉರಿದು ಬೀಳೋಳು. ಉಗಿದು ಓಡಿಸೋಳು. ಹೀಗೇ ನಡೀತಾ ಇತ್ತು, ಒಂದು ದಿನ ಭಿಕ್ಷೆ ನೀಡುತ್ತಿದ್ದ ಮನೆಯಾಕೆಗೆ ಏನೋ ಕೆಲಸ. ಕೈಬಿಡುವಿರಲಿಲ್ಲ, ಭಿಕ್ಷುಕ ಬಂದಾಗ 'ಮುಂದೆ ಹೋಗಪ್ಪ' ಅಂದಳು ಅನಿವಾರ್ಯವಾಗಿ. ಈ ಮನೆಯಲ್ಲಿ ಏನಾದರೂ ಸಿಕ್ಕೇ ಸಿಗುತ್ತೆ ಅಂತ ಬಂದಿದ್ದ ಭಿಕ್ಷುಕನಿಗೆ ನಿರಾಸೆ, ಬೇಸರ, ಜಿಗುಪ್ಸೆ ಜೊತೆಗೆ ಕೋಪಾನು ಬಂತು. 'ಆ ನನ್ ಮಹಾತಾಯಿಯೇನೋ ಯಾವತ್ತೂ ಭಿಕ್ಷೆ ಅಂತ ನೀಡ್ತಿರಲಿಲ್ಲ, ಈ ನನ್ ಕಳ್ಳ ಬಡ್ಡೀಗೆ ಏನ್ಬಂತು ಇವತ್ತು' ಅಂತ ಕಿಡಿಕಾರಿದ.

ಹಿಂಗಾಗಿದೆ ವಿಷ್ಣು ಪರಿಸ್ಥಿತಿ!



* * * * *

ಆಸ್ಟ್ರೇಲಿಯಾದ ಸಿಡ್ನಿಯಲ್ಲಿ 'ಸಭ್ಯ'ರ ನಡುವೆ ಜಟಾಪಟಿ.

'ಕೋತಿ' ಎನ್ನುವುದು ಜನಾಂಗನಿಂದನೆಯೆ?

ಇದು ಪ್ರಶ್ನೆ.

ಆಸ್ಟ್ರೇಲಿಯಾದ ಅಂಡ್ರೂ ಸೈಮಂಡ್ಸ್ ಅದ್ಭುತ ಆಟಗಾರ. ಆದರೆ ಅವನ ಮುಖ ಅಷ್ಟಕ್ಕಷ್ಟೆ. ಅದಕ್ಕೆ ಅವನು ಹೊಣೆ ಅಲ್ಲ. ಅವನ ಕೈಲಿ ಚೆನ್ನಾಗಿ ಚಚ್ಚಿಸಿಕೊಂಡ ಹರ್‌ಭಜನ್‌ಸಿಂಗ್ 'ಕೋತಿ' ಅಂದು. ತನ್ನ ಕೋಪ ತೀರಿಸಿಕೊಂಡನಂತೆ. ಈಗ ಈ ಪ್ರಶ್ನೆ ಎದ್ದಿದೆ.

'ಹೌದು' ಅಂತ ಕೆಲವರು, 'ಅಲ್ಲ' ಅಂತ ಹಲವರು.

ಹಿಂದೂ ಉದ್ಧಾರಕರು ಸಿಡ್ನಿಯಲ್ಲಿಲ್ಲವೆ?

ಸೈಮಂಡ್ಸ್‌ಗೆ ಹನುಮಂತನ ವೇಷ ಹಾಕಿದರು. ಪೋಸ್ಟರ್ ಮಾಡಿಸಿದರು. ಥೇಟ್ ಆ ಭಜರಂಗ ಬಲಿಯೇ ಅವತಾರ ಎತ್ತಿದಂತೆ ಇತ್ತು ಅದು!

'ಕೋತಿ ಅಂದರೆ ಹನುಮಂತ. ಶ್ರೀರಾಮ ಭಕ್ತ, ಹಿಂದೂಗಳ ಆರಾಧ್ಯ ದೈವ ಅವನು. ಹಾಗಂದರೆ ಜನಾಂಗೀಯ ನಿಂದನೆ ಆಗಲ್ಲ, ಪರಂತು ಹೊಗಳಿಕೆಯಾಗುತ್ತದೆ' ಅಂದರು ಹಿಂದೂ ಉದ್ಧಾರಕರು.

ಆದರೆ ಐಸಿಸಿ ಅದನ್ನು ಒಪ್ಪಲು ಸಿದ್ಧವಿಲ್ಲ.

ಈಗ ಚೆಂಡು ಐಸಿಸಿ ಅಂಗಳದಲ್ಲಿದೆ.

ಶ್ರೀರಾಮನ ಫಜೀತಿ ನೋಡಿ. ಈಗ ಅವನು ಐಸಿಸಿ ಆಡಳಿತಗಾರರ ಮನಸ್ಸು ಬದಲಾಯಿಸಿ ಹನುಮಂತ ದೇವರನ್ನು ಉಳಿಸಬೇಕು. ಇಲ್ಲವಾದರೆ 'ಕೋತಿ' ಎಂದರೆ ಜನಾಂಗ ನಿಂದನೆ ಎಂದೇ ಆಗುತ್ತದೆ. ಅದಕ್ಕೆ ಶ್ರೀರಾಮನೇ ಹೊಣೆ!

* * * * *

ವಿಷ್ಣುವಿನ ಒಂದು ಅವತಾರ-ನರಸಿಂಹಾವತಾರ.

ಪುರಾಣಯುಗದಲ್ಲಿ ಹಿರಣ್ಯಾಕ್ಷನ ಹೊಟ್ಟೆಬಗೆದು ಕರುಳಿನಿಂದ ಹಾರ ಹಾಕಿಕೊಂಡ. ಕಲಿಯುಗದಲ್ಲಿ ಹೋಗಿ ಮೇಲುಕೋಟೆಯ ಬೆಟ್ಟದ ಮೇಲೆ ಹಾಯ... ಕುಳಿತುಕೊಂಡ.

ಮೊದಲೇ ಬೆಟ್ಟ. ರಾತ್ರಿ ವೇಳೆ ಜನರ ಸುಳಿ... ಇರೋಲ್ಲ. ಮಾಡಿದ ಪಾಪಾನೂ ಕಳೆದುಕೊಂ... ಹಾಗಾಯಿತು, ನೋಡುವವರ ಕಣ್ಣಿಗೆ ಅಂದವಾಗಿಯ... ಕಾಣುವಂತಾಯಿತು ಅಂತಾನೋ ಏನೋ ಹಲವಾ... ಭಕ್ತರು ಕಾಲದಿಂದಲೂ ಆ ಸ್ವಾಮಿಯ ಮೇಲೆ ಚಿನ್ನ... ಆಭರಣಗಳನ್ನ ಹೇರುತ್ತಲೇ ಇದ್ದರು. ಕಳ್ಳರಿಗೆ ಇದಕ್ಕಿ... ಪ್ರಶಸ್ತವಾದ ಜಾಗ ಎಲ್ಲಿ ಸಿಗಬೇಕು ಪಾಪ. ರಾತ್ರೋರಾ... ಉಗ್ರನರಸಿಂಹನ ಎಡಭಾಗದ ಮೇಲಿದ್ದ ಒಡವೇನ... ಎಗರಿಸಿದರು. ಬಲಗಡೆಯ ಭಾಗದ ಒಡವೆಗಳ... ಎಗರಿಸೋಣ ಅಂದರೆ ದೀಪ ಕೈಕೊಟ್ಟಿತಂತೆ! ನವ... ರೆವಿನ್ಯೂ ಅಧಿಕಾರಿಗಳು ಎಷ್ಟು ಜಾಣರು ಅಂತೀ... ಕೋಟ್ಯಂತರ ರೂಪಾಯಿ ಒಡವೆ ಮಾಯ ಆಗಿದ್ದರ... ಅದು ಐದು ಲಕ್ಷ ಮಾತ್ರ ಅಂತ ಬೆಲೆ ಕಟ್ಟಿದರ...

ಅಣಕ

ಎಚ್.ಎಲ್. ಕೇಶವಮೂರ್ತಿ

ಅಪ್ಪಿತಪ್ಪಿ ಕಳ್ಳರು ಸಿಕ್ಕಿದರೆ ತಮ್ಮ ಲೆಕ್ಕಾಚಾರದಪ... ಒಡವೇನ ದೇವರ ಮೇಲೆ ಹಾಕಿ ಮಿಕ್ಕಿದ್ದನ್ನು ತವ... ಹೆಂಡಂದಿರ ಮೇಲೆ ಹಾಕಬಹುದು ಅನ್ನೋದಕ್ಕೆ ಪೂ... ಸಿದ್ಧತೆಯೋ ಏನೋ ಯಾರಿಗೆ ಗೊತ್ತು. ಯಾರ ದೇಹ... ಮೇಲೋ ಏನೋ ಒಡವೆ ಅಂತ ಇರುತ್ತವಲ್ಲ ಅನ್ನೋ... ಸಮಾಧಾನ!

ಒಡವೆ ಮನೆ ಹಾಳಾಗಲಿ. ಈಗ ಪ್ರಶ್ನೆ ಏ... ಅಂದರೆ ಕಳ್ಳತನ ಮಾಡಿದವರು ಯಾವ ಜಾತಿಯವರು... ಬ್ರಾಹ್ಮಣರಾಗಿದ್ದರೆ ಪರವಾಗಿಲ್ಲ, ಯಾವುದೋ ಶೂ... ಮುಂಡೇವು ಆಗಿದ್ದರೇನು ಗತಿ? ಅದಕ್ಕೆ ತಕ್ಕ ಪು... ಮಾಡಬೇಕಾಗುತ್ತದೆ!

ಇದು ಒಂದು. ಇನ್ನೊಂದು ದೇವರ ಮೈಮೇ... ಒಡವೇನೆ ಇಲ್ಲದ ಮೇಲೆ ಭಕ್ತರಿಗೆ ಕರಿಕಲ್ಲು ಮೂ...

"ಅಂಗಿದೆ, ಹಿಡವಾದಕ್ಕ, ಹಿಗದು ಒಂದೇ ೀವಕಂಚ್ನ. ಇನ್ನೊಂದು ದಟ್ಟೆವಳಗಿದ್ವಕಂಡು ಆಟ ಮುಸ್ಕದೆ" ಎಂದು ಸೀರ ನಕ್ಕ.

"ಊ ಕಣೊ, ಮಾಡೊ ಕ್ಲಸ ಬುಟ್ಟು ಹಸ ೋದ್ವದೆ. ಕಂಟ್ರೋಲ್ ಮಾಡದು ಕಷ್ಟ. ಚೆನ್ನಾಗಿ ಬುಟ್ಟು ಮಾರದೆ ವಳ್ದಿದು" ಎಂದು ಉಗ್ರಿ ವಾಟಿಸ್ನೆ ಖ್ಯಾಹಕ್ಕೆ ತನ್ನೀರೆರಚಿದ.

"ಜಾತ್ರಿಗೆ ದನನೇ ಅಟ್ಟಿಗಂಡೋಗಬೇಕು ಅನ್ನ ೀನೊ. ವಳ್ಳಿ ತಗರುಸಾಕಿ ಮ್ಯರವಣಗೆ ಮಾದಿ ಕೂದ್ರೆ ಬಂಗಾರಿಸಿಗಂಡೋಯ್ತರೆ ಗೊತ್ತೆ?" ಎಂದ ಸೀರ.

"ಅಂಗೆ ನೋಡಿದ್ರೆ ಹಂದಿನೂ ಮ್ಯರವಾಣಗೆ ಮಾಡಿ ಯ್ಯುಬವುದು ಚಿಗಪ್ಪ. ಜಾತ್ರೆಲಿ ಯಾವ ಪದಾರ್ಥ ೋಗದಿಲ್ಲ ಹೇಳು" ಎಂದ ವಾಟಿಸ್ನೆ.

"ಮುಂದಿನ ವರುಸುಕ್ಕೆ ಅಂಗೆ ಮಾಡಿವೆ ತಗಳ್ಳ. ಮಾಯಪ್ಪನತ್ರ ಒಂದು ಹಂದಿಮರಿ ತಗಂಡು ಕು. ಬುಕ್ಕನ ಬ್ಯಟಕ್ಕೆ ತಗಂಡೋಗಿ ಮ್ಯರವಣಗೆ ಾಡಿ ಕೂದು ಮಾರು" ಎಂದು ಜುಮ್ಮಿ ನಕ್ಕಳು.

"ಹಂದಿ ಆದಿಕ ಬ್ಯಾಡ ಕಣಕ್ಕ. ಹಂದಿದ್ರೆ ಕೇರಿಚಂದ ಂತ ಗಾದಿಮಾತೆ ಅದೆ. ಹಂದಿ ಆ ರಂಗನಾಥಸ್ವಾಮಿ, ೂದೇವಿಯ ಎಳಸಕ್ಕೆ ನಿಮ್ಮ ಪರಮಾತ್ಮ ವರಾಹ ವತಾರ ಎತ್ತಿ ಬಂದಿದ್ದ. ಅವುನವುತಾರ ಎತ್ತದೆಯಿದ್ರೆ ವತ್ತು ನೀವೆಲ್ಲಿರತಿದ್ರಿ? ನಾನು ಇದೇ ಮಾತ ಆ ಂಜಯ್ಯನಿಗೂ, ಜಯರಾಮನಿಗೂ ಹೇಳಿವೆ. ದೇವ ಗೆ ಗೌರವ ಕೊಡೋ ನೀವು ಹಂದಿಗೂ ಕೊಡಬೇಕು. ಂಗೆ ಹಂದಿ ತಿನ್ನೊರಿಗೂ ರೆಸ್‌ಪೆಕ್ಟ್ ಕೊಡಬೇಕು ಂತವ."

"ಕೊಡನ ತಗಳ್ಳ. ಯಲ್ಲ ದನಕರ ವಡಕಂಡು ಾತ್ರಿಗೋಗಿ ಬಂದ್ರೆ ನೀನು ಸುಮ್ನೆ ಹೋಗಿ ಬಂದಿರದು ೋಡು."

"ಅಕ್ಕ ನಾನು ಹೋಗಿ ಬಂದಿದ್ದೇನೂ ವೇಸ್ಟಾಗಿಲ್ಲ ಣಕ್ಕ. ಮನುಸನಿಗೆ ಎಕ್ಸ್‌ಪೀರಿಯನ್ಸ್ ಮುಕ್ಯ. ಅಂಗೆ ್ರಪು ಭಾಳ ಮುಖ್ಯ. ಆ ಜಾತ್ರೆಲಿ ಯಲ್ಲಾ ಜನಗಳು ಡಿ ಮಗ್ಗಲ್ಲಿ ವಲೆ ಹಾಯ್ಕಂಡು, ಅನ್ನ ಮಾಡಿಕೊಂಡು, ಟನ್ ಸಾರು ಮಾಡಿ, ರಾಜಾ ವಿಸ್ಕಿ, ಓಲ್ಡ್‌ಮಂಕ್, ಂ.ಸಿ. ಬ್ರಾಂಡಿ ತರಿಸಿಗಂಡು ಊಟ ಮಾಡ್ತ ಕುಂತಿದ್ರಲ್ಲಾ, ದೃಶ್ಯ ನೋಡಕ್ಕೆ ಒಂದು ಚಂದ ಕಣಕ್ಕ. ಈ ಟೀವಿ ್ಲಲಿಪ್ ಪೆಲೋಗಳು ಅದೂ ಇದು ತೋರಿ ಅಸಿಸಿ ಅನ್ನಿಸಿಗಳಿದಕಿಂತ ಆ ದೃಶ್ಯ ತಂದು ತೋರಬೇಕು. ಅದು ಬುಟ್ಟು ಅವ್ರುನ್ಯಾರೊ ಸ್ವಾಮಿ ಕೋದು ಮುರುಕ ಮೋಟು ಬಗ್ರಿ ದನ ಮುಂದಿಕಂದಿರದ್ನೆ ತೋರತವಲ್ಲ, ಇಟೀಸ್ ಸೇಂ ಟು ಅವರ್ ಕಂಟ್ರಿ ಲೈಫ್."

"ಜಾತ್ರೆಲಿ ಕುಡದಿರದು ಇನ್ನು ಇಳದಿಲ್ಲ ಅನ್ನಂಗೆ ಕಾಣ್ತದೆ."

"ಜಾತ್ರೆಲಿ ಕುಡಿಲಿ, ಸಂತೆಲೆ ಕುಡಿಲಿ, ನನ್ನ ಮಾತು ಚೇಂಜಾದಲ್ಲ ಕಣಕ್ಕ."

"ಯಾವ ಪಾರ್ಟಿ ಸೇರನಾ ಅಂತ ಇದ್ದೀ?"

"ಇನ್ನು ಡಿಸೈಡ್ ಮಾಡಿಲ್ಲ, ಅಂತ ಎಂ.ಪಿ. ಪ್ರಕಾಶ್ ಕನ್‌ಪೀಜಾಗಿ ಕುಂತವ್ರುರೆ, ಇನ್ನ ನಂದ್ಯಾವ ಲೆಕ್ಕ?"

"ಆ ಬಂಗಾರಪ್ಪನ ಪಾರ್ಟಿಗಾರ ಹೋಗೊ. ಯಂಗಿದ್ರು ನಿನ್ನ ಹಳೇ ಗುರು, ಸೇರಿಸಿಗಂಡು ಯಾರದಾರ ಜವಾಬ್ದಾರಿ ಕೊಡ್ತನೆ."

"ಕೊಡ್ತನೆ, ಅದರಲ್ಲೇನು ಡವುಟಿಲ್ಲ. ಆದ್ರು ಬಂಗಾರಪ್ಪನಿಗೆ ಏಜಾಯ್ತು ಕಣೊ ಉಗ್ರಿ. ಅವುನಿವತ್ತು ಜಾತ್ರಿಗ್ಬಡದು ಮಾರೊ ತರ ಇಲ್ಲ, ಇಲ್ಲೇ ಊರ ಮುಂದೆ ಯಾಪಾರಾಗೊ ಮುದಿಯೆತ್ತಿನಂಗವುನೆ."

"ದ್ಯಾವೇಗೌಡನೂ ಮುದಿಯೆತ್ತಲವೇನೋ?"

"ಅವುನು ಮುದಿಯೆತ್ತೆಯಾ. ಆದ್ರು ಒಂದಿಷ್ಟು ಮೈಕೈ ತುಂಬಿಕಂಡವುನೆ. ತಿರಗ ಪಾರ್ಟಿ ಪವರ್‍ರಿಗೆ ತಂದು ರೇವಣ್ಣನ್ನ ಮುಖ್ಯಮಂತ್ರಿ ಮಾಡೇ ಮಾಡ್ತಿನಿ ಅಂತ ವಂಟವುನೆ. ಅಂತೂ ಅವುನ ಪಾರ್ಟಿ ಇವತ್ತು ಹಾಳೂರು ತರ ಆಗ್ಯದೆ. ಅದಿನ್ನು ಅವುನಿಗೆ ಗೊತ್ತಾಗಿಲ್ಲ. ಲಲ್ತಾನಾಯಕಿ ಹೋಗಿ ಆಗ್ಲೆ ಬಂಗಾರಪ್ಪನ ಪಾರ್ಟಿ ಸೇರಿಕತ್ತು. ಯಾರೋದ್ರು ಕೇರ್ ಮಾಡ್ತಯಿಲ್ಲ ದ್ಯಾವೇಗೌಡ."

"ಲಲ್ತಾನಾಯ್ಕಿಗೇನು ಬತ್ತೂ, ಹೋಗಿ ಹೋಗಿ ಬಂಗಾರಿ ಪಾರ್ಟಿ ಸೇರಿದಳಲ್ಲಾ?"

"ಯಾವ ಪಾರ್ಟಿನೂ ಸೇರಿಸಲಿಲ್ಲ ಹೋದ್ಲತ್ತಗೆ."

"ಅದ್ಯಾಕ್ ಸೇರಿಸಲಿಲ್ಲಾ?"

"ಹೋದೇಟಿಗೆ ಜವಾಬ್ದಾರಿ ಕೇಳಿದ್ರೆ ಯಾರು ಕೊಡ್ತರೆ? ಯಾವ ಜವಾಬ್ದಾರಿನೂ ಇಲ್ದೆಯಿರೊ ಬಂಗಾರಿ ಪಾರ್ಟಿಗೋದ್ಲು, ಹಿಟ್ಟೂ ಹಳಸಿತ್ತು ನಾಯ್ಯೂ ಹಸದಿತ್ತು ಅನ್ನಂಗಾಯ್ತು." ■

ಕ್ತಿ ಹುಟ್ಟಿಸುತ್ತಾನೆಯೇ? ತಾತ್ಕಾಲಿಕವಾಗಿಯಾದರೂ ೀವರಿಗೆ ಕೃತಕ ಆಭರಣಗಳನ್ನು ತೊಡಿಸಬೇಕು!

ಅಲ್ಲಿಯವರೆವಿಗೆ ಉಗ್ರ ನರಸಿಂಹನ ದರ್ಶನ ಭಾಗ್ಯ ಕ್ತರಿಗೆ ಇಲ್ಲ!

ಮುಂದೆ ಏನು ಮಾಡಬೇಕು?

ಬಿಗಿಭದ್ರತೆ ಒದಗಿಸಬೇಕು

ಯಾಕಾಗಿ ಈ ಭದ್ರತೆ?

ಭಕ್ತರ ಭಕ್ತಿ ಕಾಪಾಡಲು!

ಅದೂ ನಿಜವೆ. ದೇವರು ತನ್ನ ಒಡವೇನೇ ಕಾಪಾಡಿ ಕೊಳ್ಳಲು ಸಾಧ್ಯವಾಗಲಿಲ್ಲ ಅಂದರೆ ತನ್ನ ಭಕ್ತರನ್ನೇನು ಪಾಡಾನು ಅನ್ನೊ ಭಾವನೆ ಜನರಲ್ಲಿ ಬೆಳೆಯಬಾರದಲ್ಲ! ಉಗ್ರನರಸಿಂಹ ದೇವರು ತನ್ನ ಘನತೆ ಕಾಪಾಡಿ ಕೊಳ್ಳಲು ಬಿಗಿ ಭದ್ರತೆ ಏರ್ಪಡಿಸಿಕೊಳ್ಳಬೇಕು!

* * * * *

ದಯಾಮಯನಾದ ಪರಮಾತ್ಮ ಕೃಷ್ಣಾವತಾರ ಎತ್ತಿದ. ಶುಪಾಲ, ದಂತವಕ್ರರನ್ನು ಕೊಂದ. ತನ್ನ ಲೀಲೆಗಳನ್ನು ಗಜ್ಜಾಹೀರು ಮಾಡಿದ. ಸರ್ವಾಂತರ್ಯಾಮಿ ಅನ್ನಿಸಿ ೊಂಡು ಉಡುಪಿಯ ಕೃಷ್ಣ ದೇವಾಲಯದಲ್ಲಿ ಬಂಧಿ ದ!

ಇದರಲ್ಲೇನು ತಪ್ಪಿದೆ. ಪೂಜಿಸಲು ಒಂದು ಮೂರ್ತಿ ೂಪ, ಅದನ್ನು ಇಡಲು ಒಂದು ದೇವಾಲಯ ರಬೇಕಲ್ಲ ಎಂಬುದು ಕೆಲವರ ವಾದ. ಇರಲಿ.

ಪೂಜೆಗೈಯ್ಯುವವರು ಯಾರು?

ಇನ್ಯಾರು? ಅಷ್ಟಮಠದ ಯತಿಗಳು. ಪರ್ಯಾಯ ಾಗಿ. ಈಗ ಈ ಪರ್ಯಾಯವೇ ದಿನಪತ್ರಿಕೆಗಳ ೈನಿಕ ಧಾರಾವಾಹಿ!

ಈ ಸಲದ ಪರ್ಯಾಯದ ಪೂಜೆ ಯಾರು ಯ್ಯಬೇಕು?

ನ್ಯಾಯಾಲಯ ನಿರ್ಧರಿಸಲಿ!

ಅಯ್ಯೋ, ಕೃಷ್ಣನ ಕಥೆ.

ಈಗ ಪರಮಾತ್ಮ ಒಂದು ತೀರ್ಮಾನ ತೆಗೆದುಕೊಳ್ಳ ಬೇಕು. ಸರಿಯಾದ ತೀರ್ಪು ನೀಡಲು ನ್ಯಾಯಾಧೀಶರು ನನ್ನು ಹಾರಬೇಕು. ಅದರ ಹೊಣೆಗಾರಿಕೆ ಕೃಷ್ಣನ ೀಲೆ!

ಇದು ಒಂದು ಕಡೆ. ಇನ್ನೊಂದು ಕಡೆ ಆರು ಯತಿ ಶ್ರೇಷ್ಠರಿಂದ ತನ್ನ ಎದುರೇ ಯಾಗ ನಡೆಯುತ್ತಿದೆ. ಮನಸ್ಸನ್ನು ಪರಿವರ್ತಿಸುವ ಯಾಗ ಅದು.

ಯಾರ ಮನ ಪರಿವರ್ತನೆಯಾಗಬೇಕಾಗಿದೆ?

ಪುತ್ತಿಗೆ ಶ್ರೀಗಳದ್ದು!

ಈ ಮನ ಪರಿವರ್ತನೆಯ ಜವಾಬ್ದಾರಿಯೂ ಕೃಷ್ಣನ ಮೇಲೆ!

ಯಾಗದಿಂದಲೂ ಇದು ಸಾಧ್ಯವಾಗಲಿಲ್ಲ ಎನ್ನಿ. ಮುಂದೇನು?

ಆರು ಯತಿ ಶ್ರೇಷ್ಠರಿಂದ ಉಪವಾಸ ಸತ್ಯಾಗ್ರಹ!

ಪುತ್ತಿಗೆ ಶ್ರೀಯವರ ಮೊಂಡುತನದಿಂದಾಗಿ ಆರು ಜನ ಯತಿ ಶ್ರೇಷ್ಠರು ಇಹಲೋಕವನ್ನು ತ್ಯಜಿಸುವ ಸ್ಥಿತಿ ಉದ್ಭವಿಸಿದರೆ! ದೇಶಕ್ಕೆ ಅಪಾಯ ಕಾದಿಟ್ಟದ್ದು!

ನಮ್ಮೆಲ್ಲರ ಭವಿಷ್ಯದ ಹಿತಕ್ಕಾಗಿ ಯತಿ ಶ್ರೇಷ್ಠರಿಗೆ ಇಂತಹ ದುರ್ಗತಿ ಬಾರದಿರಲೆಂದು ಆ ಮಠಗಳ ಭಕ್ತರು ಶ್ರಮಿಸುವುದು ಖಂಡಿತ!

ಪರ್ಯಾಯದ ಜಗಳ ತೀರ್ಮಾನಕ್ಕೆ ಒಂದು ಸಲಹೆ.

ಕಾಲ ಬದಲಾಗಿದೆ. ಇದು ಹೊಡಿ ಬಡಿ ಯುಗ.

ಹಿಂದೆ ಧರ್ಮಯುದ್ಧ ಮಾಡಲೇಬೇಕಾದ ಪ್ರಸಂಗ ಬಂದಾಗ ರಾಜರುಗಳು ಒಂದು ತೀರ್ಮಾನಕ್ಕೆ ಬರುತ್ತಿದ್ದರು. ನಮ್ಮಿಬ್ಬರ ಜಗಳದಲ್ಲಿ ಅಮಾಯಕ ಸೈನಿಕರು ಬಲಿಯಾಗಬಾರದು. ನಾವಿಬ್ಬರೇ ಕಾದಾಡೋಣ. ಜಯಾಪಜಯಗಳನ್ನು ನಿರ್ಧರಿಸೋಣ ಎಂಬ ಒಪ್ಪಂದಕ್ಕೆ ಬರುತ್ತಿದ್ದರಂತೆ. ಈ ಪದ್ಧತಿಯನ್ನೇ ಇಲ್ಲೂ ಅನುಸರಿಸಿದರೆ ಹೇಗೆ? ಇದು ಹೇಗೆಂದರೆ....?

ಕೋರ್ಟು ಕಚೇರಿ ಹತ್ತುವುದು, ಉಪವಾಸ ಸತ್ಯಾಗ್ರಹ ಹೂಡುವುದು, ಮಾಧ್ಯಮ ಹೇಳಿಕಾ ಸಮರ ಇವನ್ನೆಲ್ಲ ಬಿಡಿ. ರಥದ ಬೀದಿಯೇ ಅಖಾಡವಾಗಲಿ. ಪರ್ಯಾಯ ಪರ, ವಿರೋಧಿ ಯತಿಗಳ ನಡುವೆ ಕುಸ್ತಿ ಏರ್ಪಡಾಗಲಿ. ವಿರೋಧಿಯತಿಗಳ ಪರವಾಗಿ ಪೇಜಾವರ ಶ್ರೀಗಳೂ ಪರ ಯತಿಗಳ ಪರವಾಗಿ ಪುತ್ತಿಗೆ ಶ್ರೀಗಳೂ ಅಖಾಡಕ್ಕಿಳಿಯಲಿ. ಜಯಾಪಜಯ ನಿರ್ಧರಿಸಲಿ! QED ಅಲ್ಲವಾ.... ■

ಮರೆಯುವ ಮುನ್ನ



ಪಿ. ಲಂಕೇಶ್

ಆಗಸ್ಟ್ 20, 1989

ಛಲವಂತೆ, ಚೆಲುವೆ

ಈಗ ಈಕೆಯ ಮೇಲೆ ಎಲ್ಲರ ಕಣ್ಣು-ಎತ್ತರಕ್ಕೆ ದಢೂತಿಯಾಗಿರುವ ಈ ಹೆಂಗಸಿನಲ್ಲಿ ಅದ್ಭುತಗಳನ್ನು ಜನ ಕಾಣತೊಡಗಿದ್ದಾರೆ. ಅವರಿಗೆ ಈಕೆ ಕೂತರೊಂದು ಚೆಂದ, ನಿಂತರೊಂದು ಚೆಂದ. ಮೊನ್ನೆಮೊನ್ನೆಯವರೆಗೆ ಅನಾಮಿಕೆಯಾಗಿದ್ದ, ತಮಾಷೆಗಳಿಗೆ ಗುರಿಯಾಗುತ್ತಿದ್ದ ಈಕೆ ಈಗ ಸರೀಕರೆದುರು ತಲೆಯೆತ್ತಿ ನಡೆವ, ಜಗತ್ತಿನ ಬಲಶಾಲಿ ರಾಷ್ಟ್ರವೊಂದಕ್ಕೆ ನಾಯಕಿಯಾಗಬಹುದಾದ ಮಹಿಳೆ. ಅರವತ್ತು ವಯಸ್ಸಿನ ಅವಿವಾಹಿತೆ, ಸಮಾಜವಾದಿ ಪಕ್ಷದ ಧುರೀಣೆ. ಗಟ್ಟಿ ಧ್ವನಿಯ, ದಿಟ್ಟ ನಡೆನುಡಿಯ ಈಕೆಯ ಹೆಸರು ತಕಾಕೋ ದಾಯ್.



ಜಪಾನ್ ರಾಜಕೀಯ ಹೊಲಸೆದ್ದು ಹೋಗಿದೆ. ನಮ್ಮಲ್ಲಿನಂತೆಯೇ ಭ್ರಷ್ಟತೆಯಲ್ಲಿ ಗಬ್ಬಾಗಿರುವ ರಾಜಕಾರಣಿಗಳು, ನಮ್ಮಲ್ಲಿ ಕಾಂಗ್ರೆ ಹೆಚ್ಚುಕಮ್ಮಿ ನಾಲ್ಕು ದಶಕಗಳ ಕಾಲ ಆಡಳಿತ ನಡೆಸಿದಂತೆಯೇ ಜಪಾನಿನ ಲಿಬರಲ್ ಡೆಮಾಕ್ರಟಿಕ್ ಪಾರ್ಟಿ (ಎಲ್‌ಡಿಪಿ) ನಿರಂತರವಾಗಿ ರಾಜ್ಯಭಾರ ನಡೆಸಿದ ರಾಜಕೀಯದಲ್ಲಿ ವಿರೋಧವನ್ನೇ ಕಾಣದೆ ಕೊಬ್ಬಿ ಹೋಗಿದ್ದಾರೆ. ಮೊನ್ನೆ ವ್ಯಭಿಚಾರ, ಭ್ರಷ್ಟತೆಯ ಕೆಟ್ಟ ಹೆಸರು ಪಡೆದು ಇಬ್ಬರು ಪ್ರಧಾನಿಗಳು ಒದ್ದೋಡಿಸಲ್ಪಟ್ಟರು. ಮೇಲ್ಮನೆಗೆ ಮೊನ್ನೆ ನಡೆದ ಚುನಾವಣೆಯಲ್ಲಿ ಎಂದೂ ಗೆಲುವನ್ನೇ ಕಾಣದಿದ್ದ ಶ್ರೀಮತಿ ದಾಯ್ ನೇತೃತ್ವದ ಸೋಷಲಿಸ್ಟ್ ಪಕ್ಷ 46 ಸ್ಥಾನ ಗಳಿಸಿ ಅದ್ಭುತ ಜಯ ಗಳಿಸಿತು. ಎಲ್‌ಡಿಪಿಗೆ 36 ಸ್ಥಾನ ದೊರೆತವು. ಈ ವರ್ಷದ ಕೊನೆಯಲ್ಲಿ ಜಪಾನಿನ ಪಾರ್ಲಿಮೆಂಟಿಗೆ ಚುನಾವಣೆ ನಡೆಯಲಿದೆ. ಅದು ಐತಿಹಾಸಿಕ ಚುನಾವಣೆ ಎನ್ನಿಸುವ ಎಲ್ಲ ಲಕ್ಷಣಗಳಿವೆ. ಜಪಾನಿನ ಮಹಿಳೆ ಜಾಗ್ರತಳಾಗಿದ್ದಾಳೆ. ದಡ್ಡುಗಟ್ಟಿರುವ ಎಲ್‌ಡಿಪಿ ವಿರುದ್ಧ ಗೃಹಿಣಿಯರು ಎದ್ದು ನಿಂತು ಪ್ರತಿಭಟಿಸ ತೊಡಗಿದ್ದಾರೆ. ದಾಯ್ ಇವರೆಲ್ಲರ ಆಯಸ್ಕಾಂತ ಬಿಂದು.


ದಾಯ್ ಚಿಕ್ಕವಳಿದ್ದಾಗಲೇ ನಾಯಕತ್ವದ ಗುಣ ಪಡೆದಿದ್ದಳು. ಒಮ್ಮೆ ಈಕೆ ತನ್ನ ನಗರವಾದ ಕೋಬೆಯ ಮೇಯರನ್ನು ಕಂಡು ಬರಲಿರುವ ಚುನಾವಣೆಗೆ ನಾಮಪತ್ರ ಸಲ್ಲಿಸಲು ಹೋಗಿದ್ದಳು. ಆಗ ಆತ ಕೊಬ್ಬಿನಿಂದ ಮಾತಾಡಿದ: "ನೀವು ಗೆಲ್ಲುವ ಸಂಭವವೇ ಇಲ್ಲದಿದ್ದಾಗ ಸ್ಪರ್ಧಿಸುತ್ತಿರುವುದೇ ಮೂರ್ಖತನ ಅನ್ನಿಸುವುದಿಲ್ಲವೆ?" ಎಂದು ಆಕೆಯನ್ನು ಕೇಳಿದ.

ಆಗ ದಾಯ್ ಹೇಳಿದಳು: "ಇಲ್ಲಿ, ಇದೇ ಕ್ಷಣದಲ್ಲಿ ನಿರ್ಧರಿಸಿದ್ದೇನೆ. ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದೇ ಗೆಲ್ಲುತ್ತೇನೆ!"

ದಾಯ್ ಹೋರಾಡಿ ಗೆದ್ದಳು. ಅಷ್ಟೇ ಅಲ್ಲ, ಕಳೆದ ಇಪ್ಪತ್ತು ವರ್ಷದಿಂದ ಒಮ್ಮೆಯೂ ಈಕೆ ಚುನಾವಣೆಯಲ್ಲಿ ಸೋತಿಲ್ಲ. ಮೇಲಾಗಿ ಈಕೆ ಉತ್ಸಾಹದ ಚಿಲುಮೆಯಂತೆ ಕಾಣುತ್ತಾಳೆ. ಮೊನ್ನೆ ಈಕೆಯ ವಿರೋಧಿಯೊಬ್ಬ ಹೇಳಿದ, "ಈಚೆಗೆ ಈ ದಾಯ್ ಎಷ್ಟು ಚೆನ್ನಾಗಿದ್ದಾಳೆ-ಮೊನ್ನೆ ನಾನು ಆಕೆಯ ಕೈಕುಲುಕಿದೆ. ಈಗನ್ನಿಸ್ತಿದೆ, ಆಕೆಯನ್ನು ಆಲಂಗಿಸಿ ಮುತ್ತು ಕೊಡಬೇಕಾಗಿತ್ತು ಅಂತ!" ಅಂದ. ಈ ಮುತ್ತು, ಆಲಿಂಗನದಿಂದ ಎಲ್‌ಡಿಪಿ ಪಕ್ಷಕ್ಕೆ ಆಗಿರುವುದನ್ನು ನೆನೆದು ಆತ ಸುಮ್ಮನಾದ!

ಬರಲಿರುವ ಚುನಾವಣೆಯಲ್ಲಿ ಸಮಾಜವಾದಿಗಳು ಗೆದ್ದರೂ, ಸೋತರೂ ಜಪಾನ್ ಈ ಪ್ರಚಂಡೆ ದಾಯ್‌ಳನ್ನು ನೆನೆಯುತ್ತಲೇ ಇರುವ ಸಂಭವ ಉಂಟಾಗಿದೆ.

ಬೇಂದ್ರೆ



ಇದೊಂದು ಚಿಕ್ಕ, ಕೆಟ್ಟ ಪುಸ್ತಕ. ಈ ಪುಸ್ತಕ ದ.ರಾ. ಬೇಂದ್ರೆಯವರನ್ನು ಕುರಿತದ್ದು. ಇಡೀ ಪುಸ್ತಕ ಓದಿದರೂ ಬೇಂದ್ರೆಯವರ ಬಗ್ಗೆ ಹೊಸತೇನೂ ಇದರಲ್ಲಿ ಸಿಕ್ಕುವುದಿಲ್ಲ, ಇತ್ತೀಚೆಗೆ ಬೇಂದ್ರೆ ಕುರಿತು ಹೊರಬಂದ ಪುಸ್ತಕವಾದ್ದರಿಂದ ಪೂರ್ತಿ ಓದಿದೆ. ಬೇಂದ್ರೆ ಎಂಥ ಸಂಕೀರ್ಣ ವ್ಯಕ್ತಿಯೆಂದರೆ ಈ ಪುಸ್ತಕದಲ್ಲೂ ಅಲ್ಲಲ್ಲಿ ತಮ್ಮ ಬಣ್ಣ ಚೆಲ್ಲುತ್ತಾರೆ. ಒಮ್ಮೆ ಮರಾಠಿ ಜನ ಪೂನಾದಲ್ಲಿ ಒಂದು ಸಭೆ ಏರ್ಪಡಿಸಿದ್ದರು. ಮರಾಠಿ ಪುಸ್ತಕವೊಂದರ ಬಿಡುಗಡೆ ಮಾಡುವುದು ಬೇಂದ್ರೆಯವರ ಅಂದಿನ ಕೆಲಸ. ಒಬ್ಬರು ಆ ಮರಾಠಿ ಪುಸ್ತಕವನ್ನು ಕನ್ನಡಕ್ಕೆ ಅನುವಾದಿಸಿ ಬೇಂದ್ರೆಯವರಿಗೆ ಅರ್ಪಿಸಬೇಕೆಂದು ಸೂಚಿಸಿದರು. ಹಿಂದೆ ಇಂಥದೇ ವಿಷಯದಲ್ಲಿ ನಿರಾಶರಾಗಿದ್ದ ಬೇಂದ್ರೆ ತಮ್ಮ ಭಾಷಣದಲ್ಲಿ ಗುಡುಗಿದರು: "ನನ್ನ ಭಾಷಣ ಮಾಲೆಯನ್ನೂ ಪುಸ್ತಕ ರೂಪದಲ್ಲಿ ತರ್ತೇವೆ ಅಂತ ಇವರು ಹೇಳಿ ನಾಲ್ಕೈದು ವರ್ಷ ಆಯ್ತು. ಈ ಬೋಸುಡಿ ಮಕ್ಕಳ ಮಾತನ್ನೆಲ್ಲ ನಂಬಬೇಡಿ, ಇವರು ಲುಚ್ಚಾ ಜನರಿದ್ದಾರೆ!"

ಇನ್ನೊಂದು ಕಡೆ ಬೇಂದ್ರೆ "ಬದುಕು", "ಬಾಳು" ಪದಗಳ ವ್ಯತ್ಯಾಸ ಗುರುತಿಸುತ್ತಾರೆ. ನಮ್ಮಷ್ಟಕ್ಕೆ ನಾವು ಬದುಕುವುದು ನಿಜವಾದ ಜೀವನವಲ್ಲ; ಅದು ಒಂಟಿ ಜೀವನ; ಸ್ವಾರ್ಥದ ಬದುಕು. ಇನ್ನೊಬ್ಬರೊಂದಿಗೆ ಬಾಳುವುದು, ಅವರೊಂದಿಗೆ ಪ್ರೀತಿ, ವಿಶ್ವಾಸ, ಸಿಟ್ಟು, ಸೆಡವಿನೊಂದಿಗೆ ಜೀವಿಸುವುದು ನಿಜವಾದ ಬಾಳು.

ಕ್ರಾಂತಿಯಿಂದ ಕ್ರಾಂತಿಗೆ



ಒಮ್ಮೆ ಇದೇ ಅಂಕಣದಲ್ಲಿ ಆಂಡ್ರೇಜ್ ವಾಜ್ಡಾ ಬಗ್ಗೆ ಟಿಪ್ಪಣಿ ಮಾಡಿದ್ದೆ, ನಿಮಗೆ ನೆನಪಿರಬಹುದು. ಈತ ಪೋಲೆಂಡಿನ ಸಿನಿಮಾ ನಿರ್ದೇಶಕ; Diamonds and Ashes (ವಜ್ರಗಳು ಮತ್ತು ಬೂದಿಗಳು) ಎಂಬ ಚಿತ್ರ ಮಾಡಿ ಪೋಲೆಂಡಿನ ಕಮ್ಯುನಿಸ್ಟ್ ಕ್ರಾಂತಿಯ ಆಳದ ತಳಮಳವನ್ನು ಹೇಳಿದ ಮನುಷ್ಯನೀತ. ಆ ಚಿತ್ರದಲ್ಲಿ ಕ್ರಾಂತಿ ವಿರೋಧಿಗಳು ಕ್ರಾಂತಿಕಾರರನ್ನ ಕೊಲ್ಲಲು ಯತ್ನಿಸುವ ಚಿತ್ರಣವಿದೆ. ಅದಕ್ಕಿಂತ ಹೆಚ್ಚಾಗಿ ಉಗ್ರಗಾಮಿಯೊಬ್ಬ ತನ್ನ ರಕ್ತಪಾತದ ಕ್ರಿಯೆಯಿಂದ ಕೆಲವು ಗಂಟೆ ವಿರಾಮ ಪಡೆದು ಸುಂದರ ಹೆಣ್ಣೊಬ್ಬಳ ಜೊತೆಗೆ ಪಡೆವ ಗಾಢ ಸಂತೋಷದ ಘಟನೆ ಇದೆ.

ಇತ್ತೀಚೆಗೆ ಪೋಲೆಂಡ್ ತನ್ನ ಕಮ್ಯುನಿಸ್ಟ್ ಕ್ರಾಂತಿಯ ಗುಂಗಿನಿಂದ ಹೊರಬರುತ್ತಿದೆ-ಗರ್ ಬಚೋವ್ ಅವರ ಮುಕ್ತ ಸಮಾಜದ ಕನಸು ಪೋಲೆಂಡನ್ನು ಆಕರ್ಷಿಸಿದೆ. ಇದು 1981 ರಲ್ಲೇ ಆರಂಭವಾಯಿತು. ಕಾರ್ಮಿಕರ ಆಂದೋಲನದ ಸಾಲಿಡ್ಯಾರಿಟಿ ಎಂಬ ಸಂಘಟನೆಯಾಯಿತು; ವಾಜ್ಡಾ ತರಹದ ನಿರ್ದೇಶಕರಿಗೆ ಸ್ವಲ್ಪ ಸ್ವಾತಂತ್ರ್ಯ ದೊರೆಯಿತು. ವಾಜ್ಡಾ ಈ ಸಲ ಒಂದು ಚಿತ್ರ ಮಾಡಿದ. 'ವಜ್ರಗಳು ಮತ್ತು ಬೂದಿಗಳು' ಮಾಡಿದಾಗಲೇ ಎತ್ತಿಕೊಂಡಿದ್ದ ಒಂದು ಕತೆಯ ಮುಂದಿನ ಕತೆ ಎತ್ತಿಕೊಂಡ; ಇಟ್ಟಿಗೆ ಕೆಲಸದವನ ಮಗನೊಬ್ಬ ಕಾರ್ಮಿಕ ನಾಯಕನಾಗಿ ಪೋಲೆಂಡಿನ ಜೀವನಕ್ಕೆ ಹೊಸ ಜೀವ ತರುವುದನ್ನು ವರ್ಣಿಸಿದ. ನನ್ನನ್ನು ಎಲ್ಲಕ್ಕಿಂತ ಹೆಚ್ಚು ಅಚ್ಚರಿಗೊಳಿಸುವುದು ಈಗ ಅರವತ್ತನಾಲ್ಕು ವಯಸ್ಸಲ್ಲಿರುವ ವಾಜ್ಡಾ ತನ್ನ ಇಡೀ ಜೀವನವನ್ನು ಕಮ್ಯುನಿಸ್ಟ್ ಪೋಲೆಂಡಿನಲ್ಲಿ ಕಳೆಯುತ್ತಲೇ ತನ್ನ ಕಲಾತ್ಮಕ ವ್ಯಂಗ್ಯವನ್ನು, ದುರಂತ ಪ್ರಜ್ಞೆಯನ್ನು ಹೊರಹೊಮ್ಮಿಸಿರುವುದು. ಈತ ಕ್ರಾಂತಿಯ ಪರವ್ರೋ, ವಿರೋಧಿಯೋ ಎಂಬುದು ಗೊತ್ತಾಗುವುದಿಲ್ಲ. ಕಮ್ಯುನಿಸ್ಟ್ ಸರ್ಕಾರ ವಾಜ್ಡಾನನ್ನು ಶಿಕ್ಷಿಸಿದೆ, ಗೋಳಾಡಿಸಿದೆ, ಮನ್ನಿಸಿದೆ, ಸನ್ಮಾನಿಸಿದೆ; ಆದರೆ ವಾಜ್ಡಾನ ಪ್ರತಿಭೆ ಮಾತ್ರ ತನ್ನ ವೈಶಿಷ್ಟ್ಯ ಕಳೆದುಕೊಳ್ಳದೆ ಪಲ್ಲವಿಸಿದೆ. ಈತ ಇಟ್ಟಿಗೆ ಕೆಲಸದವನ ಪುತ್ರನ ಬಗ್ಗೆ ಮಾಡಿರುವ 'ಮ್ಯಾನ್ ಆಫ್ ಐರನ್' ಚಿತ್ರ ಕಿಕ್ಕಿರಿದು ತುಂಬಿದ ಚಿತ್ರಮಂದಿರಗಳಲ್ಲಿ ನಡೆದಿದೆ.

‘ಆಮೇಲೆ ಓದಿಕೊಳ್ಳಿ’

‘ಆಮೇಲೆ ಓದಿಕೊಳ್ಳಿ’- ಶ್ರೀನಿವಾಸರಾಜು ಅವರು ನನ್ನೊಡನೆ ಆಡಿದ ಕೊನೆಯ ಮಾತು. ಸಂದರ್ಭ: ನವೆಂಬರ್ 18 ರಂದು ಕನ್ನಡ ಭವನದ ಪಠಶಾಲೆಯಲ್ಲಿ ರಾಜು ಅವರ ಸಂಭಾವನಾ ಗ್ರಂಥ ‘ಅಂತರ್ಜಲ’ ಸಂಪಾದನಾಮಂಡಳಿಯು ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪನವರೊಂದಿಗೆ ಒಂದು ಸಂತೋಷದ ಊಟವನ್ನು ಏರ್ಪಡಿಸಿತ್ತು. ಅಲ್ಲಿಗೆ ತಡವಾಗಿ ಬಂದ ನಾನು ಒಂದು ಕೈಯಲ್ಲಿ ತಟ್ಟೆ ಹಿಡಿದು ಇನ್ನೊಂದು ಕೈಯಲ್ಲಿ ಬಿಸಿಬೇಳೆ ಬಾತ್-ಮೊಸರನ್ನ ತಿನ್ನುತ್ತಿದ್ದೆ. ರಾಜು ಆಗ ಹತ್ತಿರ ಬಂದು ನನ್ನ ಜೇಬಿಗೆ ಪುಟ್ಟ ಪತ್ರ (ಈ ಬರವಣಿಗೆ ಜೊತೆಗಿದೆ)ವೊಂದನ್ನು ಇಟ್ಟರು. ನಾನು ‘ಏನ್ ಸಾರ್?’ ಎಂದೆ. ಅವರು ಮುಗುಳ್ನಗುತ್ತ ‘ಆಮೇಲೆ ಓದಿಕೊಳ್ಳಿ’ ಎಂದು ಜಿಎಸ್‌ಎಸ್ ಬಳಿಗೆ ಹೋದರು. ಅದು ಅವರ ಮಕ್ಕಳಾದ ಸುಗತ ಮತ್ತು ಋತ ಅವರು ನವೆಂಬರ್ 25 ರಂದು ಇನ್ನೊಂದು ಊಟಕ್ಕೆ ಆಮಂತ್ರಿಸುವ ಪತ್ರವಾಗಿತ್ತು. ಆದರೆ ನನಗೆ ಹೋಗಲಾಗಲಿಲ್ಲ. ಇದಾದ 40 ದಿನಗಳಲ್ಲಿ (28.12.2007) ಶ್ರೀನಿವಾಸರಾಜು ನಮ್ಮನ್ನು ಅಗಲುತ್ತಾರೆಂಬ ಕಲ್ಪನೆ ಬರಲಿಕ್ಕೆ ಸಾಧ್ಯವೇ? ಆಮೇಲೆ ಅವರ ಬದುಕಿನ ಪುಟಗಳನ್ನು ಓದಿಕೊಳ್ಳಲು ಪ್ರಯತ್ನಿಸುತ್ತಿದ್ದೇನೆ.

ಅವರ ಸಂಬಂಧವಾದ ಕೆಲವು ನೆನಪುಗಳು ಬಿಚ್ಚಿಕೊಳ್ಳುತ್ತಿವೆ...

* 1976 ಕ್ಕೆ ನನಗೆ ಕೊಳ್ಳೇಗಾಲದಿಂದ ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿಗೆ ವರ್ಗವಾಯಿತು. ಬೆಂಗಳೂರು ವಿ.ವಿ.ದ ಪದವಿ ಪರೀಕ್ಷಾ ಮೌಲ್ಯಮಾಪನ ಸಂದರ್ಭದಲ್ಲಿ (1977) ನಾನು ರಾಜು ಮತ್ತವರ (ಪಿ.ಪಿ)ಪಾರ್ಟಿಯವರನ್ನು ಕಂಡದ್ದು. ಗೆಳೆಯ ರಾಘು ಅವರೊಂದಿಗೆ ಸ್ಕೂಟರ್‌ನಲ್ಲಿ ಅವರು ಬಂದು ಹೋಗುತ್ತಿದ್ದರು. ಕ್ರೈಸ್ತ ಕಾಲೇಜು ಕನ್ನಡ ಸಂಘದ ಪ್ರಕಟಣೆಯನ್ನು ತಂದು ಒಂದು ಡೆಸ್ಕಿನ ಮೇಲಿಟ್ಟು ಮೌಲ್ಯಮಾಪನ ಮಾಡುತ್ತಿದ್ದರು. ಆಗ ಕೊಂಡ ‘ನದಿಯ ಮೇಲಿನ ದಾಳಿ’ (ಕ.ವೆಂ. ರಾಜಗೋಪಾಲ) ಮತ್ತು ‘ಕ್ರಿಸ್ತಾಂಜಲಿ’ (ಸಂಪಾದಿತ) ನನ್ನ ಬಳಿ ಇವೆ.


ಹಾಗೆ, ಶ್ರೀನಿವಾಸರಾಜು ಬರೆದದ್ದು ಕಡಿಮೆ. ಆದರೆ ಬರೆಸಿದ್ದು, ಪ್ರತಿಭೆಗಳನ್ನು ಅನ್ವೇಷಿಸಿದ್ದು, ಪ್ರಕಟಿಸಿದ್ದು, ಅದನ್ನು ಓದುಗರಿಗೆ ಮುಟ್ಟಿಸಿದ್ದು ಇದೇ ಹೆಚ್ಚು. ಅದು ಅವರಿಗೆ ಒಂದು ವ್ರತವಾಗಿತ್ತು; ಕನ್ನಡ ಸತ್ಯಸಾಕ್ಷಾತ್ಕಾರ.

* ಶ್ರೀನಿವಾಸರಾಜು ಅವರದು ಮೌನಶೀಲ ಬದುಕು-ದೀಪ ಉರಿದಂತೆ. ಆ ಮೌನವೇ ಅವರ ಕೃತಿಗಳ ಜೀವಾಳ. ಅವರು ರಚಿಸಿದ ‘ಮೂಕ ನಾಟಕಗಳಲ್ಲಿ; ಛನಾಲ ಬಂಧು’ ಕವಿತಾ ಸಂಗ್ರಹದಲ್ಲಿ ಅವರ ಮೌನವೇ ಪ್ರಗತಿಶೀಲ ಆಶಯ ಹೊತ್ತು ಅಭಿವ್ಯಕ್ತಿ ಪಡೆದಿದೆ ಎನ್ನಬಹುದು.

* ರಾಜು ಅವರನ್ನು ಸಾಹಿತ್ಯದ ಪರಿಚಾರಕ, ಪುಸ್ತಕ ಜೋಗಿ-ಜಂಗಮ ಇತ್ಯಾದಿ ವಿಶೇಷಣೆಗಳಿಂದ ಕರೆಯಲಾಗಿದೆ. ಕ್ರೈಸ್ತ ಕಾಲೇಜಿನಿಂದ ಅವರು ಹೊರತರುತ್ತಿದ್ದ ಹೊಸ ಕೃತಿಗಳೆಲ್ಲ ಪ್ರತಿಭಾ ಪುರಸ್ಕಾರ ಆಗಿರುತ್ತಿದ್ದವು. ಅದಕ್ಕೆ ಅವರ ಅನ್ವೇಷಣೆ ಸದಾ ನಡೆಯುತ್ತಿತ್ತು. ಅವುಗಳಲ್ಲಿ ಒಂದು:

ನಾನೊಮ್ಮೆ ರಾಜು ಅವರಿಗೆ ಉಪ್ಪಿನಂಗಡಿಯ ಬಿ.ಎಂ. ರಶೀದ್ ಎಂಬ ಬಿ.ಎ. ವಿದ್ಯಾರ್ಥಿ (1992) ಒಳ್ಳೆ ಪದ್ಯ, ಸಣ್ಣ ಕತೆ ಬರೆಯಬಲ್ಲವನಾಗಿದ್ದಾನೆ ಎಂದು ಹೇಳಿ, ಒಂದೆರಡು ಕವಿತೆ, ಒಂದು ಸಣ್ಣಕತೆ (ಪರ್ಯಾಯ) ಗಳನ್ನು ಅವರ ಗಮನಕ್ಕೆ ತಂದಿದ್ದೆ. ಅವರಿಗೆ ಮೆಚ್ಚುಗೆಯಾಗಿರಬೇಕು. 1993 ರಲ್ಲಿ ಸ್ವತಃ ರಾಜು ಅವರೇ ನಮ್ಮ ವಿಜಯನಗರ ಮನೆಗೆ ಪ್ರತ್ಯಕ್ಷರಾಗಿ ‘ಆ ರಶೀದನಲ್ಲಿ ಒಂದು ಸಂಕಲನಕ್ಕಾಗುವಷ್ಟು ಕವಿತೆಗಳಿದ್ದಾರೆ ತರಿಸಿ’ ಎಂದರು. ನಾನು ಅವನಿಗೆ ಬರೆದು ತಿಳಿಸಿದೆ. ಆತ ಪ್ರತಿಕ್ರಿಯಿಸಲಿಲ್ಲ.

ಆ ವಿಕ್ಷಿಪ್ತ ಮನಸ್ಸಿನ ಯುವಕ ಆಗಾಗ ಲಂಕೇಶ್ ಪತ್ರಿಕೆಗೆ ಬರೆಯುತ್ತಿದ್ದ. 2002 ರಲ್ಲಿ ಮಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡುಬಿಟ್ಟ. ಆಮೇಲೆ ಅವನ ಆರು ಕಥೆ, ಹತ್ತು ಕವಿತೆ, ನಾಲ್ಕು ನಾಟಕ, ಸಿನಿಮಾ ಕುರಿತ ಲೇಖನ ಹಾಗೂ ಮೂರು ವಿಶ್ಲೇಷಣಾ ವರದಿಗಳನ್ನು ಸಂಗ್ರಹಿಸಿದ ಆತನ ತಮ್ಮ ವಾರ್ತಾ ಭಾರತೀಯ ಸಹ ಸಂಪಾದಕ ಬಿ.ಎಂ. ಬಷೀರ್ ‘ಪರುಷ ಮಣಿ’ ಎಂಬ ಹೆಸರಿಟ್ಟು ಪ್ರಕಟಿಸಿದ್ದಾರೆ.



* ಶ್ರೀನಿವಾಸರಾಜು ಅವರಿರುವವರೆಗೂ ಕ್ರೈಸ್ತ ಕಾಲೇಜಿನಲ್ಲಿ ವಾರ್ಷಿಕ ಸಾಹಿತ್ಯೋತ್ಸವ ಬೇಂದ್ರೆ ಜನ್ಮ ದಿನಾಂಕ ಜನವರಿ 31 ರಂದು ಜರುಗುತ್ತಿತ್ತು. ಡಾ. ಬೆಸಗರಹಳ್ಳಿ ರಾಮಣ್ಣನವರ ‘ಕೊಳಲು ಮತ್ತು ಖಡ್ಗ’ ಪ್ರಕಟವಾದ ವರ್ಷ 1998. ನಾನೂ ಸಹ ಹೋಗಿದ್ದೆ. ಅವರಿಗೆ ಕಿಡ್ನಿ ಆಪರೇಷನ್ ಆಗಿದ್ದು ಬಹಳ ಆಯಾಸ ಪಡುತ್ತಿದ್ದರು. ‘ಟಾಯ್‌ಲೆಟ್‌ವರೆಗೂ ಸ್ವಲ್ಪ ಜೊತೆ ಬರುವಿರಾ’ ಎಂದು ನನಗೆ ಕರೆದಿದ್ದರು. ನಾನು ರಾಮಣ್ಣನವರನ್ನು ಕಂಡು ಮಾತಾಡಿದ್ದು ಕೂಡ ಇದೇ ಕೊನೆ. ಆಮೇಲೆ ಬೆಸಗರಹಳ್ಳಿಗೆ ಹೋದದ್ದು ಅವರ ‘ಕಾರ್ಯ’ಕ್ಕೇ. ಮತ್ತೆ ಕಾಲ ಸರಿಯುತ್ತಿದೆ ಎಲ್ಲ ನೆನಪಾಗುತ್ತಿದೆ!

* ಇನ್ನೊಂದು ನೆನಪು: ಮಹಾರಾಣಿ ಕಲಾ ಕಾಲೇಜಿನಲ್ಲಿ ಕೇಂದ್ರ ಮೌಲ್ಯಮಾಪನ ನಡೆಯುತ್ತಿದ್ದ ಸಂದರ್ಭ: ನನ್ನ ಬ್ಯಾಚ್‌ನಲ್ಲಿದ್ದ ಲೇಖಕಿ ಶ್ರೀಮತಿ ಮಂಗಳಾಪ್ರಿಯದರ್ಶಿನಿ ಮೇಡಂ ಒಂದೆರಡು ದಿನಗಳ ನಂತರ ‘ನಾನು ಶ್ರೀನಿವಾಸರಾಜು ಅವರ ಬ್ಯಾಚ್‌ಗೆ ಹೋಗಲಾ ಸಾರ್?’ ಎಂದರು. ನಾನು ಯಾವುದೋ ಮೂಡ್‌ನಲ್ಲಿ ‘ಎಲ್ಲಿಗಾದರೂ ಹೋಗಿ’ ಅಂದುಬಿಟ್ಟೆ. ಆಮೇಲೆ ‘ಅಜಾತಶತ್ರು’ ಶ್ರೀನಿವಾಸರಾಜು ಅವರ ಬಗ್ಗೆ ಯೋಚಿಸಿ ‘ಮೇಡಂ ಕೇಳಿದುದರಲ್ಲಿ ವಿಶೇಷವೇನಿಲ್ಲ’ ಎಂದುಕೊಂಡು ರಾಜು ಅವರಿಗೆ ಹೇಳಿದರೆ ಮತ್ತೆ ಮುಗುಳ್ನಕ್ಕರು ಅವರು ಎಂದಿನಂತೆ.

* ದಸರಾ ದಿನಗಳಂದು ತಮ್ಮ ಪತ್ನಿಯಿಂದ ಆರತಿ ಬೆಳಗಿಸಿಕೊಳ್ಳುತ್ತಿದ್ದ ರಾಜು ಸಂಪ್ರದಾಯಶೀಲರಂತೆ ಮೇಲುನೋಟಕ್ಕೆ ಕಂಡುಬರುತ್ತಿದ್ದರೂ ಅವರೊಬ್ಬ ಅದ್ಭುತ ವಿಚಾರವಂತರೆಂಬುದನ್ನು ತಮ್ಮ ಮರಣಪತ್ರದ ಮೂಲಕ ತೋರಿಸಿ ಕೊಟ್ಟು ಹೋಗಿದ್ದಾರೆ ನಮಗೆ.

‘ನನಗೆ ಪ್ರಕೃತಿ ಧರ್ಮಪ್ರಿಯವಾದದ್ದು. ಮಾನವ ನಿರ್ಮಿತ, ಕಾಲಕಾಲಕ್ಕೆ ಬದಲಾಗದ ಯಾವುದೇ ಧರ್ಮದಲ್ಲಿ ನನಗೆ ನಂಬಿಕೆಯಿಲ್ಲ. ಮನುಷ್ಯನು ಮಾನ ಮರ್ಯಾದೆಯಿಂದ ನೆಮ್ಮದಿಯಾಗಿ ಬದುಕುವುದಕ್ಕೆ ಮತ-ಧರ್ಮಗಳ ಊರುಗೋಲಿನ ಆವಶ್ಯಕತೆ ಇಲ್ಲ. ನನ್ನ ದೇಹವನ್ನು ಯಾವುದಾದರೂ ಮೆಡಿಕಲ್ ಕಾಲೇಜಿಗೆ ದಾನ ಮಾಡಿ, ವಿದ್ಯಾರ್ಥಿಗಳಿಗಾದರೂ ಉಪಯೋಗವಾಗಲಿ. ಆನಂತರದ ಧಾರ್ಮಿಕ ಆಚರಣೆಗಳ ಅವಶ್ಯಕತೆ ಇಲ್ಲ’ (ಶ್ರೀನಿವಾಸರಾಜು ಅವರು ತಮ್ಮ ಮಕ್ಕಳಿಗೆ ಬರೆದ ಮರಣ ಪತ್ರದಿಂದ). ಜೊತೆಗೆ ‘ನಿಮ್ಮ ಮಕ್ಕಳನ್ನು ಒಳ್ಳೆಯ ಪ್ರಜೆಗಳನ್ನಾಗಿ ಬೆಳೆಸಿ. ಈ ನಾಡು, ನುಡಿಯ ಗಂಧ-ಗಾಳಿಯ ಅರಿವು ಅವರಿಗಿರಲಿ’ ಎಂದು ಸೂಚಿಸಿ ‘ಕನ್ನಡವೇ ಸತ್ಯ’ವೆಂಬ ಕವಿವಾಣಿಯನ್ನು ಸಾಕಾರಗೊಳಿಸಿದ್ದಾರೆ ಅವರು. ಯಾವ ಧರ್ಮಸಂಹಿತೆ ಇದಕ್ಕಿಂತ ಹೆಚ್ಚಿನದನ್ನು ಹೇಳಬಲ್ಲದು? ಇದು ಕೇವಲ ವಿವೇಕ.

* ಇಷ್ಟಾಗಿಯೂ ನನಗಿಂತ ಒಂದೆರಡು ವರ್ಷ ಕಿರಿಯವರಾಗಿದ್ದ ‘ಚಿರಂಜೀವಿ’ ಶ್ರೀನಿವಾಸರಾಜು ‘ಕ್ರಮ ವಿಪರ್ಯಯ’ ಮಾಡಿ ಹೋಗಿಬಿಟ್ಟರಲ್ಲ ಎಂಬುದು ನನ್ನ ಕಾಡುವ ಪ್ರಶ್ನೆ. ‘ಸ್ವರ್ಗದಲ್ಲಿ ಇಂಥ ಸ್ನೇಹ ಉಂಟೆ?’ (ವಿ.ಸೀ) ಎಂದು ಅವರನ್ನು ಕೇಳಬೇಕೆನಿಸುತ್ತದೆ. ಆದರೆ.....

* ರಾಜು ಅವರಿಗೆ ದ.ರಾ. ಬೇಂದ್ರೆ ಬಹಳ ಪ್ರಿಯವಾದ ಕವಿ. ಆ ಕವಿಯ ಸಾಲುಗಳೇ ಇವರ ಜೀವನಕ್ಕೆ ಆದರ್ಶವಾಗಿದ್ದಂತೆ ತೋರಿಬರುತ್ತದೆ:

“ಹುಸಿನಗುತ ಬಂದೇವ ನಸುಗುತ ಬಾಳೋಣ
ತುಸುನಗುತ ತೆರಳೋಣ
ಯಾಕಾರೆ ಕೆರಳೋಣ!”

ಇಷ್ಟಲ್ಲದೆ ಅಳಿದ ಮೇಲೆ ಉಳಿಯುವುದೇನು? ರಾಜು ಅವರ ಬದುಕಿನ ಪುಟಗಳು ಆಮೇಲಿನ ಓದಿಗಲ್ಲ; ಈಗಲೇ ಓದಬೇಕಾದವು.

■ ಪ್ರೊ. ಶಿವರಾಮಯ್ಯ

ಕನ್ನಡದ ನಿಸ್ವಾರ್ಥ ಸೇವಕ: ಪ್ರೊ. ಚಿ. ಶ್ರೀನಿವಾಸರಾಜು



ಮೊನ್ನೆ ತೀರಿಕೊಂಡ ಪ್ರೊ. ಶ್ರೀನಿವಾಸರಾಜುರವರು ನಾನು ಕ್ರೈಸ್ಟ್ ಕಾಲೇಜಿನಲ್ಲಿ ಪಿಯುಸಿ ಓದುತ್ತಿದ್ದಾಗ ಕನ್ನಡ ಮೇಷ್ಟ್ರಾಗಿದ್ದರು (1980). ಬೆಳಗಾವಿ ಜಿಲ್ಲೆಯ ಕುಗ್ರಾಮವೊಂದರಲ್ಲಿ ಕನ್ನಡ ಮಾಧ್ಯಮ ಓದಿಬಂದಿದ್ದ ನನಗೆ ಕ್ರೈಸ್ಟ್ ಕಾಲೇಜು ಬೇರೆ ಲೋಕದಂತೆ ಕಾಣುತ್ತಿತ್ತು. ಎತ್ತ ನೋಡಿದರೂ ಬಿಳಿಯ ನಿಲುವಂಗಿ ಧರಿಸಿದ್ದ ಫಾದರ್‌ಗಳು ಮತ್ತು ಬಾಸ್ಕೆಟ್‌ಬಾಲ್ ಮೈದಾನಗಳೇ ಕಾಣುತ್ತಿದ್ದವು. ಮಲೆಯಾಳಿಗಳು ಮತ್ತು ತಮಿಳರೇ ತುಂಬಿದ್ದ ಆ ವಾತಾವರಣದಲ್ಲಿ ಕನ್ನಡ ಶಬ್ದಗಳೇ ವಿರಳವಾಗಿದ್ದವು.

ಕಾಲೇಜಿನ ಕಟ್ಟಡದ ಕೊನೆಯ ಮೂಲೆಯೊಂದರಲ್ಲಿ ಕನ್ನಡ ವಿಭಾಗ ಗೂರಲಜ್ಜಿಯಂತೆ ಉಸಿರಾಡುತ್ತಿತ್ತು. ಅದರಲ್ಲಿ ಇದ್ದದ್ದೇ ಇಬ್ಬರು. ಒಬ್ಬರು ಪ್ರೊ. ಶ್ರೀನಿವಾಸರಾಜು ಮತ್ತು ಇನ್ನೊಬ್ಬರು ಡಾ. ಹಾ.ನಂ. ವಿಜಯಕುಮಾರ್ (ಇವರು ಈಗ ವಿಜಯಕುಮಾರ ಮಹಾನುಭಾವಿಗಳೆಂದು ರೂಪಾಂತರಗೊಂಡು ಜೋಗಿನಲ್ಲಿ ಮಠವೊಂದನ್ನು ಕಟ್ಟಿಕೊಂಡಿದ್ದಾರೆ).

ಪಿಯುಸಿಯ ಎಲ್ಲ ವಿಭಾಗಗಳನ್ನು ಸೇರಿಸಿ ಕನ್ನಡವನ್ನು ಆಯ್ಕೆ ಮಾಡಿದ್ದವರು ಸುಮಾರು ಇಪ್ಪತ್ತು ಜನ ಮಾತ್ರ.

ಪ್ರೊ. ರಾಜುರವರು ತ್ರೀಪೀಸ್ ಸೂಟ್ ಧರಿಸಿ ಸದಾ ಗಂಭೀರವಾಗಿರುತ್ತಿದ್ದರು. ಅವರು ಕಲಿಸುವ ವಿಧಾನವೇ ವಿಭಿನ್ನವಾಗಿತ್ತು. ಕನ್ನಡ ಮೇಷ್ಟ್ರುಗಳೆ ಮಹಾನ್ ವಾಕ್ ಪ್ರವೀಣರು, ರಸಿಕ ಶಿಖಾಮಣಿಗಳೆಂದು ಎಣಿಸಿದ್ದ ನನಗೆ, ಮೊದಮೊದಲು ಇವರ ನಿರ್ಭಾವಿ ಬೋಧನಾಕ್ರಮ ನೀರಸವೆನಿಸಿತ್ತು.

ಜೀವನದಲ್ಲಿ ಕನ್ನಡವನ್ನು ಸರಿಯಾಗಿ ಕಲಿಯಲು ಪಿಯುಸಿಯೇ ಕೊನೆಯ ಅವಕಾಶವೆಂದು ಹೇಳಿ, ತಮ್ಮ ಕ್ಲಾಸುಗಳಲ್ಲಿ ನಮ್ಮಿಂದಲೇ ಪಾಠಗಳನ್ನು ಓದಿಸುತ್ತಿದ್ದರು. ಸುಮಾರು ಜನ ಮುಗ್ಗರಿಸುತ್ತಿದ್ದೆವು. ತಪ್ಪಿದಾಗ ಬೇಸರ ಮಾಡಿಕೊಳ್ಳದೇ ತಿದ್ದುತ್ತಿದ್ದರು.

ಪರೀಕ್ಷೆಯಲ್ಲಿ ಗರಿಷ್ಠ ಅಂಕ ಪಡೆದವರಿಗೆ ಬಹುಮಾನವಾಗಿ ಕನ್ನಡ ಪುಸ್ತಕಗಳನ್ನು ಕೊಡುತ್ತಿದ್ದರು. ಹೀಗೆ ನನಗೂ ಒಮ್ಮೆ ‘ಅಕ್ಕ’ ಎಂಬ ಪುಸ್ತಕ ಕೊಟ್ಟಿದ್ದರು.

ಕನ್ನಡೇತರರೇ ತುಂಬಿದ್ದ ಕ್ರೈಸ್ಟ್ ಕಾಲೇಜಿನಲ್ಲಿ ಕನ್ನಡದ ಕಂಪನ್ನು ಹರಡಲು ಸದ್ದಿಲ್ಲದೇ ಯತ್ನಿಸುತ್ತಿದರು. ಕಾಲೇಜಿನ ಸಿಬ್ಬಂದಿಗಳಿಗೆ ಕನ್ನಡ ತರಗತಿಗಳನ್ನು ನಡೆಸಿ, ಸರ್ಟಿಫಿಕೇಟ್ ಕೊಡುತ್ತಿದ್ದರು. ಕನ್ನಡ ಸಂಘ ಸ್ಥಾಪಿಸಿ ಹಲವಾರು ಕಾರ್ಯಕ್ರಮ ಮಾಡುತ್ತಿದ್ದರು.

ಅದು ನನಗೆ ಮತ್ತು ಕರ್ನಾಟಕಕ್ಕೆ ಸಂಕ್ರಮಣದ ಕಾಲವಾಗಿತ್ತು. “ಲಂಕೇಶ್ ಪತ್ರಿಕೆ” ಆಗತಾನೇ ಹುಟ್ಟಿತ್ತು. “ಎಲ್ಲಿಂದಲೋ ಬಂದವರು” ಚಿತ್ರ ಬಿಡುಗಡೆಯಾಗಿತ್ತು. ಲಂಕೇಶರ ಮಹಾನ್ ಅಭಿಮಾನಿಯಾಗಿದ್ದ ಪ್ರೊ. ರಾಜು ಕ್ಲಾಸಿನಲ್ಲಿ ‘ಬೆಂಡೆಕಾಯಿ ಗೊಜ್ಜು V/s ಚಿಕನ್ ಪಲಾವ್’ ಬಗ್ಗೆ ಹೇಳಿದ್ದೇ ಹೇಳಿದ್ದು. ಒಮ್ಮೆ ಅರ್ಧ ಗಂಟೆ ಲಂಕೇಶರ ಸಾಹಿತ್ಯ, ಸಿನಿಮಾ ಮತ್ತು ನಿಷ್ಠುರ ವ್ಯಕ್ತಿತ್ವದ ಬಗ್ಗೆ ಮಾತಾಡಿದ್ದರು. “ಕರಿಯವ್ವನ ಗುಡಿ”, “ಕೆಂಪಾದ ಹೂಗಳು” ಅವರ ಮನಸ್ಸನ್ನು ಸೂರೆಗೊಂಡಿದ್ದವು.

ಕನ್ನಡ ಸಾಹಿತ್ಯದ ಬಹುಭಾಗ ಜೊಳ್ಳೇ ತುಂಬಿದೆಯೆಂದು ವಿಷಾದದಿಂದ ಹೇಳುತ್ತಿದ್ದರು. ಪಾಠದ ಮಧ್ಯೆ ಬೇಂದ್ರೆಯವರ ಅನೇಕ ಆಸಕ್ತಿಗಳು, ಕಾರಂತರ ಸಿಟ್ಟು ಮತ್ತು ತೇಜಸ್ವಿಯವರ ಕಾಡಿನ ಪ್ರೇಮದ ಬಗ್ಗೆ ಓತಪ್ರೋತವಾಗಿ ಮಾತಾಡುತ್ತಿದ್ದರು. ಬಹುಶಃ ನನ್ನ ಲಂಕೇಶ್ ಹುಚ್ಚು ಆಗಿನಿಂದಲೇ ಶುರುವಾಗಿತ್ತು.

ಪ್ರೊ. ರಾಜು ಎಲೆಮರೆಯ ಕಾಯಿಯಂತೆ (ನಿಜ ಅರ್ಥದಲ್ಲಿ) ಕನ್ನಡ ಕಟ್ಟುವ ಕೆಲಸ ಮಾಡುತ್ತಿದ್ದರು. ಅನೇಕ ಯುವಕರಿಂದ ಪುಸ್ತಕ ಬರೆಸಿ, ಕಾಲೇಜಿನ ಕನ್ನಡ ಸಂಘದಿಂದ ಪ್ರಕಟಿಸುತ್ತಿದ್ದರು. ಕನ್ನಡ ಪ್ರೇಮ ಹೊಟ್ಟೆಪಾಡಿನ, ಪುಂಡು ಪೋಕರಿಗಳ ಪಾಲಾಗಿರುವ ಇಂದಿನ ಸಂದರ್ಭದಲ್ಲಿಯೇ ಪ್ರೊ. ರಾಜುರವರ ಅಗಲಿಕೆ ನಾಡಿಗಾದ ನಷ್ಟ.

■ ಪ್ರೊ. ಪ್ರಕಾಶ ಬಿಸ್ವಾಗರು
ಬೆಂಗಳೂರು


ಜನತೆಯ ಸಂಗಾತಿ ಶ್ರೀನಿವಾಸ ಕುಮಾರ್‌ಗೆ ವಿದಾಯ....



ತುಮಕೂರಿನ ಸಮಾಜವಾದಿ ಮಿತ್ರ ಶ್ರೀನಿವಾಸ್ ಕುಮಾರ್ ತೀರಿಕೊಂಡಿದ್ದಾರೆ. ಕನ್ನಡ ನಾಡಿನ ಜನರ ಕಷ್ಟ ಕಾರ್ಪಣ್ಯಗಳ ಬಗ್ಗೆ ಸದಾ ಕಳವಳ ಪಡುತ್ತಾ ಏನಾದರೂ ಚಟುವಟಿಕೆ ನಡೆಸಿಕೊಂಡೇ ಬದುಕಿದ ಶ್ರೀನಿವಾಸ್ ಕುಮಾರ್ 80 ರ ದಶಕದ ರೈತ ಚಳವಳಿಯಲ್ಲಿ ರೂಪುತಳೆದ ಹೋರಾಟಗಾರ. ರೈತ ಹೋರಾಟದಲ್ಲಿ ಸಕ್ರಿಯವಾಗಿರುವಾಗಲೇ ತನ್ನ ಗೆಳೆಯ ನಟರಾಜಪ್ಪನವರೊಂದಿಗೆ ಸೇರಿ ಆ ಹೋರಾಟದ ಚೌಕಟ್ಟನ್ನು ದಲಿತ-ದಮನಿತ ಸಮುದಾಯದವರನ್ನು ಒಳಗೊಳ್ಳುವ ಚಳವಳಿಯಾಗಿ ಬೆಳೆಸುವ ಕನಸು ಕಂಡಿದ್ದರು ಶ್ರೀನಿವಾಸ್ ಕುಮಾರ್. ತನ್ನ ಬದುಕಿನ ಬಹುತೇಕ ಅಮೂಲ್ಯ ವರ್ಷಗಳನ್ನು ನಿರ್ವಂಚನೆಯಿಂದ ಜನತೆಯ ಒಳಿತಿಗಾಗಿ ಸವೆಸಿದ ಶ್ರೀನಿವಾಸ್ ಕುಮಾರ್ ಒಂದು ವಿಜನ್ ಇದ್ದ ಚಿಂತಕ. ಮಧುಗಿರಿಯ ಹಿತಕ ದಿಬ್ಬನಹಳ್ಳಿಯ ಸಾಮಾನ್ಯ ರೈತ ಕುಟುಂಬದಲ್ಲಿ ಹುಟ್ಟಿದ ಶ್ರೀನಿವಾಸ್ ಕುಮಾರ್ ತಾನು ಕೆಲಸ ಮಾಡಿದ್ದ ಯಾವೆಲ್ಲಾ ಹೋರಾಟಗಳು ನಿಷ್ಕ್ರಿಯವಾದರೂ ತಾನು ಮಾತ್ರ ಸಾಮಾಜಿಕ ಬದಲಾವಣೆಗಳ ಪರ ಕೊನೇ ದಿನದವರೆಗೂ ನಿಷ್ಠನಾಗಿಯೇ ಉಳಿದಿದ್ದರು. ತನ್ನ ಪರಿಚಯದ ಪ್ರತಿಯೊಬ್ಬರಲ್ಲೂ ಕ್ರಿಯಾಶೀಲತೆ ಬೆಳೆಸಲು ಚಟಪಟಿಸುತ್ತಿದ್ದರು.

ಅಪ್ಪಟ ಮಾನವೀಯತೆಯ ಜನಪರ ಕಾಳಜಿಗಳ ಗೆಳೆಯ ಶ್ರೀನಿವಾಸ್ ಕುಮಾರ್‌ಗೆ ಕೃತಜ್ಞತೆಯ, ನೋವಿನ ವಿದಾಯ....

■ ಈಶ



60 ಅರವತ್ತರ ಅನಂತ

"ನನಗೆ ಈ ವರ್ಷ ಅರವತ್ತು ತುಂಬುತ್ತದೆ. ನನಗ್ಯಾಕೆ ರಾಜಕೀಯ; ನಾನು ನಟನೆಯಲ್ಲೇ ಸಂತೃಪ್ತನಾಗಿದ್ದೇನೆ" ಹೀಗೆ ವೇದಾಂತಿಯಂತೆ ಮೊನ್ನೆ ನುಡಿದವರು ನಟ ಅನಂತ್‌ನಾಗ್. ಸಾಧಾರಣವಾಗಿ ಚಿತ್ರೀಕರಣದ ಸ್ಥಳದಲ್ಲಿ ಪತ್ರಕರ್ತರೊಂದಿಗೆ ಮಾತನಾಡುವುದನ್ನು ಇಷ್ಟಪಡದ ಅನಂತ್‌ನಾಗ್ 'ಗಂಗಾಕಾವೇರಿ' ಸೆಟ್‌ನಲ್ಲಿ ಅಪರೂಪಕ್ಕೆಂಬಂತೆ ಮನಬಿಚ್ಚಿ ಮಾತನಾಡಿದರು.

"ದಳ-ಕಾಂಗ್ರೆಸ್ ಯಾವಾಗ ಅಪವಿತ್ರ ಮೈತ್ರಿ ಮಾಡಿಕೊಂಡು ಸರಕಾರ ರಚಿಸಿತೋ ಆ ದಿನವೇ ನನಗೆ ರಾಜಕೀಯದಲ್ಲಿ ಆಸಕ್ತಿ ಕಡಿಮೆಯಾಯ್ತು" ಎಂದು ಅನಂತ್‌ನಾಗ್ ತಮ್ಮ ನಿರಾಶೆಯನ್ನು ವ್ಯಕ್ತಪಡಿಸಿದರು.

ಅರವತ್ತು ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಮಹತ್ತರವಾದ ಘಟ್ಟ. ಆದ್ದರಿಂದ ನಟನಾಗಿ ಮತ್ತು ರಾಜಕಾರಣಿಯಾಗಿ ಅನಂತ್ ಸಾಗಿ ಬಂದ ಹಾದಿಯತ್ತ ಒಮ್ಮೆ ಗಮನ ಹರಿಸೋಣ.

ಅನಂತ್ ನಾಗ್ ಓರ್ವ ಅತ್ಯುತ್ತಮ ನಟ ಎಂಬುದರ ಬಗ್ಗೆ ಯಾವುದೇ ಅನುಮಾನಗಳಿಲ್ಲ, ಕಲಾತ್ಮಕ ಚಿತ್ರದಲ್ಲಿ ನಟನೆ, ಕಮರ್ಷಿಯಲ್ ಚಿತ್ರದ ಆಡಂಬರ ಮತ್ತು ಕಿರುತೆರೆಯ ನಂಟು.... ಹೀಗೆ ಎಲ್ಲೆಲ್ಲೂ ಸಲ್ಲುವ ಅನಂತ್ ನಾಗ್‌ಗೆ ನಟನೆ ಎಷ್ಟು ಮುಖ್ಯವೆಂದರೆ ಅದು ಸಿನಿಮಾ ಆಗಿದ್ದರೂ ಸೈ, ಟಿವಿ ಧಾರಾವಾಹಿ ಆಗಿದ್ದರೂ ಸೈ. ಈ ಕಾರಣದಿಂದಾಗಿಯೇ ನಾಯಕನಟನಾಗಿ ಅವರು ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗಲೂ ಸಹೋದರ ಶಂಕರ್‌ನಾಗ್ ನಿರ್ದೇಶಿಸಿದ್ದ 'ಮಾಲ್ಗುಡಿ ಡೇಸ್' ಎಂಬ ಟಿವಿ ಧಾರಾವಾಹಿಯಲ್ಲಿ ನಟಿಸಿದ್ದರು.

ಈಗಲೂ ಅವಕಾಶ ಸಿಕ್ಕಾಗ ಸಿನಿಮಾಗಳಲ್ಲಿ ನಟಿಸುವ ಅನಂತ್ ನಾಗ್ ಟಿವಿಯಲ್ಲೂ ಬ್ಯುಸಿ ಆಗಿದ್ದಾರೆ. ಈಟೀವಿಯಲ್ಲಿ ಪ್ರಸಾರವಾಗುತ್ತಿರುವ 'ಪ್ರೀತಿ ಇಲ್ಲದ ಮೇಲೆ'. ಧಾರಾವಾಹಿಯ ಮುಖಾಂತರ ನಿತ್ಯವೂ ಕೋಟ್ಯಂತರ ವೀಕ್ಷಕರ ಹೃದಯವನ್ನು ತಟ್ಟುತ್ತಿರುವ ಅನಂತ್ ನಾಗ್ ಅದೆಷ್ಟು ಜನಪ್ರಿಯತೆ ಗಳಿಸಿದ್ದಾರೆಂದರೆ ಇದರ ತೆಲುಗು ಅವತರಣಿಕೆಯಲ್ಲೂ ಈ ಪಾತ್ರವನ್ನು ಅವರೇ ಮಾಡಬೇಕೆಂಬ ಒತ್ತಾಯ ಬಂತಂತೆ. ಅದಕ್ಕೆ ಅವರೀಗ ಶರಣಾಗಿದ್ದು ತೆಲುಗಿನಲ್ಲೂ ನಟಿಸುತ್ತಿದ್ದಾರೆ.

ನಮ್ಮ ಪತ್ರಿಕೆಯಲ್ಲಿ ತಮ್ಮ ಸಹೋದರ ಶಂಕರ್‌ನಾಗ್ ಬಗ್ಗೆ ಬರೆದ ಆತ್ಮಚರಿತ್ರೆ ಅವರ ಬರವಣಿಗೆಯ ಪ್ರತಿಭೆಯನ್ನು ಸಾಹಿತ್ಯ ಲೋಕಕ್ಕೆ ಪರಿಚಯಿಸಿತು.. ಅಷ್ಟೇ ಅಲ್ಲ ಆ ಬರವಣಿಗೆಗೆ ಸಾಹಿತ್ಯ ಪರಿಷತ್ತಿನ ಪ್ರಶಸ್ತಿಯೂ ದೊರೆಯಿತು.

ಮೊದಲಿನಿಂದಲೂ ರಾಜಕೀಯದ ಬಗ್ಗೆ ಆಸಕ್ತಿಹೊಂದಿದ್ದ ಅನಂತ್ ನಾಗ್ ರಾಮಕೃಷ್ಣ ಹೆಗ್ಡೆಯವರ ಅನುಯಾಯಿಯಾಗಿ ರಾಜಕೀಯಕ್ಕೆ ಇಳಿದರು. ಆರಂಭದ ದಿನಗಳಲ್ಲಿ ದಳದ ಪರವಾಗಿ ಚುನಾವಣೆಯ ಸಮಯದಲ್ಲಿ ಜನ ಸೇರಿಸುವ ಆಕರ್ಷಣೆಯ ಬೊಂಬೆಯಾಗಿದ್ದರು. ಆನಂತರ ಜೆ.ಎಚ್. ಪಟೇಲ್ ಕಾಲಾವಧಿಯಲ್ಲಿ ಮಂತ್ರಿಯೂ ಆದರು. ಮಂತ್ರಿಗಿರಿಯಿಂದ ಇಳಿದ ನಂತರ ಮತ್ತೆ ಮಾಮೂಲಿಯಂತೆ ಮುಖಕ್ಕೆ ಬಣ್ಣ ಹಚ್ಚಿ ವೃತ್ತಿಜೀವನದಲ್ಲಿ ತನ್ನನ್ನು ಸಂಪೂರ್ಣವಾಗಿ ತೊಡಗಿಸಿಕೊಂಡರು. ಕಳೆದ ಚುನಾವಣೆಯಲ್ಲಿ ಚಾಮರಾಜಪೇಟೆಯಿಂದ ಸ್ಪರ್ಧಿಸಿದರಾದರೂ ಅದರ ಫಲಿತಾಂಶ ಅವರು ನಟನೆಗೆ ಹಿಂದಿರುಗುವಂತೆ ಮಾಡಿತು.

ಅನಂತ್ ನಾಗ್ ಇವತ್ತೂ ಎಷ್ಟು ಲವಲವಿಕೆಯಿಂದ ಕೂಡಿದ್ದಾರೆಂದರೆ ಅವರು 60ರ ಗಡಿ ಸಮೀಪಿಸಿದ್ದಾರೆ ಎಂದು ಅನಿಸುವುದೇ ಇಲ್ಲ. ಇಂತಹ ಮಹಾನ್ ಪ್ರತಿಭೆಯ ಬಗ್ಗೆ ಈ ಅರವತ್ತರ ಸಂದರ್ಭದಲ್ಲಿ ಕೆಲವು ಚರ್ಚೆ, ಸಮಾರಂಭಗಳು ನಡೆದರೆ ಅರ್ಥಪೂರ್ಣವಾಗಿರುತ್ತದೆ. ಆದರೆ ಇವರಿಗೆ ಕೋಟ್ಯಂತರ ಅಭಿಮಾನಿಗಳಿದ್ದಾರೆ; ಆದರೆ ಅಭಿಮಾನಿ ಸಂಘವಿಲ್ಲ. ಹೀಗಾಗಿ ಇಂತಹ ಸಮಾರಂಭ ಯಾರು ಮಾಡಬೇಕು? ಇದು ಸದ್ಯಕ್ಕೆ ನಾವು ನಿಮ್ಮ ಮುಂದಿಡುವ ಪ್ರಶ್ನೆ. ■

ಚಾನೆಲ್ ಚರಿತ್ರೆ

ಈಗಾಗಲೇ ಆರು ಕೋಟಿ ಕನ್ನಡಿಗರಿಗೆ ಆರಕ್ಕಿಂತಲೂ ಹೆಚ್ಚು ಕನ್ನಡ ಟಿವಿ ಚಾನೆಲ್‌ಗಳಿವೆ. ಆದರೂ ಈ ವರ್ಷದಲ್ಲಿ ಇನ್ನೂ ನಾಲ್ಕೈದು ಟಿವಿ ಚಾನೆಲ್‌ಗಳು ತಲೆ ಎತ್ತಿ ಕನ್ನಡಿಗರ ತಲೆ ತಿನ್ನುವ ಸೂಚನೆಗಳು ಕಂಡುಬರುತ್ತಿವೆ.

ಈಗಿರುವ ಟಿವಿ ಚಾನೆಲ್‌ಗಳಲ್ಲಿ ಉದಯ ಟಿವಿಯನ್ನು 'ಮಾಸ್' ಜನರಿಗೆಂದು, ಈಟಿವಿ ಚಾನೆಲ್‌ಅನ್ನು ಕ್ಲಾಸ್ ಜನರಿಗೆಂದು ಜನರೇ ವರ್ಗೀಕರಿಸಿರುವಂತಿದೆ. ಈ ಮಧ್ಯೆ ಝೀ ಟಿವಿ ಮತ್ತು ಸುವರ್ಣ ತಮ್ಮ ಅಸ್ತಿತ್ವವನ್ನು ಸ್ಥಾಪಿಸಲು ಯತ್ನಿಸುತ್ತಿದ್ದರೆ, ಟಿವಿ 9 ಚಿಕ್ಕ ಸುದ್ದಿಗಳನ್ನೂ ದೊಡ್ಡ ಸುದ್ದಿ ಎಂಬಂತೆ ತೋರಿಸುತ್ತ ಟಿಆರ್‌ಪಿ ರೇಟಿಂಗ್‌ಅನ್ನು ಹೆಚ್ಚಿಸಲು ನೋಡುತ್ತಿದೆ. ಇನ್ನು ಕಸ್ತೂರಿ ಚಾನೆಲ್ ಕನ್ನಡದ ಡಿಂಡಿಮ ಬಾರಿಸುತ್ತಲೇ ಇದೆ.


ಈ ಎಲ್ಲ ಗದ್ದಲಗಳ ನಡುವೆ ಸ್ಟಾರ್ ಕನ್ನಡ, ರಾಜ್ ಕನ್ನಡ, ರಿಲಯನ್ಸ್, ಸೋನಿ, ವಿಜಯ ಸಂಕೇಶ್ವರರ ಆನಂದ ಟಿವಿ ಮತ್ತು ಡಿ.ಕೆ. ಶಿವಕುಮಾರ್‌ರವರ ಜೈಹಿಂದ್ ಚಾನಲ್‌ಗಳೂ ಬರಲು ಅಣಿಯಾಗುತ್ತಿವೆ.

ಸಂಕೇಶ್ವರರ ಆನಂದ



ಸಂಕೇಶ್ವರರು ಯಾವುದಾದರೂ ಸಂಸ್ಥೆಯನ್ನು ಹುಟ್ಟು ಹಾಕುವುದೂ ಒಂದೇ, ಪೌಲ್ಟ್ರಿ ಫಾರಂ ನಡೆಸುವುದೂ ಒಂದೇ. ಪೌಲ್ಟ್ರಿಗಳಲ್ಲಿ ಕೋಳಿಗಳನ್ನು ಸಾಕಿ ಕೊಬ್ಬಿದ ನಂತರ ಅವನ್ನು ಮಾರಾಟ ಮಾಡುವಂತೆ ಸಂಕೇಶ್ವರರೂ ತಾವು ಬೆಳೆಸಿದ ಸಂಸ್ಥೆಯನ್ನು ದುಡ್ಡಿನ ಧಣಿಗಳಿಗೆ ಮಾರುವುದು ಅವರ ಹ್ಯಾಬಿಟ್ಟು ಮತ್ತು ಬಿಜಿನೆಸ್ಸು. ಇದಕ್ಕೆ ಅವರು ಕಟ್ಟಿ ಬೆಳೆಸಿ ನಂತರ ಮಾರಿಕೊಂಡ ವಿಜಯ ಕರ್ನಾಟಕ ಪತ್ರಿಕೆಯೇ ಸಾಕ್ಷಿ. ಆದ್ದರಿಂದ ಇವರ ಟಿವಿ ಚಾನೆಲ್ ಬಂದರೂ ಅದೆಷ್ಟು ದಿನ ಅವರಿಗೂ, ಕನ್ನಡಿಗರಿಗೂ 'ಆನಂದ' ನೀಡುತ್ತದೆಂಬುದನ್ನು ಕಾದು ನೋಡಬೇಕಷ್ಟೇ.

ಡಿಕೇಶಿಯ ಜೈಹಿಂದ್



ಈಗಾಗಲೇ ಕೇರಳದಲ್ಲಿ ಪ್ರಸಾರವಾಗುತ್ತಿರುವ 'ಜೈಹಿಂದ್' ಚಾನಲ್ ಹೇಳಿ ಕೇಳಿ ಕಾಂಗ್ರೆಸ್ ಪಕ್ಷದ ಚಾನೆಲ್. ಇದನ್ನು ಕರ್ನಾಟಕಕ್ಕೆ ತರಲು ಡೀಕೇಶಿ ತಯಾರಿ ನಡೆಸುತ್ತಿದ್ದಾರೆ. ಆದ್ದರಿಂದ ಈ ಚಾನೆಲ್ ಕಾಂಗ್ರೈಗಳ ಚಾನೆಲ್ ಆಗುತ್ತದೆಯೇ ಹೊರತು ಕನ್ನಡಿಗರ ಚಾನೆಲ್ ಆಗುವುದು ಸ್ವಲ್ಪ ಡೌಟೇ.

ಟಿವಿ 9 ಇಂಪ್ಯಾಕ್ಟ್


ದಿನದ ಇಪ್ಪತ್ತನಾಲ್ಕು ಗಂಟೆಗಳ ಕಾಲ ಸುದ್ದಿ ನೀಡುವ ಟಿವಿ-9 ಸ್ವಲ್ಪ ಫೇಮಸ್ ಆಗುತ್ತಿದ್ದಂತೆ ಇತರೆ ಚಾನೆಲ್‌ಗಳಿಗೆ ಸ್ಫೂರ್ತಿ ನೀಡಿರುವಂತಿದೆ. ಈಗ 'ಈಟೀವಿ ನ್ಯೂಸ್', 'ಸುವರ್ಣ ನ್ಯೂಸ್' ಎಂಬ ಪ್ರತ್ಯೇಕ ಸುದ್ದಿ ವಾಹಿನಿಗಳೂ ಆರಂಭವಾಗುತ್ತಿವೆ. ಆದರೆ ಅದೆಷ್ಟು ಜನ ದಿನವಿಡೀ ಸುದ್ದಿಯನ್ನೇ ನೋಡುತ್ತಾರೆ ಎಂಬುದೇ ಯಕ್ಷಪ್ರಶ್ನೆಯಾಗಿದೆ.

ವಾಸ್ತವವಾಗಿ ಈ ಎಲ್ಲ ಚಾನೆಲ್‌ಗಳು ತಮ್ಮ ಅಸ್ತಿತ್ವಕ್ಕಾಗಿ ಆಧರಿಸಿರುವುದು ಜಾಹೀರಾತುಗಳು ತರುವ ಆದಾಯವನ್ನು. ಆದರೆ ಇಷ್ಟೊಂದು ಚಾನೆಲ್‌ಗಳು ಬಂದರೆ ಜಾಹೀರಾತುಗಳೆಲ್ಲ ಅವುಗಳ ನಡುವೆ ಹಂಚಿಹೋಗಿ ಕೊನೆಗೆ ಅವೆಷ್ಟು ಉಳಿದುಕೊಳ್ಳುತ್ತವೆ ಎಂಬ ಪ್ರಶ್ನೆಯ ಬಗ್ಗೆ ಈ ಟಿವಿ ಚಾನೆಲ್‌ಗಳನ್ನು ಪ್ರಾರಂಭಿಸಲು ಹೊರಟಿರುವವರು ಯೋಚಿಸಿದಂತಿಲ್ಲ......

ಸಿಕ್ಕಿಬಿದ್ದ ಸುಳ್ಳುಬುರುಕ!

'ಪ್ರೀತಿ ಏಕೆ ಭೂಮಿ ಮೇಲಿದೆ' ಎಂಬ ಚಿತ್ರ ಬಿಡುಗಡೆಯಾದ ಮೊದಲ ದಿನವೇ ಕರ್ನಾಟಕಾದ್ಯಂತ ಮಕಾಡೆ ಮಲಗಿಬಿಟ್ಟಿದೆ. ಆದರೂ ಅದರ ನಾಯಕನಟ ಮತ್ತು ನಿರ್ದೇಶಕ ಪ್ರೇಮ್ "ಈ ಚಿತ್ರ ಸೂಪರ್ ಹಿಟ್ ಆಗಿದೆ" ಎಂದು ಪದೇ ಪದೇ ಹೇಳುವುದನ್ನು ನಿಲ್ಲಿಸಿಲ್ಲ. ಮಾತ್ರವಲ್ಲ ಮೊನ್ನೆ ಪತ್ರಿಕಾಗೋಷ್ಠಿ ಕರೆದು ಪತ್ರಕರ್ತರಿಗೆ ಲೆಕ್ಕ ನೀಡಿದರು! ಆದರೆ ಆತ ಲೆಕ್ಕ ನೀಡುತ್ತಿರುವಾಗ ನಿರ್ಮಾಪಕ ಅಶ್ವಿನಿ ರಾಮ್ ಪ್ರಸಾದ್ ತಲೆಕೆಳಗೆ ಮಾಡಿ 'ಭೂಮಿ'ಯನ್ನು ನೋಡುತ್ತಾ ಇದ್ದದ್ದು ವಿಚಿತ್ರವಾಗಿತ್ತು.

"ಕೆಲವು ಪತ್ರಿಕೆಗಳು ಮತ್ತು ನನ್ನ ಏಳ್ಗೆಯನ್ನು ಸಹಿಸದ ಗಾಂಧಿನಗರದ ಜನ ಈ ಚಿತ್ರ ಸೋತಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ" ಎಂದು ಪ್ರೇಮ್ ಹೇಳಿದಾಗ, ಅವರು ಜೋಕ್ ಮಾಡುತ್ತಿದ್ದಾರೆಂದು ಭಾವಿಸಿದ ಪತ್ರಕರ್ತರೆಲ್ಲರೂ ನಗಲು ಶುರು ಮಾಡಿದರು. ಅದಕ್ಕಿಂತಲೂ ದೊಡ್ಡ ಜೋಕ್ ಆಗಿರುವುದು "ಝೀ ಟೀವಿಯವರು ಈ ಚಿತ್ರವನ್ನು 1.8 ಕೋಟಿಗೆ ಖರೀದಿಸಿದ್ದಾರೆ" ಎಂದು ಪ್ರೇಮ್ ಹೇಳಿದ್ದ ಮಾತು.



ಪ್ರೇಮ್ ಹೀಗೆ ಹೇಳಿದ ಮರುದಿನವೇ ಎಲ್ಲ ಪತ್ರಿಕಾ ಕಚೇರಿಗಳಿಗೆ ಝೀ ಟೀವಿಯ ಪತ್ರ ತಲುಪಿತು. "ನಾವು ಆ ಚಿತ್ರವನ್ನು ಅಷ್ಟು ಬೆಲೆ ಕೊಟ್ಟು ಖರೀದಿಸಿಲ್ಲ" ಎಂಬುದೇ ಪತ್ರದ ಸಾರಾಂಶವಾಗಿತ್ತು, ವಾಸ್ತವವಾಗಿ ಈ ಚಿತ್ರವನ್ನು ಕೇವಲ 52 ಲಕ್ಷ ಕೊಟ್ಟು ಝೀನವರು ಖರೀದಿಸಿದ್ದು ಎಲ್ಲರಿಗೂ ಗೊತ್ತಿರುವ ವಿಷಯ.

"ಸುಳ್ಳೇ ಸುಳ್ಳು" ಎಂಬ ಹಾಡು ಬರೆದ ಪ್ರೇಮ್ ಸುಳ್ಳು ಹೇಳುತ್ತಿರುವುದು ವಿಚಿತ್ರವಾಗಿದೆ.

'ಕರೆಂಟ್' ಹೊಡೆಸಿಕೊಂಡ ಪತ್ರಕರ್ತರು

'ಶುಕ್ರ' ದಂತಹ ವಕ್ರ ಸಿನಿಮಾ ತೆಗೆದು ಪ್ರೇಕ್ಷಕರಿಗೆ ಹುಚ್ಚು ಹಿಡಿಸಿದ್ದ ನಿರ್ದೇಶಕ ಮುದ್ದುರಾಜ್ ಈಗ 'ಕರೆಂಟ್' ಎಂಬ ಚಿತ್ರವನ್ನು ಮಾಡುವ ಮೂಲಕ ಎಲ್ಲರಿಗೂ ಶಾಕ್ ಹೊಡೆಸಲು ಹೊರಟಿದ್ದಾರೆ.

ಇವರ ಈ 'ದೇವರ ಚಿತ್ರಕ್ಕೆ' ಇಲ್ಲಿನ ಸೆನ್ಸಾರ್ ಮಂಡಳಿಯವರು ತಗಾದೆ ಎತ್ತಿದಾಗ, ಕೇಂದ್ರ ಸೆನ್ಸಾರ್ ಮಂಡಳಿಯ ಟ್ರಿಬ್ಯೂನಲ್ ಬಳಿ ಹೋಗಿ 'ಎ' ಸರ್ಟಿಫಿಕೇಟ್ ತಂದಿರುವ ಮುದ್ದುರಾಜ್ ಇದನ್ನೇ ಒಂದು ಸಾಧನೆಯೆಂಬಂತೆ ಚಿತ್ರದ ಜಾಹೀರಾತುಗಳಲ್ಲಿ ಘೋಷಿಸಿಕೊಂಡಿದ್ದಾರೆ. ಅಷ್ಟೇ ಅಲ್ಲ, ಈ ಪೋಲಿ ಚಿತ್ರವನ್ನು ಪತ್ರಕರ್ತರು ವಿಮರ್ಶಿಸಲಿ ಎಂದೂ ಅವರನ್ನೆಲ್ಲ ಕರೆದಿದ್ದರಲ್ಲದೆ ಅವರೆಲ್ಲ ತನ್ನನ್ನು ಅಭಿನಂದಿಸುತ್ತಾರೆ ಎಂದು ಕಾದಿದ್ದರಂತೆ.


ಆದರೆ ಮುದ್ದುರಾಜ್ ದುರಾದೃಷ್ಟವೋ ಅಥವಾ ಈ ಚಿತ್ರವನ್ನು ನೋಡುವ ಧೈರ್ಯ ಮಾಡಿದ ಪತ್ರಕರ್ತರ ದುರಂತವೋ ಗೊತ್ತಿಲ್ಲ. ಯಾಕೆಂದರೆ ಕತೆ, ಚಿತ್ರಕತೆ, ಸಂಭಾಷಣೆ ಇವ್ಯಾವೂ ಇಲ್ಲದ ಆದರೆ ಬರೀ 'ಶಬ್ಧ'ದ ಸಂಗೀತವೇ ಇರುವ ಈ ಚಿತ್ರವನ್ನು ನೋಡಿ ಪತ್ರಕರ್ತರು ಕರೆಂಟ್ ಹೊಡೆಸಿಕೊಂಡವರಂತೆ ಸಿನಿಮಾ ಮುಗಿಯುತ್ತಿದ್ದಂತೆ ಅಲ್ಲಿಂದ ಓಡಿ ಹೋಗಿದ್ದಾರೆ!

ಹೇಳಿಕೇಳಿ ಅದು ಕೆಂಪೇಗೌಡ ಥೇಟ್ರು! ಯಾರಾದರೂ ತಮ್ಮನ್ನು ಅಲ್ಲಿ ನೋಡಿದರೆ ಏನುಗತಿ? ಎಂಬ ಚಿಂತೆ ಈ ಧೈರ್ಯಶಾಲಿ ಪತ್ರಕರ್ತರನ್ನು ಕಾಡಿರಬೇಕು!!

'ಗಾಳಿಪಟ'ದೊಂದಿಗೆ 'ಹೊಂಗನಸು'

ಮುಂದಿನವಾರ ಗಾಂಧಿನಗರದಲ್ಲಿ ಹೊಸದೊಂದು ಮಿನಿ ಸ್ಟಾರ್‌ವಾರ್ ಆರಂಭವಾಗಲಿದೆ. ಯಾಕೆಂದರೆ, ಯೋಗರಾಜ್ ಭಟ್ ನಿರ್ದೇಶನದ 'ಗಾಳಿಪಟ' ಮತ್ತು ರತ್ನಜಾ ನಿರ್ದೇಶನದ 'ಹೊಂಗನಸು' ಒಂದೇ ದಿನ ಬಿಡುಗಡೆಯಾಗಲಿದ್ದು ನಾಲ್ಕು ಜನರ ನಡುವೆ ಪೈಪೋಟಿ ನಡೆಯಲಿದೆ.

ಒಂದೆಡೆ 'ಮುಂಗಾರು ಮಳೆ' ಅದೃಷ್ಟದಿಂದ ಓಡಿದ್ದಲ್ಲ, ತನ್ನಲ್ಲಿ ನಿಜವಾಗಿಯೂ ಪ್ರತಿಭೆ ಇದೆ ಎಂಬುದನ್ನು ಸಾಬೀತುಪಡಿಸಲು 'ಗಾಳಿಪಟ'ವನ್ನು ಎತ್ತರಕ್ಕೆ ಹಾರಿಸಬೇಕಾದ ಅನಿವಾರ್ಯತೆ ಭಟ್ಟರಿಗೆ. ಇನ್ನೊಂದೆಡೆ ಎರಡು ವರ್ಷಗಳ ಹಿಂದೆ 'ನೆನಪಿರಲಿ' ಎಂಬ ಚಿತ್ರದ ಮುಖಾಂತರ ಕನ್ನಡ ಚಿತ್ರರಂಗದ ದಿಗಂತದಲ್ಲಿ ಕಾಣಿಸಿಕೊಂಡ ರತ್ನಜ ಎಂಬ ನಿರ್ದೇಶಕ ಈಗ 'ಹೊಂಗನಸು' ಎಂಬ ಚಿತ್ರದೊಂದಿಗೆ ಬರುತ್ತಿದ್ದು ಅವರು ಸಹ ತಮ್ಮಲ್ಲಿ ಫ್ರೆಶ್‌ನೆಸ್ ಇದೆ ಎಂಬುದನ್ನು ಸಾಬೀತುಪಡಿಸಬೇಕಿದೆ.



ಇವರಿಬ್ಬರಲ್ಲದೆ, ಈ ಚಿತ್ರಗಳ ಹೀರೋಗಳಿಗೂ ಇದೊಂದು ಅಗ್ನಿಪರೀಕ್ಷೆಯಾಗಲಿದೆ. 'ಗಾಳಿಪಟ'ದ ಗಣೇಶನಿಗೆ ಮತ್ತೊಂದು ಹಿಟ್ ನೀಡುವ ಜವಾಬ್ದಾರಿ ಇದ್ದರೆ, 'ಹೊಂಗನಸು' ಚಿತ್ರದ ಪ್ರೇಮ್‌ಗೆ ಇದು ಅಳಿವು ಉಳಿವಿನ ಪ್ರಶ್ನೆಯಾಗಿದೆ. ಈ ಚಿತ್ರ ಗೆದ್ದರೆ ಮಾತ್ರ ಆತ ಕನ್ನಡ ಚಿತ್ರರಂಗದಲ್ಲಿ ಉಳಿಯುತ್ತಾನೆ. ಇಲ್ಲವೆಂದರೆ ಮನೆಗೆ ಹೋಗುತ್ತಾನೆ ಎಂಬ ಮಾತು ಗಾಂಧಿನಗರದಿಂದ ಕೇಳಿಬರುತ್ತಿದೆ.

ಒಟ್ಟಿನಲ್ಲಿ ಚಿತ್ರಗಳು ಬಿಡುಗಡೆಯಾಗಿ ಪ್ರೇಕ್ಷಕ ತನ್ನ ತೀರ್ಪು ನೀಡುವವರೆಗೂ ಈ ನಾಲ್ಕು ಜನರಿಗೆ ಜಾಗರಣೆಯೋ ಜಾಗರಣೆ!

R B P LANKESH, Kannada Weekly Price Rs. 10/- 23-1-2008 RNI No. KARKAN2005/14648 Regd.No.KA/RNP/BGS/2036/2008-10 Posted at : Basavanagudi, B'lore-4



ಜೋಧಾ ಅಕ್ಬರ್

ಆತ ಮೊಘಲ್ ದೊರೆ. ಆಕೆ ರಜಪೂತ ರಾಜಕುಮಾರಿ. ಇವರಿಬ್ಬರ ನಡುವಿನ ಪ್ರೇಮ ಮತ್ತು ದಾಂಪತ್ಯ ಜೀವನ ಹೇಗಿದ್ದಿರಬಹುದು? ಈ ಪ್ರಶ್ನೆಗೆ ಉತ್ತರ ನೀಡಲಿದ್ದಾರೆ ಆಸ್ಕರ್ ಪ್ರಶಸ್ತಿಗಾಗಿ ಸ್ಪರ್ಧಿಸಿದ್ದ 'ಲಗಾನ್' ಖ್ಯಾತಿಯ ನಿರ್ದೇಶಕ ಅಶುತೋಶ್ ಗೌರೀಕರ್. ಅವರ 'ಜೋಧಾ ಅಕ್ಬರ್' ಚಿತ್ರದಲ್ಲಿ ಮೊಘಲ್ ರಾಜನಾಗಿ ಹೃತಿಕ್ ರೋಷನ್, ರಜಪೂತರ ರಾಜಕುಮಾರಿಯಾಗಿ ಐಶ್ವರ್ಯ ರೈ ನಟಿಸಿದ್ದು ಮುಂದಿನ ತಿಂಗಳು ಬಿಡುಗಡೆಗೊಳ್ಳಲಿದೆ.


ಆದರೆ ನಿಜವಾಗಲೂ ಅಕ್ಬರ್ ದೊರೆ ಒರ್ವ ಹಿಂದೂ ರಾಜಕುಮಾರಿಯನ್ನು ಮದುವೆಯಾಗಿದ್ದನೇ? ಆಕೆಯ ಹೆಸರು ಜೋಧಾ ಬಾಯಿ ಆಗಿತ್ತೆ ಎಂಬುದರ ಬಗ್ಗೆ ಇತಿಹಾಸಕಾರರು ವಿಭಿನ್ನ ನಿಲುವುಗಳನ್ನು ಹೊಂದಿದ್ದಾರೆ. ಹಲವರ ಪ್ರಕಾರ "ಅಕ್ಬರನಿಗೆ ಜೋಧಾ ಬಾಯಿ ಎಂಬ ಪತ್ನಿಯೇ ಇರಲಿಲ್ಲ, ಅಂತಹ ಒಂದು ಕಲ್ಪನೆ ಹುಟ್ಟಿಕೊಂಡಿದ್ದು ಅರವತ್ತರ ದಶಕದಲ್ಲಿ ತುಂಬಾ ಜನಪ್ರಿಯವಾಗಿದ್ದ 'ಮೊಘಲ್ ಎ-ಆಜಂ' ಎಂಬ ಚಿತ್ರದಿಂದಾಗಿ. ಯಾಕೆಂದರೆ ಆ ಚಿತ್ರದಲ್ಲಿ ಅಕ್ಬರನ ಮಡದಿಯ ಹೆಸರನ್ನು ಜೋಧಾ ಬಾಯಿ ಎಂದು ಇಡಲಾಗಿತ್ತು."

ವಾಸ್ತವವಾಗಿ ಅಕ್ಬರನು ಹೀರಾ ಕುನ್ವರಿ ಎಂಬ ರಜಪುತ್ ರಾಜಕುಮಾರಿಯನ್ನು ಮದುವೆಯಾಗಿದ್ದ. ಆಕೆ ಆತನ ಮೂರನೇ ಪತ್ನಿಯಾಗಿದ್ದರೂ ಅವಳ ಬಗ್ಗೆ ಆತನಿಗೆ ವಿಶೇಷ ಪ್ರೀತಿ ಇತ್ತು. ಅನ್ಯ ಧರ್ಮಗಳ ಬಗ್ಗೆ ಅಪಾರ ಸಹನೆ ಹೊಂದಿದ್ದ ಅಕ್ಬರ್ ಮದುವೆಯ ನಂತರವೂ ಹೀರಾ ಕುನ್ವರಿ ಹಿಂದೂ ಧರ್ಮವನ್ನೇ ಪಾಲಿಸಲು ಅನುಮತಿನೀಡಿದ್ದ. ಆನಂತರ ಅಕ್ಬರ್ 'ದಿನ್ ಈ-ಇಲಾಹಿ' ಎಂಬ ಧರ್ಮವನ್ನು ಸ್ಥಾಪಿಸಿದಾಗ ಆಕೆಗೆ ಮರಿಯಂ ಜಮಾನಿ ಎಂದು ಹೆಸರಿಟ್ಟ. ಆ ಹೆಸರಿನ ಅರ್ಥ 'ವಿಶ್ವದ ಮೇರಿ' ಎಂದು. ಆಕೆಗೆ ಜನಿಸಿದ ಜಹಾಂಗೀರ್ ಎಂಬ ಪುತ್ರನೇ ಅಕ್ಬರ್ ನಂತರ ಸಿಂಹಾಸನವನ್ನು ಏರಿದ.

ಅದ್ದೂರಿಯಾಗಿ ಮೂಡಿಬಂದಿರುವ ಈ ಸಿನಿಮಾ ಎಲ್ಲೆಡೆ ಅಪಾರ ಕುತೂಹಲ ಕೆರಳಿಸಿದೆಯಲ್ಲದೆ, ಪ್ರಸ್ತುತ ಸಮಾಜಕ್ಕೆ ಕೋಮು ಸೌಹಾರ್ದದ ಬಗ್ಗೆ ಹಲವು ಪಾಠಗಳನ್ನೂ ನೀಡಬಹುದೆಂಬ ನಿರೀಕ್ಷೆ ಇದೆ.

16ಜನರ ಕುಣಿತ

ರಾಜೇಂದ್ರಸಿಂಗ್‌ಬಾಬು ನಿರ್ದೇಶನದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರದ ಒಂದು ಹಾಡಿಗಾಗಿ ಅಂಬರೀಶ್, ದರ್ಶನ್, ಜಗ್ಗೇಶ್, ಆದಿತ್ಯ, ರಮೇಶ್.... ಹೀಗೆ ಕನ್ನಡ ಚಿತ್ರರಂಗದ ಒಟ್ಟು ಹದಿನಾರು ನಾಯಕನಟರು ಕುಣಿಯುತ್ತಿದ್ದಾರಂತೆ. ಎರಡು ದಿನ ನಡೆಯುವ ಇದರ ಚಿತ್ರೀಕರಣಕ್ಕಾಗಿ



ವಿಶೇಷವಾದ ಸೆಟ್‌ಅನ್ನು ಕೂಡ ನಿರ್ಮಿಸಿದ್ದಾರಂತೆ. ಇತ್ತೀಚೆಗೆ ತಾನೆ ಬಿಡುಗಡೆಗೊಂಡು ಯಶಸ್ವಿಯಾಗಿ ಪ್ರದರ್ಶನಗೊಳ್ಳುತ್ತಿರುವ ಹಿಂದಿಯ 'ಓಂ ಶಾಂತಿ ಓಂ' ಚಿತ್ರದಲ್ಲಿ ಕೂಡ ಒಂದು ಹಾಡಿನಲ್ಲಿ ಬಾಲಿವುಡಿನ ಬಹುತೇಕ ನಟನಟಿಯರು ಕುಣಿದು ಕುಪ್ಪಳಿಸಿದ್ದರು.

ಕನ್ನಡ ಚಿತ್ರರಂಗದಲ್ಲೂ ಇಂತಹ ಬೆಳವಣಿಗೆ ಆರೋಗ್ಯಪೂರ್ಣ ಎನಿಸುತ್ತದೆ. ಸೋತು ಕಂಗಾಲಾಗಿರುವ ಹಿರಿಯ ನಿರ್ದೇಶಕ ಬಾಬುವಿನ ಬೆನ್ನು ತಟ್ಟುವಂಥ ಕೆಲಸ ಇದಾಗಿದೆ. ಮತ್ತು ಚಿತ್ರರಂಗದ ಒಗ್ಗಟ್ಟನ್ನು ಸಾರುವಂತಿದೆ.

ರೋಬೋ ರಜನಿ!

ಸೂಪರ್ ಸ್ಟಾರ್ ರಜನೀಕಾಂತ್‌ರ ಮುಂದಿನ ಚಿತ್ರ 'ರೋಬೋ'ಗೆ ಬರೋಬ್ಬರಿ ನೂರು ಕೋಟಿ ರೂಪಾಯಿಗಳು ಖರ್ಚಾಗಲಿದೆಯಂತೆ. ಭಾರತದಲ್ಲಿ ಇಷ್ಟೊಂದು ಮೊತ್ತವನ್ನು ಒಂದೇ ಚಿತ್ರಕ್ಕೆ ಸುರಿದ ಉದಾಹರಣೆ ಇಲ್ಲ. ಈ ಚಿತ್ರ ಏಕಕಾಲದಲ್ಲಿ ಹಿಂದಿ, ತಮಿಳು ಮತ್ತು ತೆಲುಗಿನಲ್ಲಿ ನಿರ್ಮಾಣವಾಗುತ್ತಿದ್ದು ನಂತರ ಇಂಗ್ಲಿಷ್, ಚೈನೀಸ್ ಮತ್ತು ಜಪಾನಿ ಭಾಷೆಗಳಿಗೆ ಡಬ್ ಆಗಲಿದೆಯಂತೆ.



ಈಗಾಗಲೇ ಹಲವಾರು ಹಿಟ್ ಚಿತ್ರಗಳನ್ನು ನೀಡಿರುವ ನಿರ್ದೇಶಕ ಶಂಕರ್‌ಗೆ ಈ ಚಿತ್ರ ತಮ್ಮ ಜೀವನದ ಕನಸಿನ ಚಿತ್ರವಂತೆ. ಮೊದಲು ಕಮಲಹಾಸನ್‌ರನ್ನು ಮನಸ್ಸಿನಲ್ಲಿಟ್ಟುಕೊಂಡು ಇದರ ಚಿತ್ರಕತೆಯನ್ನು ಹೆಣೆದಿದ್ದರೂ ಅದೀಗ ರಜನಿ ಪಾಲಾಗಿದೆ. ತಮ್ಮ ವಿಭಿನ್ನ ಆಂಗಿಕ ನಟನೆಯಿಂದ ಪ್ರಪಂಚದಾದ್ಯಂತ ಅಪಾರ ಅಭಿಮಾನಿಗಳನ್ನು ಹೊಂದಿರುವ ರಜನಿಯನ್ನು ರೋಬೋ ಪಾತ್ರದಲ್ಲಿ ಜನ ಮತ್ತಷ್ಟು ಇಷ್ಟ ಪಡುತ್ತಾರೆ ಎಂಬುದು ಶಂಕರ್ ಅಭಿಪ್ರಾಯ.



ಅಯಂಗ್ರನ್ ಇಂಟರ್‌ನ್ಯಾಷನಲ್ ಮತ್ತು ಎರೋಸ್ ಮಲ್ಟಿಮಿಡಿಯಾ ಬ್ಯಾನರಿನಡಿಯಲ್ಲಿ ಬರುತ್ತಿರುವ ಈ ಸಿನಿಮಾದ ಟೆಕ್ನಿಕಲ್ ಟೀಮ್ ಕೂಡಾ ರಜನೀಕಾಂತರ ಎಲ್ಲ ಚಿತ್ರಗಳಂತೆ ದೊಡ್ಡ ಮಟ್ಟದ್ದಾಗಿದೆ. ಚಿತ್ರದ ಛಾಯಾಗ್ರಾಹಕರಾಗಿ ಯಂಗ್ ಮತ್ತು ಕ್ರಿಯೇಟಿವ್ ಕ್ಯಾಮೆರಾಮನ್ ನಿವಾಸ್ ಶಾ ಆಯ್ಕೆಯಾಗಿದ್ದಾರೆ. ಮಲಯಾಳಂನ 'ಕಾಲಾಪನಿ' ಚಿತ್ರದಿಂದ ಹಿಡಿದು ಹಿಂದಿಯ 'ಧೂಂ-2', ತಮಿಳಿನ 'ಪೋಕಿರಿ'ಯಂತಹ ಯಶಸ್ವಿ ಚಿತ್ರಗಳಿಗೆ ಕ್ಯಾಮೆರಾ ಹಿಡಿದಿರುವ ಈತ 'ರೋಬೋ'ನನ್ನು ಡಿಫರೆಂಟಾಗಿ ತೋರಿಸುವುದರಲ್ಲಿ ಸಂಶಯವಿಲ್ಲ. ಮಣಿರತ್ನಂರ್ ಹಲವಾರು ಚಿತ್ರಗಳಿಗೆ ಕಲಾನಿರ್ದೇಶಕರಾಗಿ ಕೆಲಸ ಮಾಡಿರುವ ಸಾಬು ಸಿರಿಲ್ ಕೂಡ 'ರೋಬೋ' ತಂಡದಲ್ಲಿದ್ದಾರೆ.



ಶಾರುಖ್ ಅಥವಾ ಅಮೀರ್?



'ರೋಬೋ'ದಲ್ಲಿ ರಜನಿ ಜೊತೆ ಸಾತ್ ನೀಡುವ ವಿಶೇಷ ಪಾತ್ರವೊಂದರಲ್ಲಿ ನಟಿಸುವುದಕ್ಕೆ ಶಾರುಖ್ ಖಾನ್‌ಗೆ ಆಫರ್ ನೀಡಲಾಗಿದೆ. ಆದರೆ ಬಾಲಿವುಡ್ ಬಾದ್‌ಶಾ ಖಾನ್ ಯಾಕೋ ಒಲ್ಲೆ ಅನ್ನುತ್ತಿದ್ದಾನಂತೆ. ಒಂದು ವೇಳೆ ಶಾರುಖ್ ಒಪ್ಪದಿದ್ದರೆ ಆ ಜಾಗಕ್ಕೆ ಅಮೀರ್ ಬರುವ ಸಾಧ್ಯತೆ ಇದೆಯಂತೆ.

ದೀಪಿಕಾ ದೌಲತ್ತು!

ಕನ್ನಡದ ಚೆಲುವೆ ದೀಪಿಕಾ ಪಡುಕೋಣೆ ಮಾಡೆಲಿಂಗ್ ಜಗತ್ತಿನಿಂದ ಸಿನಿಮಾಲೋಕಕ್ಕೆ ಹಾರಿ ಈಗ 'ಓಂ ಶಾಂತಿ ಓಂ' ಮೂಲಕ ಬಾಲಿವುಡ್ ಅನ್ನು ಮೋಡಿ ಮಾಡಿದ್ದಾಳೆ. ಈಕೆ 'ರೋಬೋ'ದ ನಾಯಕಿಯಾಗಿ ಆಯ್ಕೆಯಾಗಿದ್ದಾಳಲ್ಲದೆ, ಆ ಪಾತ್ರವನ್ನು ನಿರ್ವಹಿಸಲು ತನಗೆ ಒಂದು ಕೋಟಿ ರೂಪಾಯಿಗಳನ್ನು ಸಂಭಾವನೆಯಾಗಿ ನೀಡಬೇಕು ಅಂದಿದ್ದಾಳಂತೆ. ಚಿತ್ರಕ್ಕೇ ನೂರು ಕೋಟಿ ವೆಚ್ಚ ಮಾಡುತ್ತಿರುವವರಿಗೆ ಈ ಚಂದದ ಗೊಂಬೆಗೆ ಒಂದು ಕೋಟಿ ಕೊಡುವುದೇನು ಕಷ್ಟವಲ್ಲ ಬಿಡಿ.



ದೀಪಿಕಾ

ಕನ್ನಡದಲ್ಲಿನ ರೋಬೋ ಪ್ರಯೋಗ

ಇದುವರೆಗೆ ಹಲವಾರು ಇಂಗ್ಲಿಷ್ ಚಿತ್ರಗಳು ರೋಬೋ ಯಂತ್ರಗಳನ್ನೇ ಹೀರೋ ರೀತಿ ಬಿಂಬಿಸಿ, ಅವುಗಳಲ್ಲಿ ಕೆಲವು ಹಿಟ್ ಕೂಡ ಆಗಿದ್ದವು. ಆದರೆ ಅಂತಹ ತಂತ್ರಜ್ಞಾನ ಹೊಂದಿರದ ಕರ್ನಾಟಕದಲ್ಲಿ ಮನುಷ್ಯರನ್ನೇ ರೋಬೋಗಳಂತೆ ಬಿಂಬಿಸಲಾಗಿತ್ತು, ಉದಾಹರಣೆಗೆ, ನಾಲ್ಕು ವರ್ಷಗಳ ಹಿಂದೆ ಕನ್ನಡದಲ್ಲಿ ತಯಾರಾಗಿದ್ದ 'ಹಾಲಿವುಡ್' ಚಿತ್ರದಲ್ಲಿ ನಿರ್ದೇಶಕ ದಿನೇಶ್ ಬಾಬು ಇಂತಹ ಒಂದು ಪ್ರಯೋಗ ಮಾಡಿದ್ದರು. ಆ ಚಿತ್ರದಲ್ಲಿ ವಿಜ್ಞಾನಿಯೊಬ್ಬ (ಅನಂತ್‌ನಾಗ್) ನಿರ್ಮಿಸಿದ ಮನುಷ್ಯಾಕಾರದ ರೋಬೋ (ಉಪೇಂದ್ರ)ನಿಂದಾಗುವ ಅವಾಂತರಗಳನ್ನು ತೋರಿಸಲಾಗಿತ್ತು. ಆದರೆ ಉಪೇಂದ್ರರನ್ನು ರೋಬೋ ರೂಪದಲ್ಲಿ ಸ್ವೀಕರಿಸಲು ಅವರ ಅಭಿಮಾನಿಗಳು ಸಿದ್ಧರಿರಲಿಲ್ಲವಾದ್ದರಿಂದ ಚಿತ್ರ ಬಾಕ್ಸ್ ಆಫೀಸಿನಲ್ಲೂ ನೆಲಕಚ್ಚಿತ್ತು.



ಆದರೆ ಮೂರ್‍ನಾಲ್ಕು ಕೋಟಿ ಖರ್ಚು ಮಾಡಿದ್ದ ಕನ್ನಡದ ಚಿತ್ರವೆಲ್ಲಿ? ನೂರು ಕೋಟಿ ಸುರಿಯಲು ಮುಂದಾಗಿರುವ ರಜನಿಯ 'ರೋಬೋ' ಎಲ್ಲಿ?

ಒಟ್ಟಾರೆ 2007 ರಲ್ಲಿ 'ಶಿವಾಜಿ' ಮೇನಿಯಾ ಹುಟ್ಟುಹಾಕಿದ್ದ ರಜನಿ 2008ರ ಅಂತ್ಯದಲ್ಲಿ 'ರೋಬೋ' ಮೇನಿಯಾ ಸೃಷ್ಟಿಸುತ್ತಾರೆಂಬುದಂತೂ ಸತ್ಯ.

■ ಅರುಣ್.ಜಿ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-